
ಸಂಪುಟ 24 ಸಂಚಿಕೆ 14
ಏಪ್ರಿಲ್ 7 , 2002 ಬೆಲೆ ರೂ. 3.00

ಐಕ್ಯರಂಗ

ದುಡಿವ ಜನರ ಪ್ರಾಣಮಿತ್ರ



ರಾಜಕೀಯ ಪರ್ಯಾಯಕ್ಕಾಗಿ ಪ್ರಬಲ ಜನಾಂದೋಲನ

POTA ಎಂಬ ಭಯೋತ್ಪಾದಕ ಕಾನೂನು

ಬಿಜೆಪಿ: ಕಚ್ಚಾಟ-ಉಚ್ಚಾಟನೆ

'ಮೋದಿ ನೀನು ಅಪರಾಧಿ'
- ನ್ಯಾ. ಜೆ.ಎಸ್.ವರ್ಮಾ

ಗುಜರಾತ್ ಹತ್ಯಾಕಾಂಡ

ಕಾಂಗ್ರೆಸ್ ಮತ್ತೆ ಹೋಳು

ಮಾಸದ ನೆನಪುಗಳು
(ಒಂದು ರಾಜಕೀಯ ಆತ್ಮಕಥನ)



ಜ್ಯೋತಿಬಸು ಆತ್ಮಕಥನ

ಕನ್ನಡಕ್ಕೆ: ವಿಶ್ವಕುಂದಾಪುರ

ಧಾರವಾಹಿ: 92

ಶ್ರೀಮಂತರನ್ನು ಇನ್ನಷ್ಟು ಶ್ರೀಮಂತರನ್ನಾಗಿ ಮಾಡುವುದು ನಮ್ಮ ಪ್ರಯತ್ನಗಳ ಉದ್ದೇಶವಲ್ಲ. ನಮ್ಮ ಯಶಸ್ಸಿನ ಫಲವನ್ನು ಜನಸಾಮಾನ್ಯರಿಗೆ ತಲುಪಿಸುವುದು ಗುರಿ. ಸ್ವಾವಲಂಬನೆ ನೀತಿಯ ಆಧಾರದಲ್ಲಿ ಸಮತೋಲಿತ ಆರ್ಥಿಕತೆಯನ್ನು ರೂಪಿಸುವುದು ನಮ್ಮ ಉದ್ದೇಶ. ಈ ರೀತಿಯಾಗಿ ನಾವು ಹೊಸ ಆರ್ಥಿಕ ನೀತಿಯನ್ನು ರಾಜಕೀಯವಾಗಿ ವಿರೋಧಿಸುತ್ತೇವೆ. ಅದೇ ವೇಳೆಗೆ ಜನರ ಕಲ್ಯಾಣಕ್ಕಾಗಿ ಸಾಧ್ಯವಾದ ಎಲ್ಲಾ ಅವಕಾಶಗಳನ್ನು ಬಳಸಿಕೊಳ್ಳುತ್ತೇವೆ.

ಕಾಂಗ್ರೆಸ್ ಕುಣಿತ

ಕಾಂಗ್ರೆಸ್‌ನ ಹಗರಣಗಳು ಮುಂದುವರಿದವು. ಆರೋಗ್ಯ ಸಚಿವ ಶಂಕರಾನಂದ ಭಾರತ ತೈಲ ಅಭಿವೃದ್ಧಿ ಮಂಡಳಿಯಿಂದ (ಓ.ಐ.ಡಿ.ಬಿ) 132 ಕೋಟಿ ರೂಪಾಯಿ ನುಂಗಿ ಹಾಕಿದ್ದಾರೆ ಎಂಬ ಆರೋಪಕ್ಕೆ ಗುರಿಯಾದರು. ಬೋಫೋರ್ಸ್ ಹಗರಣವನ್ನು ಮುಚ್ಚಿಹಾಕುವ ಉದ್ದೇಶದಿಂದ ರಚಿಸಲಾದ ಸಂಸದೀಯ ಸಮಿತಿಗೆ ಇದೇ ವ್ಯಕ್ತಿಯನ್ನು ಅಧ್ಯಕ್ಷರನ್ನಾಗಿ ನೇಮಿಸಲಾಗಿತ್ತು. ಪ್ರತಿಪಕ್ಷಗಳು ಆ ಸಮಿತಿಯನ್ನು ಬಹಿಷ್ಕರಿಸಿದ್ದವು. ಹೆಚ್ಚುತ್ತಿರುವ ಟೀಕೆಯ ಹಿನ್ನೆಲೆಯಲ್ಲಿ ಶಂಕರಾನಂದ ರಾಜೀನಾಮೆ ನೀಡಿದರು. ಡಿಸೆಂಬರ್ 22 ರಂದು ಅವರು ಮಾತ್ರವಲ್ಲದೆ ಗ್ರಾಮೀಣ ಅಭಿವೃದ್ಧಿ ರಾಜ್ಯಸಚಿವ ರಾಮೇಶ್ವರ ಠಾಕೂರ್ ಮತ್ತು ಆಹಾರ-ನಾಗರಿಕ ಸರಬರಾಜು ಸಚಿವ ಕಲ್ಪನಾಥರಾಯ್ ಕೂಡ ಪದತ್ಯಾಗ ಮಾಡಿದರು.

ಡಿಸೆಂಬರ್ 22 ರಂದು ಬಂಗಾಳದಲ್ಲಿ ಬಂದ್ ನಡೆಸಲು ಕಾಂಗ್ರೆಸ್ ಕರೆ ನೀಡಿತು. ಅದರ ಹಿಂದಿನ ದಿನ ಶಾಸಕರ ಭವನದಲ್ಲಿ ಫಾರ್ವರ್ಡ್ ಬ್ಲಾಕ್ ಶಾಸಕ ರಮ್ಜಾನ್ ಅಲಿಯುವರನ್ನು ಕೊಲೆ ಮಾಡಲಾಯಿತು. ಇದರ ಹಿಂದೆ ರಾಜಕೀಯ ಉದ್ದೇಶವಿತ್ತು ಎಂಬುದಕ್ಕೆ ಒಂದಿಷ್ಟು ಮೇಲ್ನೋಟದ ಸಾಕ್ಷಿ ಇರಲಿಲ್ಲ. ಆದರೆ ಕಾಂಗ್ರೆಸ್ ಎಂದಿನಂತೆ ತನ್ನ ತಂತ್ರವನ್ನು ಅನುಸರಿಸಿತು. ಹೇಮಂತ್ ಬೋಸ್ ಹತ್ಯೆಗೆ ಸಿಪಿಐ(ಎಂ) ಹೊಣೆ ಎಂದು ಇದೇ ಪಕ್ಷ ಆರೋಪಿಸಿತ್ತು. ಆಲಿ ಹತ್ಯೆಗೂ ಸಿಪಿಐ(ಎಂ) ಹೊಣೆ ಎಂದು ಆರೋಪಿಸಿದ ಕಾಂಗ್ರೆಸ್ ಅದನ್ನು ಪ್ರತಿಭಟಿಸಲೆಂದು ಬಂದ್‌ಗೂ ಕರೆನೀಡಿತು. ಶಾಸಕನ ಪತ್ನಿಯೇ ಆಲಿಯವರ ಕೊಲೆಯ ಹಿಂದೆ ಇದ್ದರು ಎಂಬುದು ಅನಂತರ ಪೊಲೀಸ್ ತನಿಖೆಯಿಂದ ಗೊತ್ತಾಯಿತು. ಆದರೂ ಕಾಂಗ್ರೆಸ್ ತನ್ನ ತಪ್ಪನ್ನು ಒಪ್ಪಿಕೊಳ್ಳಲಿಲ್ಲ.

ಆಂಧ್ರಪ್ರದೇಶ, ಕರ್ನಾಟಕ, ಗೋವಾ ಮತ್ತು ಸಿಕ್ಕಿಂ ವಿಧಾನಸಭೆಗಳಿಗೆ 1994 ಡಿಸೆಂಬರ್‌ನಲ್ಲಿ ನಡೆದ ಚುನಾವಣೆಗಳ ನಂತರ ಕಾಂಗ್ರೆಸ್ ತೀರಾ ದುರ್ಬಲವಾಯಿತು. ಆಂಧ್ರ, ಕರ್ನಾಟಕದಲ್ಲಿ ಅದು ಸೋತಿತು. ಎನ್.ಟಿ. ರಾಮರಾವ್‌ರ ತೆಲುಗು ದೇಶಂ ಪಕ್ಷ ಮುಕ್ಕಾಲು ಬಹುಮತದೊಂದಿಗೆ ಜಯಭೇರಿ ಬಾರಿಸಿತು. ಸಿಪಿಐ (ಎಂ) ಮತ್ತು ಸಿಪಿಐ ಅದರ ಮಿತ್ರಪಕ್ಷಗಳಾಗಿದ್ದವು. ನಾವು 16 ಕ್ಷೇತ್ರಗಳಲ್ಲಿ ಸ್ಪರ್ಧಿಸಿ 15ರಲ್ಲಿ ಗೆದ್ದೆವು. ಆಂಧ್ರ ಚುನಾವಣೆ ಪ್ರಚಾರದಲ್ಲಿ ನಾನು ಭಾಗವಹಿಸಿದೆ. 1995ರಲ್ಲಿ ಎನ್.ಟಿ.ಆರ್. ಅಳಿಯ ಚಂದ್ರಬಾಬು ನಾಯ್ಡು ಬಂಡಾಯವೆದ್ದಿದ್ದರಿಂದ ತೆಲುಗುದೇಶಂನಲ್ಲಿ ಸಮಸ್ಯೆ ಉಂಟಾಯಿತು. ಎನ್.ಟಿ.ಆರ್. ಬಣ ಅಲ್ಪಮತಕ್ಕಿಳಿದು ಅವರು ರಾಜಿನಾಮೆ ನೀಡಬೇಕಾಯಿತು. ನಾಯ್ಡು ಮುಖ್ಯಮಂತ್ರಿ ಯಾದರು. ಎನ್.ಟಿ.ಆರ್. ಆಗ ತೀವ್ರ ಅಸ್ವಸ್ಥರಾಗಿದ್ದರು. 1996 ಜನವರಿ 16 ರಂದು ನಿಧನರಾದರು. ಬಿಕ್ಕಟ್ಟಿನ ವೇಳೆ ನಾವು ನಾಯ್ಡು ಜತೆಗಿದ್ದರೂ ಜನತಾದಳ ಎನ್.ಟಿ.ಆರ್.ರನ್ನು ಬೆಂಬಲಿಸಿತು. ಎನ್.ಟಿ.ಆರ್. ನನ್ನನ್ನು ಹೈದರಾಬಾದ್‌ಗೆ ಆಮಂತ್ರಿಸಿದ್ದರು. ನಾನು ತಿರಸ್ಕರಿಸಿದೆ. ಅನಂತರ, ಸಂಯುಕ್ತರಂಗ ಸರಕಾರ ರಚನೆಯಲ್ಲಿ ನಾಯ್ಡು ಒಂದು ಮಹತ್ವದ ಪಾತ್ರ ನಿರ್ವಹಿಸಿದರು.

ಕರ್ನಾಟಕದಲ್ಲಿಯೂ ಕಾಂಗ್ರೆಸ್ ಸೋತಿತು. ಜನತಾದಳ ಅಧಿಕಾರಕ್ಕೆ ಬಂತು. ಎಚ್.ಡಿ. ದೇವೇಗೌಡ ಮುಖ್ಯಮಂತ್ರಿಯಾದರು.

ಅಯೋಧ್ಯೆ ವಿಚಾರದಲ್ಲಿ ಸರಕಾರವನ್ನು ಬಹಿರಂಗವಾಗಿ ಟೀಕಿಸುತ್ತಿದ್ದ ಅರ್ಜುನ್‌ಸಿಂಗ್ ಡಿಸೆಂಬರ್ 24 ರಂದು ಸಚಿವಸ್ಥಾನಕ್ಕೆ ರಾಜಿನಾಮೆ ನೀಡಿದರು. ಇದರಿಂದ ಪರಿಸ್ಥಿತಿ ಇನ್ನಷ್ಟು ಹದಗೆಟ್ಟಿತು. ಅವರನ್ನು ಜನವರಿ 24 ರಂದು ಪಕ್ಷದಿಂದ ಅಮಾನತು ಮಾಡಲಾಯಿತು. 15 ದಿನಗಳ ನಂತರ ಉಚ್ಚಾಟಿಸಲಾಯಿತು. ಕೆಲವೇ ದಿನಗಳಲ್ಲಿ ಹಿರಿಯ ಕಾಂಗ್ರೆಸಿನ ಎನ್.ಡಿ. ತಿವಾರಿ ಕೂಡ ರಾಜಿನಾಮೆ ಕೊಟ್ಟು ಸಿಂಗ್ ಜತೆಸೇರಿ ಪರ್ಯಾಯ ಕಾಂಗ್ರೆಸ್ ರಚಿಸಿದರು. ಹೊಸದಾಗಿ ರಚಿತವಾದ ಕಾಂಗ್ರೆಸ್ (ತಿವಾರಿ) ಪಕ್ಷ ಮುಂದಿನ ಚುನಾವಣೆಗಳಲ್ಲಿ ಸ್ಪರ್ಧಿಸಿತು. ಅದು ಕಾಂಗ್ರೆಸನ್ನು ಒಡೆದರೂ ಅದು ಪಕ್ಷದ ಮೇಲೆ ಹೆಚ್ಚಿನ ಪರಿಣಾಮ ಬೀರಲಿಲ್ಲ. ಆದರೆ 1995ರಲ್ಲಿ ಉದ್ದಕ್ಕೂ ರಾವ್ ಸರಕಾರವನ್ನು ಆತಂಕದ ಮಡುವಿಗೆ ಬೀಳಿಸುವಲ್ಲಿ ಅದು ಯಶಸ್ವಿಯಾಗಿದ್ದು ಮಾತ್ರ ನಿಜ.

(ಮುಂದುವರಿಯುತ್ತದೆ)

ಕಳೆದ ಸಂಚಿಕೆಯಲ್ಲಿ ಕೇಂದ್ರ ಸರ್ಕಾರದ ಸಕ್ಕರೆ ಹಗರಣ, ಕಾರ್ಮಿಕರ ಮುಷ್ಕರ, ಜೈಲು ಭರ್ತಿ ಚಳುವಳಿ, ಬಂಗಾಳದಲ್ಲಿ ಕೈಗಾರಿಕಾ ಬೆಳವಣಿಗೆ ನಿರ್ಣಯ, ಈಶಾನ್ಯ ರಾಜ್ಯಗಳ ಬಗೆಗಿನ ಕೇಂದ್ರದ ಮಲತಾಯಿಧೋರಣೆ ಈ ಬಗ್ಗೆ ಓದಿರುವಿರಿ. ಈ ಸಂಚಿಕೆಯಲ್ಲಿ ಮುಂದುವರಿದ ಕಾಂಗ್ರೆಸ್ ಸರ್ಕಾರದ ಹಗರಣಗಳು, ಕೋಟಿ ರೂ. ನುಂಗಿದ ಆರೋಪ ಬಿ.ಶಂಕರಾನಂದರ ಮೇಲೆ, ಸಚಿವರಾದ ಶಂಕರಾನಂದ, ರಾಮೇಶ್ವರ ಠಾಕೋರ್, ಕಲ್ಪನಾಥ ರಾಯ್ ರಾಜೀನಾಮೆ. ಮುಂದೆ ಓದಿ

ಅಪರೂಪದ ಗುಣಗಳ ಸಿ.ಆರ್ ಭಟ್: ನೆನಪು

ವಿಜೆಕೆ ನಾಯರ್



ಅಗಲಿದ ಸಂಗಾತಿ ಸಿ.ಆರ್.ಭಟ್‌ರವರ ಕುರಿತು ನೆನಪುಗಳನ್ನು ಹಂಚಿಕೊಂಡಿದ್ದಾರೆ ಸಿ.ಪಿ.ಐ.(ಎಂ)ನ ರಾಜ್ಯ ಸೆಕ್ರೆಟರಿಯೇಟ್ ಸದಸ್ಯರೂ, ಸಿ.ಐ.ಟಿ.ಯುವಿನ ಪ್ರಧಾನ ಕಾರ್ಯದರ್ಶಿಗಳೂ ಹಲವು ದಶಕಗಳ ನಿಕಟ ಒಡನಾಡಿದ ಕಾಂ. ವಿಜೆಕೆ ನಾಯರ್‌ರವರು.

ತುರ್ತು ಪರಿಸ್ಥಿತಿಯ ಪೂರ್ವದಲ್ಲಿ ಸಿ.ಆರ್ ಭಟ್‌ರೊಂದಿಗೆ ನನ್ನ ಮೊದಲ ಬೇಟಿಯಾಯಿತು. "ಸಾಮಾಜಿಕ ಬದಲಾವಣೆಯಲ್ಲಿ ಸಾಂಸ್ಕೃತಿಕ ಚಳುವಳಿಯ ಪಾತ್ರ" ಕುರಿತು ವಿಷಯ ಮಂಡಿಸಲೆಂದು, ನನ್ನ ಆಹ್ವಾನದ ಮೇರೆಗೆ ಬೆಂಗಳೂರಿಗೆ ಅವರು ಬಂದಿದ್ದರು. ಬರಹಗಾರರು ಮತ್ತು ಓದುಗರ ವೇದಿಕೆ ಸಂಘಟಿಸಿದ್ದ ಈ ವಿಚಾರ ಸಂಕಿರಣದಲ್ಲಿ. ಅವರು ಆರ್.ಚಂದ್ರ ಎಂಬ ಹೆಸರಿನಲ್ಲಿ ವಿಷಯ ಮಂಡಿಸಿದರು. ಕರ್ನಾಟಕದಲ್ಲಿ ಸಾಮಾಜಿಕ ಬದಲಾವಣೆ ತರಲೆಂದು ಉತ್ಸಾಹದಿಂದ ಅಂದಿನ ದಿನಗಳಲ್ಲಿ ದುಡಿಯುತ್ತಿದ್ದ ಎಮ್.ಕೆ.ಭಟ್ ಸೂಚಿಸಿದ್ದ ಹೆಸರುಗಳಲ್ಲಿ ಇವರು ಒಬ್ಬರಾಗಿದ್ದರು.

ಇವರ ವಿಷಯ ಮಂಡನೆ ಅಲ್ಲಿ ನೆರೆದಿದ್ದ ಅನೇಕರನ್ನು ಪ್ರಭಾವಿಸಿತು. **ಮಾರ್ಕ್ಸ್‌ವಾದಿ ಶೃಂಗಾರಶಾಸ್ತ್ರ ಹಾಗೂ ತತ್ವಗಳ** ಮೇಲಿನ ಅವರ ಹಿಡಿತ ಪ್ರೌಢಿಮೆ, ಸಾಹಿತ್ಯಿಕ ಹಾಗೂ ಸಾಂಸ್ಕೃತಿಕ ರಂಗದೊಳಗೆ ಮಾರ್ಕ್ಸ್‌ವಾದಿ ದೃಷ್ಟಿಕೋನವನ್ನು ತೆಗೆದುಕೊಂಡು ಹೋಗಲು ಅವರಲ್ಲಿದ್ದ ಅಗಾಧ ಸಂಕಿರಣ ಸಹಕಾರಿಯಾಯಿತು.

ಅಖಿಲ ಭಾರತ ವಿಮಾ ನೌಕರರ ಸಂಘ (AIIEA)ದ ಚಳುವಳಿಯ ಕೊಡುಗೆ ಕಾಂ/ ಸಿ.ಆರ್.ರವರು, ಭಾರತೀಯ ಜೀವ ವಿಮಾ ನಿಗಮದ ಉಡುಪಿ ವಿಭಾಗವು, ಸಾಮೂಹಿಕವಾಗಿ ಬಹಳಷ್ಟು ಪ್ರಮುಖ ಸಂಗಾತಿಗಳನ್ನು ನಮ್ಮ ಚಳುವಳಿಗೆ ಕೊಡುಗೆಯಾಗಿ ನೀಡಿದೆ. ಅವರಲ್ಲಿ ಹೆಸರಿಸಬಹುದಾದವರು ಈ ಸಿ.ಆರ್.ಭಟ್, ಎ.ಎಸ್.ಆಚಾರ್ಯ, ಬಿ.ಮಾಧವ, ವಿಶ್ವನಾಥ್ ರೈರವರು. ಇದರಿಂದ ಅರಿಯಬೇಕಾದ ಅಂಶವೆಂದರೆ ಇಂತಹ ಸಂಗಾತಿಗಳ ಅಭಿವೃದ್ಧಿ ಬೆಳವಣಿಗೆ ಸಾಮೂಹಿಕ ಕಾರ್ಯಚಟುವಟಿಕೆಗಳ ಮೂಲಕ ಮಾತ್ರ ಪರಿಣಾಮಕಾರಿಯಾಗಲಿದೆ ಎಂಬುದಾಗಿದೆ.

ನನಗೆ ಬೇಟಿಯಾಗುವ ವೇಳೆಗಾಗಲೇ ಸಿ.ಆರ್.ಭಟ್ಟರು LICಯಲ್ಲಿ ಅಧಿಕಾರಿಯಾಗಿದ್ದರು. ಅಧಿಕಾರಿಯಾಗಬೇಕಾಗಿ ಬಂದಾಗ AIIEA ಯನ್ನು ಬಿಡಬೇಕಾಗುತ್ತದಲ್ಲ ಎಂದು, ಬಡ್ತಿಯನ್ನು ಸ್ವೀಕರಿಸಬೇಕೇ ಬೇಡವೇ ಎಂಬ ತೊಳಲಾಟವನ್ನು ಮುಂದಿಟ್ಟಿದ್ದರು. ಅವರು ಅಧಿಕಾರಿಯಾಗಿದ್ದ ಕಾರಣ ಆರ್.ಚಂದ್ರ ಹೆಸರಿನೊಂದಿಗೆ ನಮ್ಮ ನಡುವೆ ಕಾರ್ಯನಿರ್ವಹಿಸುತ್ತಿದ್ದರು.

ಮೊದಲು ಅವರು ಭದ್ರಾವತಿಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದರು. ಪಕ್ಷಕ್ಕೆ ಇದ್ದ ಅವರ ಬದ್ಧತೆ ಅವರನ್ನು ಭದ್ರಾವತಿಯಲ್ಲಿ ಸದಾ ಸಕ್ರಿಯವಾಗಿ ಇರಿಸಿತ್ತು, ಪ್ರಮುಖವಾಗಿ ಪಕ್ಷದ ಸಂಘಟನೆ ಹಾಗೂ ವಿಚಾರ ಸಂಕಿರಣ ಇತ್ಯಾದಿಗಳನ್ನು ಸಂಘಟಿಸುವಲ್ಲಿ ಸದಾ ಕ್ರಿಯಾಶೀಲರಾಗಿರುತ್ತಿದ್ದರು.

ಅವರು ಧಾರವಾಡಕ್ಕೆ ಬಂದಾಗ, ಇಂದಿನ 5 ಜಿಲ್ಲೆಗಳನ್ನು ಒಳಗೊಂಡ ವಿಶಾಲ ಪ್ರದೇಶಗಳಿಗೆ ಧಾರವಾಡದ ಪಕ್ಷದ ಸಮಿತಿಯ ಜವಾಬ್ದಾರಿ ವ್ಯಾಪಿಸಿತ್ತು. ಆಗ ಅಲ್ಲಿನ ಕಾರ್ಯದರ್ಶಿಯಾಗಿ ನಾನಿದ್ದೆ. ಧಾರವಾಡಕ್ಕೆ ಬಂದೊಡನೆ ಪಕ್ಷದ ಸಂಘಟನೆಗೆ ಸಂಬಂಧಿಸಿದ ಅನೇಕ ಸಮಸ್ಯೆಗಳನ್ನು ಪರಿಹರಿಸಲು ಸಿ.ಆರ್.ಭಟ್‌ರವರು ಸಹಾಯ ಹಸ್ತ ನೀಡಿದರು. AIIEA ಯ ವಿಭಾಗೀಯ ನಾಯಕತ್ವಕ್ಕೆ ಇವರೊಂದಿಗೆ ಇದ್ದ ಸಮಸ್ಯೆಗಳ ನಡುವೆಯೂ ಅವರು, ಈ ಕಾರ್ಯ ನಡೆಸಿದರು.

ಸಿ.ಆರ್.ಭಟ್ಟರು ಒಬ್ಬ ಅಧಿಕಾರಿಯಾಗಿ ಧಾರವಾಡ ವಿಭಾಗದಲ್ಲಿ ಹೇಗೆ ಕಾರ್ಯನಿರ್ವಹಿಸಬೇಕೋ ಹಾಗೆ ಕಾರ್ಯನಿರ್ವಹಿಸಿದರೆ ಹೊರತು, ವಿಭಾಗೀಯ AIIEA ನಾಯಕತ್ವ ನಿರೀಕ್ಷಿಸಿದ ರೀತಿಯಲ್ಲಿಯಲ್ಲಾ.


ನೀರಿನೊಳಗೆ ಮೀನು ಸೇರುವ ಹಾಗೆ, [illegible] ಚಳುವಳಿಯೊಂದಿಗೆ ಸೇರಿದರು. ಸದಾ ಸಕ್ರಿಯವಾಗಿದ್ದ ಅವರು ಸಾಕ್ಷರತಾ ಆಂದೋಲನದಲ್ಲಿ ಕ್ರಿಯಾಶೀಲರಾಗಿದ್ದರು, ಪಂಚಾಯತ್ ನೌಕರರನ್ನು ಸಂಘಟಿಸಲು ಪ್ರಮುಖ ಪಾತ್ರ ವಹಿಸಿದರು. ಅಂತೆಯೇ ಸಾಂಸ್ಕೃತಿಕ ಸಂಘಟನೆಯನ್ನು ಉಳಿಸಿ ಬೆಳೆಸಲು ಶ್ರಮಿಸಿದರು.

ಭಟ್ಟರವರು ಒಬ್ಬ ಬರಹಗಾರರು, ವರದಿಗಾರರು, ಹಾಗೂ ಉತ್ತಮ ವಿಷಯ ಮಂಡಕರು ಆಗಿದ್ದರು. ಅವರ ಸಾವಿನವರೆಗೂ ಅವರ ಲೇಖನಿಯಾಗಲಿ - ಮಾತಾಗಲಿ ಎಂದೂ ಮೌನವಾಗಿರಲಿಲ್ಲ. 17ನೇ ಮಹಾಧಿವೇಶನದ ಪೂರ್ವದ ಜಿಲ್ಲಾ ಸಮ್ಮೇಳನ ಸಂಘಟಿಸುವಲ್ಲಿ ಅವರ ಪಾತ್ರ ಮಹತ್ತರವಾದದ್ದು.

ಸಾಮೂಹಿಕ ಹಾಗೂ ವೈಯಕ್ತಿಕ ಪ್ರಯತ್ನದ ಭಾಗವಾಗಿ ಮಾರ್ಕ್ಸ್‌ವಾದಿಯಾಗಿ ವಿಕಸನಗೊಂಡ ಜೀವನದ ಉತ್ತಮ ಉದಾಹರಣೆಯಾಗಿ ಸಿ.ಆರ್.ಭಟ್ಟರ ನಿದರ್ಶನ ನಮ್ಮ ಮುಂದಿದೆ. **ಸಾಮಾಜಿಕ ಪರಿವರ್ತನೆಗೆ ಆ ವಲಯದಲ್ಲಿ ದುಡಿಯುತ್ತಿರುವ ಜನರಲ್ಲಿ ಕಾಣಬಹುದಾದ ಅಪರೂಪದ ಅಂಶವಾದ ಮೇಲಿನ ಉದಾಹರಣೆಯನ್ನು ನಾವು ಭಟ್ಟರಲ್ಲಿ ಗಮನಿಸಬಹುದು.**

ನಮ್ಮ ಚಿಂತನೆ ಹಾಗೂ ಚಟುವಟಿಕೆಗಳಲ್ಲಿ ಮಹತ್ತರ ಬದಲಾವಣೆ ತರಲಾಗದಿದ್ದರೂ ಅಂತಹ ಕೆಲವು ಯತ್ನಗಳನ್ನು ಸೃಷ್ಟಿಸಿದ ಸಂಗಾತಿಯಾಗಿ ಸಿ.ಆರ್. ಭಟ್ಟರನ್ನು ನಾವು ನೆನೆಯಬೇಕಿದೆ.

ಈವಾರ ಕರ್ನಾಟಕ ಒಂದು ನೋಟ



ಎಸ್.ವೈ.ಗುರುಶಾಂತ್

ಬಿಜೆಪಿ ಕಚ್ಚಾಟ-ಉಚ್ಚಾಟ

ಈಗ ಬಿಜೆಪಿಯ ಪಾಳಿಯದಲ್ಲಿ ತಳಮಳ. ಇದ್ದು ಬದ್ದ ಶಾಸಕರೂ ಬೇರೆಡೆಗೆ ವಲಸೆ ಹೋಗಬಹುದು ಎಂಬ ಕಳವಳ. ಹಲವಾರು ತಿಂಗಳು ಹಿಂದಿನಿಂದಲೇ ಸಿಡಿಯುತ್ತಿದ್ದ ಅಂತಂಕ ಕಿತ್ತಾಟ ರಾಜ್ಯ ಸಭೆಯ ಸದಸ್ಯತ್ವದ ಆಯ್ಕೆ ಸಂದರ್ಭದಲ್ಲಂತೂ ರಂಪಾಟವಾಗಿ ಹೊರಗೆ ಸಿಡಿದೇ ಬಿಟ್ಟಿತು. 40 ಶಾಸಕರ ಬಲ ಹೊಂದಿದ್ದೂ ರಾಜ್ಯಸಭೆಗೆ ತನ್ನ ಅಭ್ಯರ್ಥಿ ಡಿ.ಕೆ. ತಾರಾದೇವಿಯನ್ನು ಗೆಲ್ಲಿಸಿಕೊಳ್ಳದೇ, ತೀವ್ರ ಮುಖಭಂಗಕ್ಕೀಡಾದ ಬಿಜೆಪಿ ಅನಂತಕುಮಾರ್ ಸೇಡಂ ಬಣ ಈಗ ಅನ್ಯರ ಮೇಲೆಲ್ಲಾ ರಾಡಿ ಎರಚಲು ರಾಜ್ಯಾದ್ಯಂತ ಕಿರಿಚಾಡಿ ಮುಖ ಉಳಿಸಿಕೊಳ್ಳಲು ಯತ್ನಿಸುತ್ತಿದೆ. ಫಲಿತಾಂಶ ಪ್ರಕಟವಾದ ಬೆನ್ನಲ್ಲೆ ಆರು ಶಾಸಕರನ್ನು ಪಕ್ಷದಿಂದ ಉಚ್ಚಾಟಿಸಲಾಗಿದೆ. ಹೀಗೆ ಸೋಲಿನ ನೈತಿಕ ಹೊಣೆ ಹೊರಲು ತಯಾರಿಲ್ಲದ, ಆತ್ಮವಿಮರ್ಶೆಗೆ ಅವಕಾಶವೇ ಇಲ್ಲದ 'ದೊಣ್ಣೆ ನಾಯಕರ' ವರಸೆಗೆ ಇನ್ನೂ ಹಲವು ಬಂಡಾಯ ಶಾಸಕರು ಬಲಿಯಾಗಲಿದ್ದಾರೆಂಬ ಸುದ್ದಿ.

ಅವಧಿ ಮುಗಿದ ನಾಲ್ಕು ರಾಜ್ಯಸಭಾ ಸ್ಥಾನಗಳಿಗೆ ವಿಧಾನಸಭೆಯಿಂದ ಚುನಾವಣೆ ಮಾರ್ಚ್ 27 ರಂದು ನಡೆಯಿತು. ನಿರೀಕ್ಷಿಸಿದಂತೆ ಕಾಂಗ್ರೆಸ್ ಪಕ್ಷದ ಎಂ.ವಿ.ರಾಜಶೇಖರನ್, ಪ್ರೇಮಾ ಕಾರ್ಯಪ್ಪ, ಜನಾರ್ಧನ ಪೂಜಾರಿ ಆಯ್ಕೆಯಾದರು. ನಾಲ್ಕನೆಯ ಸ್ಥಾನಕ್ಕೆ ನಿಜವಾಗಿಯೂ ಭಾರೀ ಪೈಪೋಟಿ ಏರ್ಪಟ್ಟಿತು. ಬಿಜೆಪಿಯು ತಾರಾದೇವಿಯನ್ನು ಅಭ್ಯರ್ಥಿಯಾಗಿ ಇಳಿಸಿದರೆ, ಜನತಾ ದಳಗಳ ಉಭಯ ಬಣಗಳ ಹೊಂದದ ಉದ್ಯಮಿ ವಿಜಯ ಮಲ್ಯನನ್ನು ಬೆಂಬಲಿಸಿದವು. ಹೀಗಾಗಿ ಚುನಾವಣೆ ಸ್ಪರ್ದೆ ರಂಗೇರಿ, ಹಣಾಹಣಿ ಏರ್ಪಟ್ಟಿತು. ಈ ಮೊದಲೇ 14 ಶಾಸಕರು ಬಂಡಾಯದ ಕಹಳೆ ಊದಿ, ಇಬ್ಬರು ಉಚ್ಚಾಟನೆಗೊಂಡು-ಉಳಿದವರೊಂದಿಗೆ ಕೇಕೆ ಹಾಕಿ 'ಕಾಲು ಹಾಕಿದ' ಬಿಜೆಪಿ ನಾಯಕ ಮಣಿಗಳಿಗೆ ಅಭ್ಯರ್ಥಿ ಗೆಲ್ಲಿಸುವ ಆತ್ಮವಿಶ್ವಾಸ ಇರಲಿಲ್ಲ. ಆದ್ದರಿಂದಲೇ ಬಿಜೆಪಿಯ ಪ್ರತಿಯೊಬ್ಬ ಶಾಸಕರೂ ಇನ್ನೊಬ್ಬ ಶಾಸಕರಿಗೆ ತಮ್ಮ ಗುಪ್ತ ಮತದಾನದ ಪತ್ರ ತೋರಿಸಬೇಕು. ಮತದಾನಕ್ಕೆ ತೆರಳುವ ಮೊದಲು ಅಧ್ಯಕ್ಷ ಬಸವರಾಜ ಪಾಟಿಲ್ ಸೇಡಂರೊಂದಿಗೆ ಮಾತನಾಡಬೇಕು ಎಂಬಿತ್ಯಾದಿ 'ಅಸಂಬದ್ಧ' ನಿರ್ದೇಶನಗಳ ಫತ್ವಾ ಹೊರಡಿಸಿದ್ದರು. ಇವೆಲ್ಲವೂಗಳ ಜೊತೆಜೊತೆಯೇ 'ಲಾಭ'ಗಳು, ಕುದುರೆ ವ್ಯವಹಾರ, ಓಟ ನಡೆದೇ ಇದ್ದವು. ಹಾಗೂ ಹೀಗೂ ಜಾತಿಯ ಲೆಕ್ಕಾಚಾರದಲ್ಲಿ ಕೆಲವು ಮತಗಳನ್ನು ಕಾಂಗ್ರೆಸ್ ಜನತಾದಳಗಳಿಂದ ಹಿರಿಯುವ ದೂರಾಲೋಚನೆಯನ್ನು ಮಾಡಲಾಗಿತ್ತು. ಆದರೆ 34 ಮತಗಳನ್ನಷ್ಟೇ ಪಡೆದು ತಾರಾದೇವಿ ಸೋಲನ್ನನುಭವಿಸಬೇಕಾಯಿತು. ಇಷ್ಟೆಲ್ಲಾ ನಿರ್ಬಂಧ, ನಿಗಾಗಳಿದ್ದು ಬಿಜೆಪಿಯ 13 ಶಾಸಕರು 'ಸೇಡಂ'ನ್ನು ನೋಡದೇ ಕೈಕೊಟ್ಟರೆಂದು, ಮಲ್ಯನ ಎಂಜಲು ಕಾಸಿಗೆ ಮಾರಿಕೊಂಡರೆಂದು ದೂಷಿಸಿ ಅವರನ್ನು ಉಚ್ಚಾಟಿಸಲಾಗಿದೆ. ಆದರೆ ನಿಜವಾಗಿಯೂ ಬಿಜೆಪಿಯು ಆದಕ್ಕಿಂತಲೂ ಹೆಚ್ಚಿನ ಮತಗಳನ್ನು ಕಳೆದುಕೊಂಡಿದೆ. ಈಗಿನ ಅಂದಾಜಿನಂತೆ ತಾರಾದೇವಿಗೆ ಕಾಂಗ್ರೆಸ್ ಮತ್ತು ದಳದಿಂದ ತಲಾಮೂರು (ಒಟ್ಟು 6) ಶಾಸಕರು ಮತಾಂತರ ಗೊಂಡಿದ್ದಾರಂತೆ. ಈ ಹಿನ್ನೆಲೆಯಲ್ಲೇ ಉಚ್ಚಾಟಿತ ಆರೂ ಶಾಸಕರೂ ನಮ್ಮನ್ನೇಕೆ ಉಚ್ಚಾಟಿಸಿದಿರಿ ಉಳಿದವರನ್ನೆಲ್ಲಾ ಯಾಕಿಲ್ಲ ಎಂದು ಪ್ರಶ್ನಿಸುತ್ತಿದ್ದಾರೆ. ಬಿಜೆಪಿ ನಾಯಕತ್ವದ ವಿರುದ್ಧ ಬಂಡೆದ್ದಿರುವ ಎಲ್ಲಾ ಶಾಸಕರನ್ನು ಒಟ್ಟಿಗೆ ಉಚ್ಚಾಟಿಸಿ ಬಿಟ್ಟರೆ ಇರುವ 'ವಿರೋಧ ಪಕ್ಷದ' ಸ್ಥಾನ ಕಿತ್ತು ಹೋಗುವುದಲ್ಲ ಎಂಬ ಚಿಂತೆಯಿಂದ ಇಂತಹ ಜಾಣತನವಂತೆ. ಆದರೆ ಬಂಡಾಯಗಾರರು ಬೀದಿ ರಂಪಾಟಕ್ಕೆ ಸಜ್ಜಾಗಿ ಉಚ್ಚಾಟಿಸಿಕೊಳ್ಳಲು ಆಹ್ವಾನಿಸಿಕೊಳ್ಳುತ್ತಿದ್ದಾರೆ. ಹೀಗಾದರೆ ಕೊನೆಗೆ ತಮ್ಮ ಶಾಸಕತ್ವ ಉಳಿಸಿಕೊಳ್ಳುವ ಮತ್ತು ಬೇರೊಂದು ಪಕ್ಷಕ್ಕೆ ಸೇರಲು ರಹದಾರಿ ಮುಕ್ತವಾದಂತಾಗುವ ಲೆಕ್ಕಾಚಾರ.

ಈ ಶಾಸಕರದ್ದು ಒಂದೇ ಥಾಳಿ ತಮ್ಮನ್ನು ಕಡೆಗಣಿಸಿಲಾಗಿದೆ. ಆ ಕೇಂದ್ರ ಸಚಿವ ಅನಂತಕುಮಾರ್ ಇನ್ನೊಬ್ಬ ಸಚಿವ ಯಂಕಯ್ಯ ನಾಯ್ಡು' ರವರ ಸ್ವಾರ್ಥ, ಭ್ರಷ್ಟಾಚಾರ ತಾರಕಕ್ಕೇರಿದೆ. ಈಗ ಹೊಸದಾಗಿ ಹೊರಬಂದಿರುವ ಸಂಗತಿಯೆಂದರೆ ಬಿಜೆಪಿ ಕಟ್ಟಲು ಹಗಲಿರುಳೂ ಶ್ರಮಿಸಿದ್ದನೆನ್ನಲಾದ ಮಾಜಿ ಅಧ್ಯಕ್ಷ ಯಡಿಯೂರಪ್ಪನವರನ್ನೇ ಮೂಲೆಗೊತ್ತಾಗಿದೆ ಎಂಬುದು. ಅಂದರೆ ಅನಂತಕುಮಾರ್ ಯಡಿಯೂರಪ್ಪನವರ ಮಧುಚಂದ್ರದ ದಿನಗಳು ಕೊನೆಯಾಗಿ ಇತ್ತೀಚಿನ ಸಭೆಯಲ್ಲಿ ಇಬ್ಬರೂ ಮುಷ್ಟಿಯುದ್ಧಕ್ಕೆ ಇಳಿದು ಕೈ ಮಿಲಾಯಿಸುವ ಹಂತಕ್ಕೆರಿದ್ದರಂತೆ. ಅಂತೂ ಇನ್ನು ಮುಂದೆಯೂ ಈ ದೇಶಭಕ್ತರ ಗದ್ದಲಗಳು, ಯುದ್ಧಾಟ ತಾರಕಕ್ಕೇರಲಿವೆ.

ಇವೆಲ್ಲವುಗಳ ನಡುವೆಯೂ ಇಂತಹ ಬೆಳವಣಿಗೆಗಳಿಗೆ ಕಾರಣವಾಗುವ ಗಮನಾರ್ಹ ವಿದ್ಯಮಾನಗಳು ದೇಶದಲ್ಲಿಯೂ ರಾಜ್ಯದಲ್ಲಿಯೂ ಘಟಿಸುತ್ತಿವೆ. ದೇಶದ 29 ರಾಜ್ಯಗಳಲ್ಲಿ ಬಿಜೆಪಿ ಅಧಿಕಾರದಲ್ಲಿರುವುದು ಕೇವಲ 3 ರಾಜ್ಯಗಳಲ್ಲಿ. ಅದೂ ಗುಜರಾತ್ ಬಿಟ್ಟರೆ ಇನ್ನೆರಡು ಚಿಕ್ಕರಾಜ್ಯಗಳು, ಕಚಡಾ ಸರ್ಕಾರ (ವಾಜಪೇಯಿ ಹೇಳುವಂತೆ) ಎನ್.ಡಿ.ಎ ಭಾಗಿದಾರರ. 4ರಲ್ಲಿ ಉಳಿದೆಡೆ ಎನ್.ಡಿ.ಎ ಯೇತರ ಸರ್ಕಾರಗಳು ಇತ್ತೀಚಿಗಿನ ವಿಧಾನ ಸಭಾ ಚುನಾವಣೆಗಳಲ್ಲಿ, ಸ್ಥಳೀಯ ಸಂಸ್ಥೆಗಳು ಚುನಾವಣೆಗಳಲ್ಲಿ ಬಿಜೆಪಿ ಸೋತು ನೆಲಕಚ್ಚಿ ನೆಲೆತಪ್ಪಿದೆ. ಆಯೋಧ್ಯಾದ ವಿವಾದದ ಉನ್ಮಾದ ಗುಜರಾತ್ ನರಮೇಧಗಳಿಂದ ಇಡೀ ದೇಶವನ್ನು ಮತಾಂಧತೆಯ ಕಿಚ್ಚು ಹುಟ್ಟಿಸಲು ಏನೆಲ್ಲಾ ಯತ್ನಿಸಿದ ಬಳಿಕವೂ ಮೊನ್ನೆ ನಡೆದ 134 ಸ್ಥಾನಗಳ ಪೈಕಿ 106ನ್ನು ಕಾಂಗ್ರೆಸ್ ಗೆದ್ದು ಬಿಜೆಪಿ ಧೂಳೀಪಟವಾಗಿದೆ. ಕರ್ನಾಟಕದಲ್ಲಿಯೂ ಬಿಜೆಪಿ ಇತ್ತೀಚಿನ ಕನಕಪುರದ ಉಪ ಚುನಾವಣೆ 'ಭಾರಿ ಅಭ್ಯರ್ಥಿ' ಯು ಠೇವಣಿ ಕಳೆದುಕೊಂಡು ಪರಿತಪಿಸುತ್ತಿದೆ, ಸ್ಥಳೀಯ ಚುನಾವಣೆಗಳಲ್ಲಿ ಹಣೆಬರಹ' ಹೇಳಬೇಕಾಗಿಲ್ಲ. ಹೀಗೆ ವಾಜಪೇಯಿಯಂತಹ ಮುತ್ಸದ್ದಿ ಮುಖವಾಡವಾಗಲಿ, ನಿತ್ಯನಿಷ್ಠೂರ ಉಕ್ಕಿನ ಆದ್ವಾನಿಯ ಹಸ್ತವಾಗಲಿ ಬಿಜೆಪಿಯನ್ನೂ ರಕ್ಷಿಸುವಲ್ಲಿ ಸೋತಿದೆ. ಆ ಸರ್ಕಾರದ ವಿನಾಶಕಾರಿ, ದೇಶದ್ರೋಹಿ ನೀತಿಗಳ ವಿರುದ್ಧ ಕೋಮುವಾದದ ಭಯೋತ್ಪಾದನಾ ಫ್ಯಾಸಿಸ್ಟ್ ಕೃತ್ಯಗಳ ವಿರುದ್ಧ ಜನತೆ ಸಿಡಿದೇಳತೊಡಗಿದ್ದಾರೆ. ತಿರಸ್ಕರಿಸುತ್ತಿದ್ದಾರೆ. ಇದು ಜನತೆಯಲ್ಲಿರುವ ಧರ್ಮನಿರಪೇಕ್ಷತೆಯ ಮನೋಭಾವದ ದ್ಯೋತಕವೂ ಹೌದು.ಹೀಗಾಗಿ ಬಿಜೆಪಿ ಮುಳುಗುವ ಹಡಗು ಎಂಬುದು ಕೆಲವರಿಗೆ ಗೋಚರವಾಗುತ್ತಿದೆ. ಹಾಗೆಯೇ ನಾಯಕರ ಅಧಿಕಾರ ಲಾಲಸಿ, ಪಕ್ಷಪಾತತನ, ಬ್ರಹ್ಮಾಂಡ ಭ್ರಷ್ಟಾಚಾರಗಳು ಬಲಪಂಥೀಯ ಪಕ್ಷಗಳಲ್ಲಿ ಅದರಲ್ಲೂ ಫಾಶಿಸ್ಟ್ ಮನೋಭಾವದ ಅತ್ಯಂತ ಬಲ ಪ್ರತಿಗಾಮಿ ಬಂಡವಾಳಶಾಹಿ ಭೂಮಾಲಿಕರ ಪಕ್ಷವಾದ ಬಿಜೆಪಿಯಂತಹ ಪಕ್ಷದಲ್ಲಿ ಅಂತರ್ಗತವಾದ ಗುಣವದು. ಆದಷ್ಟೇ ದೇಶಪ್ರೇಮದ ಗಿಲೀಟು ಹಚ್ಚಿದರೂ ಸಗಣಿಗೊಂಬೆ ಸಿಂಗಾರ ಮಾಡಿಕೊಂಡತೆ.

ಕಳೆದ ಬಾರಿ ಸ್ಪರ್ಧಿಸಿ ಸೋತಿದ್ದ ವಿಜಯ ಮಲ್ಯ ಹಾಗೂ ಹೀಗೂ ಆಯ್ಕೆಯಾಗಿ ಬಿಟ್ಟಿದ್ದಾರೆ. ಬಿಜೆಪಿಯು ಒಂದು ಬಣವಲ್ಲದೇ ಕಾಂಗ್ರೆಸ್ ಶಾಸಕರೂ ಮತಹಾಕಿದ್ದಾರೆ. ಹಾಗೇ ನೋಡಿದರೆ 12 ಅಧಿಕ ಮತಗಳು ಬಂದಿವೆ. ಜನಾರ್ಧನ ಪೂಜಾರಿ(50) ನಂತರದಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳ ಬದಲು ಮಲ್ಯಗೆ 46 ಮತಗಳು ಬಂದಿವೆ. ಅವರು 56 ಮತಗಳನ್ನು ನಿರೀಕ್ಷಿಸುತ್ತಿದ್ದರಂತೆ. ಒಟ್ಟಾರೆ ಈ ಎಲ್ಲಾ ಪಕ್ಷಗಳೂ ಚುನಾವಣೆಯ ನೀತಿ ನಿಯಂತ್ರಣಗಳನ್ನು ದಾಟಿದ್ದಾರೆ. ಹಣದ ಹಣಾಹಣಿಯೇ ನಿರ್ಧಾರಕ ಅಂಶವಾಗುತ್ತಿದೆ. ಆಯಾ ರಾಜ್ಯಗಳ ಮುತ್ಸದ್ದಿ ಮಾರ್ಗದರ್ಶಕರ ಹಿರಿಯರ ಮನೆಯೆಂದು ಕರೆಯಲ್ಪಡುವ ರಾಜ್ಯಸಭೆ ರಾಜಕೀಯ ನಿರಾಶ್ರಿತರ ಅಧಿಕಾರ ಲಾಲಸೆವಂತರ, ಖಯಾಲಿಗಳ ರಂಗವಾಗಿ ಮಾರ್ಪಾಡಿಸಲಾಗುತ್ತಿದೆ. ರಾಜ್ಯಸಭೆಗೆ ಸದಸ್ಯರನ್ನು ಚುನಾಯಿಸುವಾಗ ಅದರ ಮಹತ್ವ ಆಶಯಗಳನ್ನು ಸದಾ ಎತ್ತಿ ಹಿಡಿದ ಮುಂಚೂಣಿ ಕೀರ್ತಿ ಎಡ ರಂಗಗಳ ಅಭ್ಯರ್ಥಿ ತನದಲ್ಲಿ ಎಂಬ ಹಿರಿಮೆ ಗುರುತಿಸಬಹುದು.

ಈ ಎಲ್ಲಾ ಫಲಿತಾಂಶಗಳಿಂದ ಬಿಜೆಪಿ ಏನನ್ನು ಕಲಿಯದು ಎಂಬುದು ಪೂರ್ವ ನಿರ್ಧರಿತ ನಾಡಿನ ಜನತೆಯೂ ಸಹ ಇದನ್ನೂ ಹೆಚ್ಚು ಅರ್ಥಮಾಡಿಕೊಂಡು ಪ್ರತೀ ಹಂತದಲ್ಲಿಯೂ ಪಾಠ ಕಲಿಸುವುದೇ ಇರುವಹಾದಿ.

ಬಿಜೆಪಿಯಲ್ಲಿ ಗರ್ಭಗುಡಿ ಸಂಸ್ಕೃತಿ

ಬಿಜೆಪಿಯಲ್ಲಿ ಗರ್ಭಗುಡಿ ಸಂಸ್ಕೃತಿ ಇನ್ನೂ ಜೀವಂತವಾಗಿದೆ. ಕೇಂದ್ರ ಸಚಿವರಾದ ವೆಂಕಯ್ಯನಾಯ್ಡು ಮತ್ತು ಅನಂತಕುಮಾರ್ ಅವರಿಬ್ಬರ ಭ್ರಷ್ಟಾಚಾರದಿಂದಾಗಿ ರಾಜ್ಯದಲ್ಲಿ ಪಕ್ಷ ಚರಮಗೀತೆ ಹಾಡುತ್ತಿವೆ. ನಮ್ಮಕ್ಷೇತ್ರಗಳಲ್ಲಿ ಪ್ರತಿಭಟನೆ ಮಾಡಲು ಬಿಜೆಪಿ ಮುಖಂಡರು ಬರಲಿ, ಅವರ ಬಂಡವಾಳ, ಪೆಟ್ರೋಲ್ ಬಂಕ್, ಗ್ಯಾಸ್ ಏಜೆನ್ಸಿ ಎಷ್ಟಕ್ಕೆ ಮಾರಿಕೊಂಡಿದ್ದಾರೆ ಎಂಬುದನ್ನು ಜನರ ಮುಂದಿಡುತ್ತೇವೆ.

ಬಿಜೆಪಿಯಲ್ಲಿ ಇರುವವರೆಲ್ಲ ಹರಿಶ್ಚಂದ್ರನ ಮೊಮ್ಮಕ್ಕಳ, ನಾವೆಲ್ಲ ಖದೀಮರಾ, ಇದೇ ಪರಿಸ್ಥಿತಿ ಮುಂದುವರೆದರೆ ಕೊನೆಗೆ ಒಂದು ದಿನ ಬಸವರಾಜ ಪಾಟೀಲ್ ಸೇಡಂ ಅವರು ತಮ್ಮನ್ನು ತಾವೇ ಉಚ್ಚಾಟಿಸಿಕೊಂಡಿರುವ ಪತ್ರಕ್ಕೆ ಸಹಿ ಹಾಕಿ ಅದನ್ನು ಪೋಸ್ಟ್ ಮಾಡಿ ಗುಲ್ಬರ್ಗಾದ ತಮ್ಮ ಮನೆಯಲ್ಲಿ ಪತ್ರ ಹೊಡೆದು ನೋಡಿ ಸಮಾಧಾನದ ನಿಟ್ಟುಸಿರು ಬಿಡುತ್ತಾರೆ, ಬಿಜೆಪಿ ಆ ಸ್ಥಿತಿಗೆ ಬಂದು ಮುಟ್ಟುತ್ತೆ.

- ವಿ.ಪಾಪಣ್ಣ, ಉಚ್ಚಾಟಿತ ಶಾಸಕರು

★ ★ ★

ಹಾಗಾದ್ರೆ ಬಿಜೆಪಿಯವರು ಏನ್ ಮಾಡಿದ್ದಾರೆ. ಎಲ್ಲ ಕಡೆ ಬೆಂಕಿ ಹಚ್ಚೋದು, ಅಸೆಂಬ್ಲಿಯಲ್ಲಿ ಗದ್ದಲ ಎಬ್ಬಿಸೋದು, ಹಿಂದೂ ಮುಸ್ಲಿಂ ಗಲಾಟೆ? ಇದು ಬಿಜೆಪಿ ಕೊಡುಗೆ.

ಬಿಜೆಪಿಯವರು ಏನೇನು ಮಾಡಿದ್ದಾರೆ ಅನ್ನೋದು ನನಗೆ ಗೊತ್ತಿಲ್ಲಾ? ಅವರೂ ಮನೀಬ್ಯಾಗ್ (ಹಣದ ಥೈಲಿಗಳು) ಹಂಚ್ಲಾ ಇಲ್ಲಾ? ಅವರ ಮನೆಯಲ್ಲಿ (ಪಕ್ಷದಲ್ಲಿ) ಏನೇನು ನಡೀತಿದೆ ಅನ್ನೋದನ್ನ ಅವರು ನೋಡಿಕೊಳ್ಳಬೇಕು. ತಮ್ಮಮನೆಯನ್ನು ಸರಿಯಾಗಿಟ್ಟುಕೊಳ್ಳಲು ಆಗದಿದ್ದ ಮೇಲೆ ಬೇರೆಯವರ ಬಗ್ಗೆ ಅವರು ಹೀಗೆ ಇಲ್ಲಸಲ್ಲದ ಮಾತು ಆಡಬಾರದು.

- ವಿಜಯ ಮಲ್ಯ

ಕುಡಿವ ನೀರು : ಎಲ್ಲೆಲ್ಲೂ ಹಾಹಾಕಾರ

ಬೇಸಿಗೆ ಬಿಸಿಲಿನ ತಾಪ ಹೆಚ್ಚುತ್ತಿರುವಂತೆ ಕರ್ನಾಟಕದಲ್ಲಿ ಜನ - ದನ ಕರುಗಳು ಕುಡಿಯುವ ನೀರಿನ ಕೊರತೆಯಿಂದ ಹಾಹಾಕಾರ ಪಡುತ್ತಿದ್ದಾರೆ ಈ ವರ್ಷ ರಾಜ್ಯದ ಬಹುತೇಕ ಜಿಲ್ಲೆಗಳು ವ್ಯಾಪಕವಾದ ಬರದ ಬವಣೆಯಲ್ಲಿ ಬೆಂದ ಹಿನ್ನೆಲೆಯಿಂದಾಗಿಯೂ ಪರಿಸ್ಥಿತಿ ಘೋರವಾಗಿದೆ. ಉತ್ತರ ಕರ್ನಾಟಕದ ಹಲವಾರು ಜಿಲ್ಲೆಗಳಿಂದ ಎಂದಿಗಿಂತಲೂ ಅತ್ಯಧಿಕವಾಗಿ ಜನರು ಗುಳೇ ಹೊರಟಿದ್ದಾರೆ. ಕುಡಿಯುವ ನೀರಿಗಾಗಿ ಬಡಿದಾಡಿಕೊಂಡ ಘಟನೆಗಳು ಜರುಗಿವೆ. ಮೇವು-ನೀರಿನ ಅಭಾವ ತೀಕ್ಷ್ಣಗೊಂಡು ಬರ ಜನರನ್ನು ಬೆನ್ನು ಹತ್ತಿದೆ. ಕುಡಿವ ನೀರಿನ ಕೊರತೆ ಗ್ರಾಮಾಂತರದಲ್ಲಿ ಮಾತ್ರವಲ್ಲ ನಗರಗಳನ್ನು ಬಾಧಿಸುತ್ತಿದೆ.

ಕುಡಿಯುವ ನೀರಿಗಾಗಿ ಏನನ್ನೂ ಮಾಡಲು

ಕ್ರಮವಹಿಸಬೇಕು ಇಲ್ಲವಾದರೆ ಕಠಿಣ ಕ್ರಮ ಜರುಗಿಸುವುದಾಗಿಯೂ ಅಧಿಕಾರಿಗಳಿಗೆ ತಾಕೀತು ಮಾಡಿದ್ದಾರೆ. ಅಂದರೆ ಸರ್ಕಾರಕ್ಕೆ ಪರಿಸ್ಥಿತಿಯ ಗಂಭೀರತೆ ತಿಳಿದಿದೆಯೆಂದರ್ಥ.

ಆದರೆ ತಾಕೀತು, ಮಾತುಗಳೇನೇ ಇರಲಿ... ನೀರಿನ ವ್ಯವಸ್ಥೆಗಾಗಿ ಮೀನಮೇಷ ಎಣಿಸದೇ ಯಾವುದೇ ಖಾತೆಯಿಂದಲಾದರೂ ಖರ್ಚು ಮಾಡಿ ಎಂದೇನೋ ಹೇಳಿದ್ದಾರೆ. ಆದರೆ ವಾಸ್ತವದಲ್ಲಿ ಇದು ಜಾರಿ ಆಗುವುದಿಲ್ಲ. ಅಧಿಕಾರಶಾಹಿ ಹಾಗೂ ಸ್ವತಃ ಸರ್ಕಾರವೇ ತುರ್ತು ಕ್ರಮವಹಿಸಲು ವಿಳಂಬಿಸುವುದೇ ಅನುಭವ.

ಭೀಕರ ಬರಗಾಲವಿದ್ದು, ಹೀನ ಕಂಗಾಲಾದ ದಾರುಣ ವರದಿಗಳಿದ್ದರೂ ಎಲ್ಲಾ ನೂರಾರು ಕೋಟಿಗಳಲ್ಲೇ ಮಾತನಾಡಿದ ಸರ್ಕಾರ ಅಂತಿಮವಾಗಿ ಕೆಲವು ಲಕ್ಷಗಳನ್ನೂ ನೀಡಲಿಲ್ಲ.

ನೊಣವಿನಕೆಯಲ್ಲಿ ರೈತರ ಸಮಾವೇಶ

ವಿದ್ಯುತ್ ಕಛೇರಿ ಮುತ್ತಿಗೆಗೆ ನಿರ್ಧಾರ

ರೈತರ ಪಂಪ್‌ಸೆಟ್‌ಗಳಿಗೆ ಮೀಟರ್ ಅಳವಡಿಸುವ, ದುಬಾರಿ ದರಗಳನ್ನು ನಿಗದಿಪಡಿಸಿರುವುದರ ವಿರುದ್ಧ ರೈತರು-ಕೂಲಿಕಾರರು ಸಿದ್ಧರಾಗುತ್ತಿದ್ದಾರೆ. ಪರೀಕ್ಷಾರ್ಥವಾಗಿ ಮೊದಲು ಮೀಟರ್ ಅಳವಡಿಸಲು ನಿರ್ಧರಿಸಿರುವ ಕೃಷ್ಣ ಸರ್ಕಾರ ನೊಣವಿನ ಕೆರೆಯನ್ನು ಆರಿಸಿದೆ. ಇದನ್ನು ಆ ಪ್ರದೇಶದ ರೈತಾಪಿಗಳು ವಿರೋಧಿಸಿ ಹೋರಾಟಕ್ಕೆ ಅಣಿಯಾಗುತ್ತಿದ್ದಾರೆ.

'ಪ್ರಮಾಣಾಗ್ಲೂ ಮೀಟರ್ ಹಾಕ್ತಾರೇನಣ್ಣ' ಎಂಗಣ್ಣ ನಮ್ಮಂತೋರು ಬದುಕೋದು" ಎಂದ ಆ 50 ರ ಮಹಿಳೆ ಅಳ ತೊಡಗಿದಳು. ಏಕಮ್ಮ ಅಳುತ್ತೀಯಾ, ಅಳಬೇಡ ಬಾ ಅವತ್ತು ತೀರ್ಮಾನ ಮಾಡಿ, ಮೀಟರ್ ಹಾಕದಂತೆ ಹೋರಾಟ ಮಾಡೋಣ ಎಂದು ಸಣ್ಣೇನಹಳ್ಳಿಯಲ್ಲಿ ಸಮಾಧಾನ ಮಾಡಬೇಕಾಯ್ತು. ಆ ಮಹಿಳೆಯ ಕಥೆ ಕೇಳಿದರೆ ಯಾರ ಮನಸ್ಸಾದರೂ ಕರಗಲೇ ಬೇಕು. ಅಳುತ್ತಾ ಹೇಳಿದಳು ಮಗ ಓದ್ಲಿಲ್ಲ, ಮಗ ಹುಟ್ಟಿದ 3-4 ವರ್ಷದಲ್ಲೇ ಗಂಡ ತೀರ್ಕೊಂಡ, ಕೂಲಿ ಮಾಡ್ತಿದ್ದೆ, ಮಾಡ್ತೀವಿನಿ, ಪಾಲಿಗೆ ಬಂದ 1½ ಎಕರೆ ಹೊಲದಲ್ಲಿ 3 ತಿಂಗಳಿಂದ ಸಾಲಸೋಲ ಮಾಡಿ ಬೋರ್ ಹಾಕ್ಸಿನಿ ಏನಾದರೂ ಬೆಳೆಯೋಣ, ಬದುಕೋಣ ಅಂದುಕೊಂಡಿದ್ದೆ, ಆದರೆ ಸರ್ಕಾರ್ದೋರು ಮೀಟರ್ ಹಾಕ್ದರೆ ಬಿಲ್ ಕಟೋದು ಎಂಗೆ ಸ್ವಾಮಿ, ನೀರು ಬಂದ ತಕ್ಷಣ ದೇವರು ಕಣ್ಣಟ್ಟ ಅನ್ಕೊಂಡ್ವಿ, ಈಗ್ಯಾಕೋ ಆ ದೇವರು ಒಲಿತಾ ಇಲ್ಲಾ ಬಿಡಿ, ನಮ್ಮ ಹಣೆಬರಾ ಹಿಂಗೆ ಅನ್ನುತ್ತಿದ್ದಳು ಆ ಮಹಿಳೆ.

ಹೆಂಗೆ ಬದುಕೋದು ಸಾಮಿ...

ಈ ರೀತಿಯ ಅನುಭವ ಒಂದಲ್ಲಾ ಎರಡಲ್ಲಾ ಬಹಳಷ್ಟು ಇದೇ ರೀತಿ 'ಮತ್ತಿಘಟ್ಟ'ದಲ್ಲಿ ಆಟೋ ಪ್ರಚಾರ ಮಾಡ್ಕೊಂಡು ಮುಂದೆ ಹೋಯ್ತು, ನಾನು ಕರಪತ್ರ ಹಂಚ್ತಾ ಗೌಡ್ರೆ ಬರಬೇಕು ಸಮಾವೇಶಕ್ಕೆ ಮೀಟರ್ ಹಾಕದ್ರೆ ನಾವ್ಯಾರು ಬದುಕೋ ಹಾಗಿಲ್ಲ ನೋಡಿ ಎಂದು ಒಬ್ಬರಿಗೆ ಹೇಳಿ ಮುಂದೆ ಹೋದೆ. ಅಲ್ಲೇ ಪಕ್ಕದಲ್ಲಿ ಒಂದು ಮನೆ ಕಟ್ಟಿತಾ ಇದ್ದರು, ಒಬ್ಬ ಮಹಿಳೆ ತಲೆ ಮೇಲೆ ಹೊತ್ಕೊಂಡಿದ್ದ ಇಟ್ಟಿಗೆ ಇಳಿಸಿ ಓಡಿ ಬಂದು, ನನ್ನ ಕೇಳ ತೊಡಗಿದಳು "ಸ್ವಾಮಿ ಭಾಗ್ಯಜ್ಯೋತಿಗೆ ಮೀಟರ್ ಹಾಕಿಸಿ ಕೊಳ್ಳಿ ಅಂತ ಬಂದಿದ್ದರು, ನಮ್ಮ ಹತ್ತಿರ ದುಡ್ಡಿಲ್ಲಾ ಅಂದ್ವಿ, ಆದಾವುದೋ ದಿನ ಹೇಳಿ ಅಷ್ಟರಲ್ಲಿ ದುಡ್ಡಿ ಕಟ್ಟಿ ಮೀಟರ್ ಹಾಕಿಸಿಕೊಳ್ಳಿ ಇಲ್ಲದಿದ್ದರೆ, ಕರೆಂಟ್ ಕಟ್ ಮಾಡ್ತಿವಿ, ಆ ಮೇಲೂ ನೀವು ಕರೆಂಟ ತಗೊಂಡರೆ ಹೊಸ ಕಾನೂನಿನಲ್ಲಿ ಜೈಲಿಗೆ ಹಾಕ್ತೀವಿ ಅಂದರು, ದಿಟಾನಾ ಸ್ವಾಮಿ ನಿಜವಾಗಿಯೂ ಜೈಲ್‌ಗೆ ಹಾಕ್ತಾರಾ?" ಹೌದಮ್ಮ ಅದಕ್ಕೆ ನಾವು ಸಮಾವೇಶ ಮಾಡ್ತಿರೋದು, ಅಂದು ನೀನು ಬರ್ಲಿಲ್ಲಾ ಅಂದರೂ ಹೋಗ್ಲಿ ನಿಮ್ಮ ಗೌಡ್ರನ ಕಳುಹಿಸು ಎಂದೆ.

ಇನ್ನೊಂದು ಕಡೆ ತೋಟದ ಸಾಲಲ್ಲಿ ಆಟೋ ಹೋಗುತ್ತಿತ್ತು ತೋಟದಿಂದ ಆಚೆ ಬೀದಿಗೆ ಬಂದ ಗೌಡ್ರು ಆಟೋ ನಿಲ್ಲಿಸಿ "ನಮ್ಮೂರಿಂದ ಟ್ರಾಕ್ಟರ್‌ನಲ್ಲಿ ಬರ್ತೀವಿ ಎಂದು ಹೇಳುತ್ತಾ, ತೆಂಗಿನ ಮರ ತೋರಿಸಿ ನೋಡಿ ಸಾರ್ ಆ ಮರ ನೋಡಿ, ಕಾಯಿ ಅವ ಸ್ವಾಮಿ. ಅದರಲ್ಲಿ ಇರೋ ಕಾಯ್ಗು ನುಸಿ ಬಂದವೆ, ಇಂತದ್ರಲ್ಲಿ ಬದುಕೋದೆ ಕಷ್ಟ, ಮೀಟರ್ ಹಾಕಿ ನೀವು ಹೇಳದ ಹಾಗೆ ಖಾಸಗಿಯೋರಿಗೆ ಕೊಟ್ಟುಬಿಟ್ಟರೆ ಬಿಲ್ ಕಟ್ಟೋಕೆ ಆಗ್ತದ, ಬದುಕೋದುಂಟಾ" ಎಂದಲ್ಲಾ ವೇಚಾಡಿದರು.

ಲಿಂಗದೇವರಹಳ್ಳಿ ಬೋವಿ ಕಾಲೋನಿ, ಅಲ್ಲಿ ಇರೋದೆ 10-15 ಮನೆ, ಬೋರ್ ಇಲ್ಲ ನಿಲ್ಲೋದು ಬೇಡ, ಟೈಮ್ ಆಗಿದೆ ಪಕ್ಕದ ದೊಡ್ಡ ಊರಿಗೆ ಹೋಗಬೇಕು ಅಂತಾ ಜೋರಾಗಿ ಬರೀ ಮೈಕ್ ಅನೋನ್ಸ್ ಮಾಡುತ್ತಾ ಹೋಗುತ್ತಿದ್ದ ನಮ್ಮ ಆಟೋ ಅಟ್ಟಿಸಿಕೊಂಡು ಬಂದು, ಆಟೋ ನಿಲ್ಲಿಸಿ, "ನಾವು ಬತ್ತೀವಿ ಆದರೆ ನಮ್ಮ ಕಷ್ಟಾನು ಕೇಳಿ, ಸರ್ಕಾರದೋರ್ಗೆ ಹೇಳಿ ಬುದ್ದಿ ಎಂದರು" ಏನು ನಿಮ್ಮ ಸಮಸ್ಯೆ? ಎಂದರೆ ಹೇಳಿದರು "ನೋಡಿ ಈ ಕಾಲೋನಿ ಮನೆನೆಲ್ಲಾ ಕೊಟ್ಟೋರು ಸರ್ಕಾರದವರು, ಕರಂಟ್ ಕೊಟ್ಟೋರು ಅವರೆ, ಆದರೆ ಅವಾಗ ಮೀಟರ್ ಮಾತ್ರ ಕೊಡ್ಲಿಲ್ಲಾ..... ಈಗ ಬಂದು ನಿಮ್ದು ಅಕ್ರಮ, ಹೊಸ ಕಾನೂನು ಪ್ರಕಾರ ದುಡ್ಡು ಕೊಟ್ಟು ಮೀಟರ್ ಹಾಕ್ಕೊಳ್ಳಿ ಇಲ್ಲಾಂದರೆ ಗೊತ್ತಲ್ಲಾ ಏಪ್ರಿಲ್‌ನಲ್ಲಿ ಜೈಲಿಗೆ ಹೋಗಬೇಕಾಗುತ್ತೆ ಅಂತರಲ್ಲಾ ಸ್ವಾಮಿ... ಇದು ಸರೀನಾ? ನ್ಯಾಯಾನಾ? ಎಂದು ಕೇಳ ತೊಡಗಿದರು.

ಇಂತಹ ಅನೇಕ ಅನುಭವ ಆದದ್ದು, ತುಮಕೂರು ಜಿಲ್ಲೆ ತುರುವೇಕೆರೆ ತಾಲ್ಲೂಕು ಗೋಣವಿನಕೆರೆ ಕೆ.ಪಿ.ಟಿ.ಯು ಸೆಕ್ಷನ್ ವ್ಯಾಪ್ತಿಯ ನಿರಾವರಿ ಪಂಪ್‌ಸೆಟ್ ವಿದ್ಯುತ್ ಬಳಕೆದಾರರ ಸಮಾವೇಶ ಮಾಡಬೇಕೆಂದು, ನೊಣವಿನಕೆರೆ ಕೆಪಿಟಿಸಿಎಲ್ ಸೆಕ್ಷನ್ ವ್ಯಾಪ್ತಿಯ 77 ಹಳ್ಳಿಗಳಿಗೆ ವಿದ್ಯುತ್ ಸಮಸ್ಯೆ, ಜೇವಿಯರ್ ಸಂಸ್ಥೆಯೊಂದಿಗೆ ಕೆಪಿಟಿಸಿಎಲ್ ಮಾಡಿಕೊಂಡಿರುವ ಒಪ್ಪಂದ ವಿವರಿಸಲು ಹೋದಾಗ.

ಇಡೀ ನೊಣವಿನಕೆರೆ ಕೆಪಿಟಿಸಿಎಲ್ ಸೆಕ್ಷನ್ ವ್ಯಾಪ್ತಿಯಲ್ಲಿ ಸಮಗಿದ್ದ ಸಂಪರ್ಕ ಇಬ್ಬರು ಮಾತ್ರ, ಒಬ್ಬ ಮಾಜಿ ಎಸ್.ಎಫ್.ಐ ಸಂಗಾತಿ ಗುಂಗದ ಮಳೆಯ ಮುರಳಿ, ಇನ್ನೊಬ್ಬರು ಎಸ್.ಎಸ್.ಐ ಸಂಪರ್ಕದಿಂದ ನಮ್ಮ ಹಿತೈಷಿಯಾಗಿದ್ದ ಮುಂದ್ದೇನಹಳ್ಳಿಯ ದೋತಿ ಬೀಮಣ್ಣ. ಈ ಇಬ್ಬರ ಸಂಪರ್ಕ ಬಳಸಿ, ದಾರಿ-ಊರು ಜನ ಏನೇನು ಗೊತ್ತಿಲ್ಲದಾ ಹಳ್ಳಿಗಳಿಗೆ ಹೋಗಿ, ಹಳ್ಳಿಯ ಅರಳಿಕಟ್ಟೆಯೋ, ಪೆಟ್ಟಿಗೆ ಅಂಗಡಿಯೋ ಮುಂದು ಇದ್ದಬದ್ದವರಿಗೇನೆ ವಿಷಯ ತಿಳಿಸಿ, ಮೀಟರ್ ಅಳವಡಿಸುತ್ತಾರಂತೆ, ವಿದ್ಯುತ್ ದರ ಏರಿಸುತ್ತಾರಂತೆ, ಜೇವಿಯರ್ ಸಂಸ್ಥೆಯೊಂದಿಗೆ ಒಪ್ಪಂದ ಮಾಡಿಕೊಂಡಿದ್ದಾರೆ, ಮುಂದೆ ಖಾಸಗೀಕರಿಸುತ್ತಾರಂತೆ ಇದರ ವಿರುದ್ಧ ರಾಜ್ಯದ್ಯಂತ ರೈತರ ಹೋರಾಟ ನಡೆಸುತ್ತಿದ್ದಾರೆ, ಈ ಕುರಿತು ನೊಣವಿನಕೆರೆ ವ್ಯಾಪ್ತಿಯ ರೈತರ ಸಮಾವೇಶ ನಡೆಸಿ ಹೋರಾಟ ಮಾಡುವ ಕುರಿತು ಚರ್ಚಿಸಬೇಕೆಂದಿದ್ದೀವಿ, ಸಮಾವೇಶ ಮಾಡುವ ಕುರಿತು ಚರ್ಚಿಸಲು ಮಾರ್ಚ್ 22 ರಂದು ಸಭೆ ಬನ್ನಿ ಎಂದರೆ, ಬಂದವರು 60 ಮಂದಿ. ಸಿದ್ಧಾತಾ ಸಮಿತಿ ರಚನೆಯಾಯಿತು 6000 ಕರಪತ್ರ ಎರಡು ದಿನ ಆಟೋ ಪ್ರಚಾರ ನಡೆಸುವುದು 27 ರಂದು ಸಮಾವೇಶ ಮಾಡುವುದೆಂದು ನಿರ್ಧರಿಸಲಾಯಿತು.

ನೆನ್ನೆ ದಿನಾ ನನ್ನ ಜನಾ.... ಬೆಟ್ಟದಂತೆ ಬಂದರು.

ಮಾರ್ಚ್ 25,26 ರಂದು ಎರಡು ದಿನ ಆಟೋ ಪ್ರಚಾರ ಹಳ್ಳಿ-ಹಳ್ಳಿ ಕರ ಪತ್ರ ತಲುಪಿಸಿ ವಿಷಯ ಮುಟ್ಟಿಸಲಾಯಿತು. 27 ರಂದು ರೈತರು ಬರುತ್ತಾರೋ ಇಲ್ಲವೋ ಎಂಬ ಆತಂಕದಿಂದ ಎದುರು ನೋಡುತ್ತಿದ್ದ ನಮಗೆ, ಮ. 200ಕ್ಕೆ ರೈತರು ಟ್ರಾಕ್ಟರ್ ಗಳಲ್ಲಿ ಬೈಕ್‌ಗಳಲ್ಲಿ ಬಸ್‌ಗಳಲ್ಲಿ ಬಂದು ಇಳಿದು, ಮೆರವಣಿಗೆ ಪ್ರಾರಂಭಿಸಿ ಸಮಾವೇಶಕ್ಕೂ ಮುನ್ನಾ ಕೆಪಿಟಿಸಿಎಲ್ ಕಛೇರಿಗೆ ಹೋಗಿ ಜೇವಿಯರ್ ಕಂಪನಿಯವರನ್ನು ಹೊರಗೋಡಿಸಿ ಬರುತ್ತೇವೆ ಎಂದು ಎಷ್ಟು ಹೇಳಿದರೂ ಕೇಳದೆ ಕೆಪಿಟಿಸಿಎಲ್ ಕಛೇರಿ ಎಡೆಗೆ ಸಾವಿರಾರು ಸಂಖ್ಯೆಯ ರೈತರು, ಧಾವಿಸುತ್ತಿದ್ದಾಗ ಕಣ್ತುಂಬಿ ಬಂದವು. ನೆನಪಿಗೆ ಹೊಳೆದಿದ್ದು ಸದಾ ನಾವು ಕೇಳುತ್ತಿದ್ದ ಬಂಡಾಯದ ಹಾಡು "ನೆನ್ನೆ ದಿನ ನನ್ನ ಜನಾ ಬೆಟ್ಟದಂತೆ ಬಂದರು..."

ಕೆಪಿಟಿಸಿಎಲ್ ಕಛೇರಿ ಮುಂದೆ ಧಿಕ್ಕಾರ ಕೂಗಿ "ಖಾಸಗೀಕರಿಸಿದರೆ ಸುಟ್ಟು ಹಾಕಿಯೆವು ಎಚ್ಚರಿಕೆ" ಎಂಬ ಹೋರಾಟದ ಯುದ್ಧ ಘೋಷ ಮೊಳಗಿಸಿ, ಸಮಾವೇಶಕ್ಕೆ ಬಂದು, ಸಮಾವೇಶದಲ್ಲಿದ್ದು, ಮುಖಂಡರುಗಳ ಮಾತುಗಳನ್ನು ಆಲಿಸಿ, ಏಪ್ರಿಲ್ 1 ರಂದು ತಿಪಟೂರು ಕೆಪಿಟಿಸಿಎಲ್ ಉಪ ವಿಭಾಗ ಕಛೇರಿಗೆ ಮುತ್ತಿಗೆ ಹಾಕಲು ನಿರ್ಣಯಿಸಿದರು, ನೀರಾವರಿ ಪಂಪ್‌ಸೆಟ್ ವಿದ್ಯುತ್ ಬಳಕೆದಾರರ ಹೋರಾಟ ಸಮಿತಿಯನ್ನು ಆಯ್ಕೆ ಮಾಡಿದರು. ಏಪ್ರಿಲ್ 1 ರಿಂದ ರಾಜ್ಯವ್ಯಾಪಿ ಹೋರಾಟದ ಕೊಡಿ, ಪಕ್ಕದ ಊರಿಗೆ ಕೊಡಿ ಎಂದು ಮುಗಿಬಿದ್ದರು.

ಸಿರಿವರ ನಾರಾಯಣರೆಡ್ಡಿಯ ಪಾಡು.

ನಮ್ಮೂರಿನ ಗೌಡನಿಗೆ ಬರಲು ಬಿಡೆವು...

ಸಮಾವೇಶದಲ್ಲಿ ಭಾಗವಹಿಸಿ, ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಕಾರ್ಯದರ್ಶಿ ಕಾಂ। ಜಿ.ಸಿ. ಬಯ್ಯಾರೆಡ್ಡಿಯವರು, ಮಾಜಿ ಶಾಸಕ ನಂಜಾಮರಿಯ ಮಾತುಗಳನ್ನು ಆಲಿಸಿದರು. ರಾಜ್ಯಾದ್ಯಂತ ನಡೆಧಿರುವ ರೈತರ ಆತ್ಮಹತ್ಯೆ, ಕೋಲಾರದ ಸಿರಿವರದ ನಾರಾಯಣರೆಡ್ಡಿಯವರ ಕುಟುಂಬದವರ ಆತ್ಮಹತ್ಯೆ, ಬೆಲೆ ಕುಸಿತ, ಮೀಟರ್ ಅಳವಡಿಕೆ, ವಿದ್ಯುತ್ ಖಾಸಗೀಕರಣ ಮುಂತಾದವನ್ನು ಆಲಿಸಿ, ಏಪ್ರಿಲ್ 1 ರಿಂದ



ನಡೆಯುವ ಹೋರಾಟ ಯಶಸ್ವಿಗೆ ಪಣ ತೊಟ್ಟರು.

ತಿಪಟೂರಿನ ಮಾಜಿ ಶಾಸಕರಾದ ನಂಜಾಮರಿಯವರು ಮಾತನಾಡಿ ಏಪ್ರಿಲ್ ಒಂದರಂದು ಇಡೀ ತಿಪಟೂರು ಬಂದ್ ಮಾಡೋಣ ಬನ್ನಿ ಎಂದು ಹೇಳಿದೊಡನೆ ಕರ ತಾಡಣ ಮಾಡಿ, ಬರುವೆವು ನಾವು ನಾವೆಲ್ಲರು ಎಂದರು.

ಅನೇಕ ಊರುಗಳ ಹಿರಿಯರು, ಸಮಾವೇಶದ ನಂತರ ಬಂದು, "ಸಿರಿವರದ ನಾರಾಯಣರೆಡ್ಡಿಯ ಪಾಡು ನಮ್ಮೂರಿನ ಗೌಡನಿಗೆ ಬರಲು ಬಿಡೆವು" ಎಂದು ಹೇಳುತ್ತಾ ಸಮಸ್ಯೆಗೆ ಪರಿಹಾರ ಆತ್ಮಹತ್ಯೆಯಲ್ಲಾ ಆತ್ಮವಿಶ್ವಾಸದ ಹೋರಾಟ ಎಂಬ ಘೋಷಣೆ ಹೊತ್ತ ಬೋರ್ಡ್‌ಗಳನ್ನು ಬರೆಸಿ ನಮ್ಮೂರಿನ ಹೆಬ್ಬಾಗಿಲಿಗೆ ಹಾಕೋಣ ಅಂತ ಇದ್ದೀವಿ, ಏನು ಸಂಘ ಅಂತ ಬರೀ ಬೇಕು ತಿಳಿಸಿ ಸಾರ್ ಎಂದು ಕೇಳಿಕೊಂಡು ಹೋದದನ್ನು ಕಂಡೊಡನೆ, "ಅವರ ಸಮಸ್ಯೆಯೊಂದಿಗೆ ಅವರ ಬಳಿಗೆ ಹೋದರೆ, ಜನ ಸಮೂಹ ಬಂದು ನಿಮ್ಮ ಬ್ಯಾನರ್ ಬಾವುಟವನ್ನು ಹೊತ್ತು ಹೋರಾಟದ ಸಾಗರಕ್ಕೆ ದುಮುಕುತ್ತಾರೆ" ಎಂಬ ಮಾತುಗಳ ಪ್ರಾಯೋಗಿಕ ಅನುಭವವಾಯಿತು.ಸಮಾವೇಶವು ಸುಮಾರು 80 ಜನರ ಹೋರಾಟ ಸಮಿತಿಯನ್ನು ವಿವಿದ ಹಳ್ಳಿಗಳ ಜನರನ್ನೊಳಗೊಂಡಂತೆ ಆಯ್ಕೆ ಮಾಡಿತು. ನೊಣವಿನಕೆರೆಯ ಎಸ್. ಶಂಕರ್ ಮೂರ್ತಿ ಅಧ್ಯಕ್ಷರಾಗಿ, ಮದ್ದಹಳ್ಳಿಯ ದೋತಿ ಬೀಮಣ್ಣರವರನ್ನು ಪ್ರಧಾನ ಕಾರ್ಯದರ್ಶಿಯಾಗಿ ಮತ್ತು ಕೋಡಿಹಳ್ಳಿಯ ಬಸವಲಿಂಗಪ್ಪರವರನ್ನು ಖಜಾಂಚಿಯನ್ನಾಗಿ ಹೋರಾಟ ಸಮಿತಿ ಸದಸ್ಯರು ಆಯ್ಕೆ ಮಾಡಿದ್ದಾರೆ.

ಸಮಾವೇಶದಿಂದ ಏಪ್ರಿಲ್ 1 ರಿಂದ ತುಪಟೂರು ಕೆಪಿಟಿಸಿಎಲ್ ಕಛೇರಿಗೆ ಮುತ್ತಿಗೆ ಹಾಕಲು, ಸಮಾವೇಶದಲ್ಲಿ ಭಾಗವಹಿಸಿದ್ದ ಸುಮಾರು ಒಂದುವರೆ ಸಾವಿರ ರೈತರು ಮುಂದಾಗಿದ್ದಾರೆ.

ಕುಡಿವ ನೀರು : ಎಲ್ಲೆಲ್ಲೂ ಹಾಹಾಕಾರ

ಪುಟ 3 ರಿಂದ

ಕಾಳನ್ನೂ ಹಂಚಲಿಲ್ಲ. ಹಂಚಿದ ಅಧಿಕಾರಿಗಳು ಪರಿತಪಿಸುವಂತಾದ ಉದಾಹರಣೆ ಅನೇಕ.

ಆದುದರಿಂದ ಕಾಲಹರಣದ - ವ್ಯರ್ಥದ ಮಾತುಗಳಿಗಿಂತ ಕೃಷ್ಣ ಸರ್ಕಾರ ಪರಿಹಾರದತ್ತ ದುಮುಕಬೇಕು. ಈ ಸಂಕಷ್ಟದ ಸ್ಥಿತಿಯಲ್ಲಿ ರಾಜ್ಯ ಸರ್ಕಾರದ ಹಣದ ಸಂಪನ್ಮೂಲ ಸೀಮಿತವಿರುವುದರಿಂದಾಗಿ ಕೇಂದ್ರ ಸರ್ಕಾರ ರಾಜ್ಯಕ್ಕೆ ಕನಿಷ್ಟ 3000 ಕೋಟಿ ಹಣವನ್ನು 'ವಿಶೇಷ ಪ್ಯಾಕೆಜ್' ಆಡಿ ಬಿಡುಗಡೆ ಮಾಡಬೇಕೆಂದು ಮುಖ್ಯಮಂತ್ರಿಗಳು ಹೇಳಿದ್ದಾರೆ. ನಿಜ! ಈ ಹೇಳಿಕೆಯೊಂದೇ ಸಾಲದು, ಅದಕ್ಕೀಗ ಕೇಂದ್ರ ಸರ್ಕಾರಕ್ಕೆ ಬರೆಯಬೇಕು ಮತ್ತು ಇಡೀ ನಾಡಿನ ಜನಶಕ್ತಿ - ರಾಜಕೀಯ ಬಲ ಉಪಯೋಗಿಸಿ, ಕೇಂದ್ರದ ಮೇಲೆ ಒತ್ತಡ ತರುವ 'ರಾಜಕೀಯ ಹೋರಾಟದ' ಕ್ರಮ ಕೈಗೊಳ್ಳಬೇಕು. ಇಲ್ಲವಾದರೆ ಕೇಂದ್ರ ಸರ್ಕಾರ ಇದನ್ನು ಗಣನೆಗೆ ತೆಗೆದುಕೊಳ್ಳದೇ ನಿರ್ಲಕ್ಷಿಸುತ್ತದೆ. ಇದೇ ವರ್ಷದಲ್ಲಿನ ಬರದ ಬರಲಿಲ್ಲ. ವೆಂಕಯ್ಯನಾಯ್ಡುವಿನ ಬಡಾಯಿ ಮಾತು ಕೇಳಬೇಕಾಯ್ತು. ಆದರೆ ಆಂಧ್ರಕ್ಕೆ ಹೆಚ್ಚಿನ ಹಣ ನೀಡಲಾಯಿತು: ಹೀಗೆ ಜೀವನ್ಮರಣದ ಪ್ರಶ್ನೆಯನ್ನು ತಮ್ಮ ಸರ್ಕಾರದ ಬೆಂಬಲಿಗರು - ಹೌದು-ಅಲ್ಲ ಎಂದು ನೋಡುವುದು ಅವಮಾನವೀಯ, ತಾರತಮ್ಯದ ರಾಜಕೀಯ. ಇದರ ವಿರುದ್ಧ ಸಿಡಿದು ನಿಲ್ಲುವ ಎದೆಗಾರಿಕೆ ಉದಾರೀಕರಣ-ಜಾಗತೀಕರಣದ ಆರಾಧಕ ಕೃಷ್ಣರಿಗೆ ಇದೆಯೇ?

ಕುಡಿವ ನೀರಿನ ಸಮಸ್ಯೆ ನಿನ್ನೆ ಮೊನ್ನೆಯದಲ್ಲ. ಹಲವಾರು ದಶಕಗಳ ಇತಿಹಾಸವೇ ಇದೆ. ಇಂತಹ ಸಮಸ್ಯೆಯನ್ನು ಶಾಶ್ವತವಾಗಿ ನೀಗಿಸುವ ಯೋಜನೆಗಳು ಸಿದ್ಧಗೊಳ್ಳದಿರುವುದೇ ದೊಡ್ಡ ಲೋಪ. ಇರುವ ಯೋಜನೆಗಳೂ ಜಾರಿ ಮಾಡದಿರುವುದು ಅಪರಾಧ. ಇನ್ನಾದರೂ ಸರ್ಕಾರ ಜನತೆಯ ರಕ್ಷಣೆಗೆ ಧುಮುಕಬೇಕು. ಕಾಲಹರಣ ಮಾಡಿ - ಸಾಗಹಾಕುವ ಪ್ರಶ್ನೆ ಇದಲ್ಲ.

ಮೇಲ್ಮನೆ ರಾಜ್ಯ ಸಭೆಯಲ್ಲಿ ಸೋಲನ್ನು ಅನುಭವಿಸಿದ ಕರಾಳ ಮಸೂದೆಯನ್ನು ಹೇಗಾದರೂ ಅಂಗೀಕರಿಸಲೇಬೇಕೆಂದು 'ಜಂಟಿ ಅಧಿವೇಶನ' ಕರೆದು ವಾಜಪೇಯಿ ಸರಕಾರ ಅದನ್ನು ಕಾಯ್ದೆಯಾಗಿಸಿದೆ. ದೇಶದ ಇತಿಹಾಸದಲ್ಲೇ ಇದೊಂದು ಕರಾಳ ಅಧ್ಯಾಯ. ಆದರತ್ತ ಒಂದು ಲೇಖನ...




POTA ಎಂಬ ಭಯೋತ್ಪಾದಕ ಕಾನೂನು

ಭಯೋತ್ಪಾದನೆ ತಡೆ ಸುಗ್ರೀವಾಜ್ಞೆಯನ್ನು ಕಾಯಿದೆಯನ್ನಾಗಿ ಮಾಡಲು ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರ ಲೋಕಸಭೆಯಲ್ಲಿ ಅಂಗೀಕಾರ ಪಡೆದಿತ್ತು. ಆದರೆ ರಾಜ್ಯ ಸಭೆಯಲ್ಲಿ ಅದಕ್ಕೆ ಸೋಲುಂಟಾಗಿತ್ತು. ಆದ್ದರಿಂದ ಮಾರ್ಚ 26 ರ ಜಂಟಿ ಅಧಿವೇಶನ ಕರೆಯಲು ರಾಷ್ಟ್ರಪತಿಗಳಿಗ ಕೋರಿ, ಮಸೂದೆಯನ್ನು ಮಂಡಿಸಿ ಅಂಗಿಕಾರ ಪಡೆಯಿತು. ದೇಶಾದ್ಯಂತ ತೀವ್ರಚರ್ಚೆಗೆ ಒಳಗಾದ ಪೋಟೋ ಇನ್ನು ಮುಂದೆ ಪೋಟಾ ಆಗಲಿದೆ.

ಜನರ ಪ್ರಜಾಸತ್ತಾತ್ಮಕ ಹಕ್ಕುಗಳನ್ನು ಕಿತ್ತುಕೊಳ್ಳುವ 'ಭಯೋತ್ಪಾದಕ ನಿಗ್ರಹ ಮಸೂದೆ'ಯನ್ನು ಅಂಗೀಕರಿಸಲು ಬಿಜೆಪಿ ನೇತೃತ್ವದ ಸರ್ಕಾರ ಅನುಸರಿಸಿದ ಕ್ರಮ ಹೀನಾಯವಾದುದು. ಪ್ರಜಾಸತ್ತೆಯಲ್ಲಿ ಬಿಜೆಪಿಗೆ ನಂಬಿಕೆ ಇಲ್ಲ ಎನ್ನುವುದು ಸ್ಪಷ್ಟವಾಗಿದೆ. ಜಾತ್ಯಾತೀತ ಎಂದು ಕರೆದುಕೊಳ್ಳುವ ಇತರೆ ಮಿತ್ರಪಕ್ಷಗಳು ಅಧಿಕಾರದ ಆಸೆಗಾಗಿ ತನ್ನೆಲ್ಲ ತತ್ವಗಳನ್ನು ಬಲಿಕೊಟ್ಟಿವೆ.

ಈಗಾಗಲೇ ಇಂತಹ ಹಲವಾರು ಕಾನೂನುಗಳು ಜಾರಿಗೆ ಬಂದಿವೆ.



ವಿಪರ್ಯಾಸವೆಂದರೆ ತುರ್ತುಪರಿಸ್ಥಿತಿಯ ಕರಾಳ ದಿನಗಳಲ್ಲಿ 'ಮೀಸಾ'(MISA-ಆಂತರಿಕ ಭದ್ರತಾ ನಿರ್ವಹಣಾ ಕಾಯಿದೆ) ದಂತಹ ಕಾನೂನಿನಡಿಯಲ್ಲಿ ಜೈಲು ಸೇರಿದ ಅಡ್ವಾಣಿ, ಜಾರ್ಜ್ ಫರ್ನಾಂಡಿಸ್ ಅವರನ್ನು ಒಳಗೊಂಡ ಎನ್‌ಡಿಎ ಸರ್ಕಾರ ಭಯೋತ್ಪಾದನೆ ತಡೆ ಮಸೂದೆಯನ್ನು ಜಂಟಿ ಅಧಿವೇಶನದಲ್ಲಿ ಮಂಡಿಸಿತು. ಅಧಿಕಾರದಲ್ಲಿದ್ದಾಗ ಒಂದು, ವಿರೋಧ ಪಕ್ಷದಲ್ಲಿದ್ದಾಗ ಇನ್ನೊಂದು ಕಾನೂನು!

ಈಗಾಗಲೇ ಎಸ್ಮಾ, ಟಾಡಾ ಇತ್ಯಾದಿ ದುರುಪಯೋಗವಾದುದರ ಸಂಪೂರ್ಣ ಅರಿವು ನಮಗಿದೆ. ಇತ್ತೀಚಿಗೆ ಕೇರಳದ 5 ಲಕ್ಷ ಸರಕಾರಿ ನೌಕರರು, ತಮ್ಮ ಸವಲತ್ತುಗಳನ್ನು ಕಿತ್ತುಕೊಂಡ ಅಲ್ಲಿನ ಸರ್ಕಾರದ ನೀತಿಯ ವಿರುದ್ಧ ಮುಷ್ಕರ ನಡೆಸಿದಾಗ ಮುಖಂಡರು 'ಎಸ್ಮಾ'ದ ಅನ್ವಯ ಬಂಧಿತರಾದರು. ಕರ್ನಾಟಕದಲ್ಲಿ 'ಟಾಡಾ'ದ ಹೆಸರಿನಲ್ಲಿ ಎಷ್ಟೊಂದು ಅನಾಹುತಗಳು ನಡೆದಿವೆಯೆಂದು ಬಹುಶಃ ಜಸ್ಟೀಸ್ ಸದಾಶಿವ ಆಯೋಗ ವರದಿ ಬಂದ ನಂತರ ಹೆಚ್ಚಿಗೆ ತಿಳಿಯಬಹುದು. ಒಮ್ಮೆ ಅಧಿಕಾರದಲ್ಲಿರುವವರಿಗೆ, ಪೋಲೀಸರಿಗೆ ಇಂತಹ ಕಾನೂನುಗಳ ಅವಕಾಶ ಸಿಕ್ಕಿತೆಂದರೆ, ಅದರ ಪ್ರಯೋಜನವಾಗುವುದು ಸಮಾಜವಿರೋಧಿ ಶಕ್ತಿಗಳ ಮೇಲಲ್ಲ, ಬದಲಾಗಿ ಪ್ರಜಾಪ್ರಭುತ್ವ ಹಕ್ಕುಗಳನ್ನು ಪ್ರತಿಷ್ಠಾಪಿಸಲು ಹೋರಾಡುವವರ ಮೇಲೆ, ಜಾತ್ಯಾತೀತ ದೇಶದಲ್ಲಿ ಸಮಾಧಾನದಲ್ಲಿ ಬದುಕಬೇಕೆಂದು ಬಯಸುವ ಅಲ್ಪಸಂಖ್ಯಾತ ಸಮುದಾಯದ ಮೇಲೆ, ದಿನವಿಡೀ ಹೊಟ್ಟೆ ತುಂಬಿಸಿಕೊಳ್ಳಲು ಹೋರಾಡುವ ನಿರಕ್ಷರ ಕುಕ್ಷಿ, ಬಡಜನರ ಮೇಲೆ. ಅದಕ್ಕಾಗಿಯೇ ಜನತೆಯ ಕನಿಷ್ಟ ಪ್ರಜಾಪ್ರಭುತ್ವದ ಹಕ್ಕುಗಳನ್ನು ಕಿತ್ತುಕೊಳ್ಳುವ 'ಪೋಟಾ'ವನ್ನು ವಿರೋಧಿಸಬೇಕು.

ಜಾರಿ ಮಾಡುತ್ತಿರುವವರು ಯಾರು?

ಮೇಲಾಗಿ ಈ ಕಾನೂನನ್ನು ಜಾರಿ ಮಾಡುತ್ತಿರುವವರು ಯಾರು? ಒಂದು ಕಣ್ಣಿಗೆ ಬೆಣ್ಣೆ, ಇನ್ನೊಂದು ಕಣ್ಣಿಗೆ ಸುಣ್ಣ ಹಚ್ಚುತ್ತಿದೆ ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ. ಸಮಾಜವಿರೋಧಿ ಕಾರ್ಯಗಳನ್ನು ನಡೆಸುತ್ತಿದೆ ಎಂದು ಆಪಾದಿಸಿ 'ಸಿಮಿ'(ಸ್ಟುಡೆಂಟ್ ಇಸ್ಲಾಮಿಕ್ ಮೂವ್‌ಮೆಂಟ್ ಆಫ್ ಇಂಡಿಯಾ) ಸಂಘಟನೆಯನ್ನು 'ಬ್ಯಾನ್' ಮಾಡಿದ ಕೇಂದ್ರ ಸರ್ಕಾರ, ಗುಜರಾತ್ ನರಮೇಧದ ನಂತರ, ಒರಿಸ್ಸಾದ ವಿಧಾನಸಭೆಯ ಮೇಲಿನ ಧಾಳಿಯ ನಂತರ ವಿಶ್ವ ಹಿಂದೂಪರಿಷತ್ ಅಥವಾ ಬಜರಂಗದಳವನ್ನು 'ಬ್ಯಾನ್' ಮಾಡುವ ಗೋಜಿಗೆ ಹೋಗಲಿಲ್ಲ. 'ಅದೊಂದು ಕಪ್ಪುಚುಕ್ಕೆ', 'ನಮಗೆ ನಾಚಿಕೆ ಆಗಿದೆ' ಎಂದಷ್ಟೇ ಹೇಳಿ ತೃಪ್ತಿ ಪಟ್ಟುಕೊಂಡರು. ಇದೇ ಬಜರಂಗದಳದ ಕಾರ್ಯಕರ್ತರು ಒರಿಸ್ಸಾದಲ್ಲಿ ಕ್ರಿಶ್ಚಿಯನ್ ಪಾದ್ರಿ ಗ್ರಹಾಂ ಸ್ಟೈನ್ ಮತ್ತು ಮಕ್ಕಳನ್ನು ಸುಟ್ಟು ಕೊಂದಾಗ 'ಭಜರಂಗದಳದ ಕಾರ್ಯಕರ್ತರು ಅಂತಹವರಲ್ಲ' ಎಂದು ಅಡ್ವಾಣಿ ಸರ್ಟಿಫಿಕೇಟು ಕೊಟ್ಟದ್ದನ್ನು ದೇಶದ ಜನ ಮರೆತಿಲ್ಲ.

ಆದ್ದರಿಂದಲೇ ಈ ಕಾಯಿದೆಯನ್ನು ಜಾರಿ ಮಾಡುತ್ತಿರುವುದು ಯಾರು ಎಂಬುದು ಮುಖ್ಯವಾಗುತ್ತದೆ.

ಗುಜರಾತಿನ ಬಿಜೆಪಿ ಸರ್ಕಾರ ಗೋದ್ರಾ ಘಟನೆಯಲ್ಲಿ ಭಾಗಿಯಾದವರ ಮೇಲೆ ಪೋಟೋ ಜಾರಿಗೊಳಿಸಲು ಆದೇಶಿಸಿತ್ತು. ಆದರೆ ಗೋದ್ರಾ ಘಟನೆಯ ನಂತರದಲ್ಲಿ ನರಮೇಧ ನಡೆಸಿದವರ ಮೇಲೆ ಪೋಟೋ ಜಾರಿಗೊಳಿಸಿರಲಿಲ್ಲ. ಅಂದರೆ ಮುಸ್ಲಿಮರ ಮೇಲೆ ಈ ಕಾನೂನನ್ನು ಜಾರಿಗೊಳಿಸಲಾಗಿತ್ತು. ಪ್ರಜಾಸತ್ತಾತ್ಮಕ ಶಕ್ತಿಗಳಿಂದ ತೀವ್ರ ಪ್ರತಿರೋಧ ಬಂದ ನಂತರ'ಸದ್ಯಕ್ಕೆ' ಗೋದ್ರಾ ಘಟನೆಯಲ್ಲಿ ಬಂಧಿತರಾದವರಿಗೆ ಪೋಟೋ ಜಾರಿಗೊಳಿಸಬಾರದೆಂದು ಆದೇಶ ನೀಡಿದೆ! ಇಂತಹ ಸರಕಾರದ ಅಡಿಯಲ್ಲಿ ಪೋಟೋ ಕಾನೂನು ನಿಷ್ಪಕ್ಷವಾಗಿ ಬಳಸಲು ಸಾಧ್ಯವೇ ಇಲ್ಲ.

ಭಯೋತ್ಪಾದಕ ಶಕ್ತಿಗಳನ್ನು ನಿಗ್ರಹಿಸುವುದು ಹೇಗೆ?

ಬರಿಯ ಕಾಯಿದೆಗಳ ಮೂಲಕ ಭಯೋತ್ಪಾದಕ ಶಕ್ತಿಗಳನ್ನು ನಿಗ್ರಹಿಸಲು ಸಾಧ್ಯವಿಲ್ಲ. ಹಾಗಾದರೆ ಪೋಟೋ ಜಾರಿಯಲ್ಲಿರುವಾಗಲೇ ಸಂಸತ್ತಿನ ಮೇಲೆ ಧಾಳಿ ಹೇಗೆ ಸಾಧ್ಯವಾಯಿತು.? ಅದೂ ಕೂಡಾ ಇಂತಹ ಧಾಳಿ ನಡೆಯಬಹುದು ಎಂಬ ಸುದ್ದಿ ಗೂಢಾಚಾರ ಸಂಸ್ಥೆಗಳಮೂಲಕ ತಿಳಿದಿದ್ದೂ ಒಂದು ದೇಶದಲ್ಲಿನ ಜನರ ನಡುವಿನ ಅಸಮಾನತೆ, ತಾರತಮ್ಯ, ದಬ್ಬಾಳಿಕೆ, ಶ್ರೀಮಂತರು, ಅತಿ ಶ್ರೀಮಂತರಾಗುವುದು, ಬಡವರು ಇನ್ನಷ್ಟು ಬಡವರಾಗುವುದು - ಭಯೋತ್ಪಾದನೆ ಬೆಳೆಯಲು ಸಹಾಯಕವಾದರೆ ದೇಶಗಳ ನಡುವಿನ ಅಸಮಾನತೆ ಭಯೋತ್ಪಾದನೆಯನ್ನು ಇನ್ನಷ್ಟು ವಿಕಾರಗೊಳಿಸುತ್ತದೆ. ಅಸಮಾನತೆಯನ್ನು ತೊಡೆದು ಹಾಕುವುದರಿಂದ ಭಯೋತ್ಪಾದಕ ಶಕ್ತಿಗಳನ್ನು ನಿಗ್ರಹಿಸುವುದು ಸಾಧ್ಯ.

ಸ್ವಾತಂತ್ರ್ಯ ಬಂದ 50 ವರ್ಷಗಳಲ್ಲಿ ಕೆಲವೊಂದು ಜನರಿಗೆ ಲಾಭವಾಯಿತಾದರೂ ಶ್ರೀಮಂತ - ಬಡವರ ನಡುವಿನ ಅಂತರ ದಿನೇ ದಿನೇ ಹೆಚ್ಚುತ್ತಿದೆ. ಜಾಗತೀಕರಣದ ನೀತಿಗಳು ಜಾರಿಯಾದ ನಂತರವಂತೂ ಈ ಅಂತರ ತೀವ್ರಗತಿಗೆ ಏರುತ್ತಿದೆ. ಇದರಿಂದ ಹತಾಶರಾದಜನ, ಪ್ರಜಾಪ್ರಭುತ್ವ ಚಳುವಳಿಗೆ ದನಿಗೂಡಿಸುವ ಬದಲಾಗಿ, ಭಯೋತ್ಪಾದನೆ, ಮೂಲಭೂತವಾದಿ, ಕೋಮುವಾದಿ ಸಿದ್ಧಾಂತಗಳಿಗೆ ಆಕರ್ಷಿತರಾಗುತ್ತಿದ್ದಾರೆ. ಪಟ್ಟಭದ್ರ ಹಿತಾಸಕ್ತಿಗಳಿಂದ ಸಾಕಷ್ಟು ಪ್ರಚೋದನೆಯೂ ಸಿಗುತ್ತಿದೆ.

ವಿಶಾಲವಾದ ಪ್ರಜಾಪ್ರಭುತ್ವ ಚಳುವಳಿಯನ್ನು ನಡೆಸುವುದರ ಮೂಲಕ ಹಾಗೂ ಜನಸಾಮಾನ್ಯರ ಮೂಲಭೂತ ಸಮಸ್ಯೆಗಳಿಗೆ ಪರಿಹಾರ ದೊರಕಿಸುವ ಮೂಲಕ ಭಯೋತ್ಪಾದಕತೆಯನ್ನು ನಿಗ್ರಹಿಸಲು ಸಾಧ್ಯ. ಅದಕ್ಕೆ ಪೋಟೋ ಅಥವಾ ಪೋಟಾ ಬೇಕಾಗಿಲ್ಲ. ಈಗ ಜಾರಿಯಲ್ಲಿರುವ ಕಾನೂನುಗಳೇ ಸಾಕಾಗುತ್ತದೆ ಎಂದು ಸುಪ್ರೀಂಕೋರ್ಟ್‌ನ ನಿವೃತ್ತ ಮುಖ್ಯನ್ಯಾಯಮೂರ್ತಿ ಶ್ರೀ ಜೆ.ಎಸ್.ವರ್ಮಾರಾದಿಯಾಗಿ ಅನೇಕ ತಜ್ಞರು ಅಭಿಪ್ರಾಯ ಪಟ್ಟಿದ್ದಾರೆ.

ಅಮೆರಿಕಾಕ್ಕೆ ಸಂತೋಷ:

ಜಂಟಿ ಅಧಿವೇಶನದಲ್ಲಿ ಬಹುಮತದ ಆಧಾರದಲ್ಲಿ ಭಯೋತ್ಪಾದನೆ ನಿಗ್ರಹ ಕಾನೂನು ಅಂಗೀಕಾರ ಪಡೆಯಿತಾದರೂ ದೇಶದ ಬಹುಸಂಖ್ಯಾತ ಜನ ಅದನ್ನು ವಿರೋಧಿಸುತ್ತಿದ್ದಾರೆ. ಆದರೆ ಪೋಟೋ ಅಂಗೀಕಾರದಿಂದ ಅಮೆರಿಕದ ಅಧ್ಯಕ್ಷ ಜಾರ್ಜ್ ಬುಶ್ ಮತ್ತು ಪಂಗಡಗಳಿಗೆ ಸಂತೋಷವಾಗಿದೆ. ಅಲ್ಲಿನ ರಾಜ್ಯಖಾತೆಯ ವಕ್ತಾರ ರಿಚರ್ಡ್‌ಬೋಶರ್ ಅವರು ಪತ್ರಿಕಾ ಪ್ರತಿನಿಧಿಗಳೊಂದಿಗೆ ಮಾತನಾಡುತ್ತಾ 'ಭಾರತದ ಸಂಸತ್ತು ಪೋಟೋ ಕಾಯಿದೆ ಅಂಗೀಕಾರಮಾಡಿದುದರಿಂದ ನಮಗೆ ಸಂತೋಷವಾಗಿದೆ' ಎಂದು ತಿಳಿಸಿದ್ದಾರೆ. ವಾಜಪೇಯಿ, ಅಡ್ವಾಣಿಯವರ ಸರಕಾರ ಅಮೆರಿಕಾದ ಅಣತಿಯಂತೆ ಈ ಕಾನೂನು ಜಾರಿ ಮಾಡಿದೆ ಎಂಬುದು ಸ್ಪಷ್ಟ. ಇಂತಹದ್ದನ್ನೇ ಸಿಪಿಎಂನ ನಾಯಕ ಸೋಮನಾಥ ಚಟರ್ಜಿಯವರು ಟೀಕಿಸಿದರು. ಅಲ್ಲದೇ ಅಮೇರಿಕಾದ ಕುರಿತೇ ಮಾತನಾಡುವ ಅಡ್ವಾಣಿಯನ್ನು ಲಾಲ್‌ಕೃಷ್ಣ ಬುಶ್ ಎಂದು ಕರೆದರು.

ಪೋಟಾ ಜಾರಿ ಮಾಡುವುದಿಲ್ಲ-ಸಿಪಿಐ(ಎಂ):

ಕಾನೂನು ಮತ್ತು ಸುವ್ಯವಸ್ಥೆ ರಾಜ್ಯ ಸರ್ಕಾರಗಳ ವ್ಯಾಪ್ತಿಗೆ ಬರುವುದರಿಂದ ತಾನು ಆಡಳಿತ ನಡೆಸುತ್ತಿರುವ ರಾಜ್ಯಗಳಲ್ಲಿ 'ಪೋಟಾ'ವನ್ನು ಜಾರಿಗೊಳಿಸುವುದಿಲ್ಲ ಎಂದು ಸಿಪಿಐ(ಎಂ) ತನ್ನ 17ನೇ ಮಹಾಧಿವೇಶನದಲ್ಲಿ ಬಹಿರಂಗಪಡಿಸಿದೆ. ಹಾಗೂ ಈ ಕಾನೂನನ್ನು ಅಲ್ಪಸಂಖ್ಯಾತರ ವಿರುದ್ಧ ರಾಜಕೀಯ ಎದುರಾಳಿಗಳ ವಿರುದ್ಧ ಬಳಸಿಕೊಳ್ಳುವ ಸಾಧ್ಯತೆ ಹೆಚ್ಚಿರುವುದರಿಂದ ವಿರೋಧ ಪಕ್ಷಗಳು ಆಡಳಿತ ನಡೆಸುತ್ತಿರುವ ರಾಜ್ಯಗಳಲ್ಲಿ ಅದನ್ನು ಬಳಸಬಾರದೆಂದು ಸಿಪಿಐ(ಎಂ) ಕರೆ ನೀಡಿದೆ.

ದೇಶದಲ್ಲಿ ಸಾಧಾರಣ 20 ಕ್ಕೂ ಹೆಚ್ಚು ರಾಜ್ಯಗಳಲ್ಲಿ ವಿರೋಧ ಪಕ್ಷಗಳು ಆಡಳಿತದಲ್ಲಿವೆ. ಕೇಂದ್ರದಲ್ಲಿ 'ಪೋಟಾ'ಕಾಯಿದೆಯನ್ನು ಖಂಡತುಂಡವಾಗಿ ವಿರೋಧಿಸಿದ ಕಾಂಗ್ರೆಸ್ ರಾಜ್ಯಗಳಲ್ಲಿ ಏನು ಮಾಡುತ್ತದೆ ಎಂಬ ಪ್ರಶ್ನೆಯಿದೆ. ಕರ್ನಾಟಕದ ರಾಜ್ಯ ಸರ್ಕಾರ ಇನ್ನೂ ಸ್ಪಷ್ಟವಾದ ನಿರ್ಧಾರ ತೆಗೆದುಕೊಂಡಿಲ್ಲ. ಒಟ್ಟಾರೆ ಇಂತಹ ಕರಾಳ ಕಾನೂನು ಜಾರಿ ಆಗಬಾರದು. ಎಲ್ಲರೂ ವಿರೋಧಿಸಬೇಕು.

- ಬಾಲ



ಪಕ್ಷದ ಮಹಾಧಿವೇಶನ ಪಕ್ಷದ ಉನ್ನತ, ಅಂಗ, ಆದ್ದರಿಂದ ಪಕ್ಷದ ಜೀವನದಲ್ಲಿ ಅದು ಮಹತ್ತರವಾದದ್ದು. 'ಎರಡು ಮಹಾಧಿವೇಶನಗಳ ನಡುವಿನ ಅತ್ಯುನ್ನತ ಸಮಿತಿಯಾದ' 'ಕೇಂದ್ರ ಸಮಿತಿ'ಯನ್ನು ಅಧಿವೇಶನ ಆಯ್ಕೆ ಮಾಡುತ್ತದೆ. ಅಂತರಾಷ್ಟ್ರೀಯ, ರಾಷ್ಟ್ರೀಯ ಪರಿಸ್ಥಿತಿ, ಕಳೆದ ಅಧಿವೇಶನದ ಪಕ್ಷದ ನೀತಿಗಳ ಜಾರಿ ಹಾಗೂ ಅವುಗಳಲ್ಲಿನ ಬದಲಾವಣೆ, ಹೊಸ ಪರಿಸ್ಥಿತಿಯ ಸವಾಲುಗಳನ್ನು ಎದುರಿಸಲು ಪಕ್ಷದ ನೀತಿಗಳ ಬದಲಾವಣೆ ಅಥವಾ ಮಾರ್ಪಾಡು ಕುರಿತಂತೆ ಸವಿವರ ಚರ್ಚೆಯ ನಂತರ ಕೇಂದ್ರ ಸಮಿತಿಯ ಆಯ್ಕೆಗೆ ಈ ಚುನಾವಣೆ ನಡೆಯುತ್ತದೆ.

ಮಹಾಧಿವೇಶನಕ್ಕೆ ಪೂರ್ವದಲ್ಲಿ ಸಂಘಟನೆಯ ಎಲ್ಲಾ ಹಂತದ ಸಮ್ಮೇಳನಗಳು ನಡೆಯಲಿವೆ. ಈ ಸಮ್ಮೇಳನಗಳು 1. ಆಯಾಯ ಹಂತದ ರಾಜಕೀಯ-ಸಂಘಟನಾ ಕೆಲಸದ ವಿಮರ್ಶೆ ಮತ್ತು 2. ಕೇಂದ್ರ ಸಮಿತಿ ತಯಾರಿಸುವ ಕರಡು ರಾಜಕೀಯ ವರದಿಯ ಕುರಿತು ಪಕ್ಷದ ಎಲ್ಲಾ ಘಟಕಗಳು ಚರ್ಚಿಸಲು, ಅನುವುಗೊಳಿಸಲು ಅವುಗಳ ಟೀಕೆಗಳನ್ನು ಪಡೆಯಲು ನಡೆಯುತ್ತವೆ. ಪ್ರತಿ ಅಧಿವೇಶನದ ಸಂದರ್ಭದಲ್ಲಿಯೂ ದೇಶದ ಎಲ್ಲೆಡೆಯ ಸಂಗಾತಿಗಳಿಂದ ಕೇಂದ್ರ ಸಮಿತಿಯು ಸ್ವೀಕರಿಸುವ ದೊಡ್ಡ ಸಂಖ್ಯೆಯ ತಿದ್ದುಪಡಿಗಳು ಪಕ್ಷದ ಆಂತರಿಕ ಪ್ರಜಾಪ್ರಭುತ್ವದ ಶ್ರೀಮಂತಿಕೆಯ ಸಾಕ್ಷಿಯಾಗಿವೆ. ಈ ವರ್ಷ ಕರಡು ರಾಜಕೀಯ ಗೊತ್ತುವಳಿಗೆ 4780 ತಿದ್ದುಪಡಿಗಳು ಮತ್ತು 697 ಸಲಹೆಗಳು ಹಾಗೂ ಅಭಿಪ್ರಾಯಗಳು ಕೇಂದ್ರ ಸಮಿತಿಗೆ ಬಂದಿದ್ದವು, 400ಕ್ಕೂ ಹೆಚ್ಚು ಸಂಗಾತಿಗಳು ಸೂಚಿಸಿದ್ದ ಮೇಲಿನದರಲ್ಲಿ 98ನ್ನು ಅಧಿವೇಶನ ಪೂರ್ವದಲ್ಲಿ ಕೇಂದ್ರ ಸಮಿತಿ ಅಂಗೀಕರಿಸಿತ್ತು.

ತೆಲಂಗಾಣ ಹೋರಾಟದ ಖ್ಯಾತಿಯ ನೆಲವಾದ ಹೈದರಾಬಾದ್‌ನಲ್ಲಿ ಸಿ.ಪಿ.ಐ(ಎಂ)'ನ 17ನೇ ಮಹಾಧಿವೇಶನ ಮಾರ್ಚ್ 19ರಿಂದ 24ರವರೆಗೆ ಜರುಗಿತು. ರಾಜಕೀಯ ಗೊತ್ತುವಳಿಯ ಮಂಡನೆ, ಚರ್ಚೆ ಹಾಗೂ ಅಂಗೀಕಾರಕ್ಕೆ ಅಧಿವೇಶನದ ಮೊದಲ ಮೂರು ದಿನಗಳನ್ನು ಮೀಸಲಿಡಲಾಗಿತ್ತು.

ವಿದ್ಯಮಾನಗಳ ಪರಾಮರ್ಶೆ

ಕಳೆದ ಮಹಾಧಿವೇಶನದಿಂದೀಚಿನ ಅಂತರಾಷ್ಟ್ರೀಯ ಪರಿಸ್ಥಿತಿಯನ್ನು ಪರಾಮರ್ಶಿಸಿದ ಗೊತ್ತುವಳಿಯು ಪ್ರಮುಖವಾಗಿ ಸೆಪ್ಟೆಂಬರ್ 11 ರ ಘಟನೆ ನಂತರದ ನಾಟಕೀಯ ಬದಲಾವಣೆಗಳನ್ನು ಉಲ್ಲೇಖಿಸಿತು. ಪರಿಸ್ಥಿತಿಯ ಉಪಯೋಗ ಮಾಡಿ, ಅಧ್ಯಕ್ಷ ಬುಶ್ "ಭಯೋತ್ಪಾದನೆ ವಿರುದ್ಧ ಸಮರ ಸಾರಿ" ಈ ಯುದ್ಧದಲ್ಲಿ ಅಮೇರಿಕಾ ಜೊತೆ ನಿಲ್ಲದ ಎಲ್ಲರನ್ನು ಭಯೋತ್ಪಾದಕರ ಪರ ಎಂದು ದೂಷಿಸಿದರು. ತದನಂತರ ಈ ಪರಿಸ್ಥಿತಿಯನ್ನು ಉಪಯೋಗಿಸಿ ಅಭಿವೃದ್ಧಿ ಹೊಂದುತ್ತಿರುವ ಜಗತ್ತಿನ ರಾಷ್ಟ್ರಗಳನ್ನು ಬಗ್ಗುಬಡಿದು ಅಮೇರಿಕಾ ಹೆಜಮಾನಿಕೆಯನ್ನು ಒಪ್ಪಿಕೊಳ್ಳುವಂತೆ, ಮತ್ತು ಆಕ್ರಮಣಕಾರಿ ಯುದ್ಧವನ್ನು ಆಫಘಾನಿಸ್ತಾನದಲ್ಲಿ ಮಾತ್ರವಲ್ಲದೆ ಇತರೆ ರಾಷ್ಟಗಳಲ್ಲಿಯೂ ನಡೆಸಲು ಯತ್ನಿಸಿದೆ.



ಪರ್ಯಾಯ ರೂಪಿಸಲು ಪ್ರ...

17ನೇ ಮಹಾ...

ಸಿಪಿಐ(ಎಂ) ನ 17ನೇ ಐತಿಹಾಸಿಕ ಮಹಾಧಿವೇಶನ ಇದೇ ಮಾರ್ಚ್ 19 ರಿಂದ 24 ರ... ಹೈದ್ರಾಬಾದ್‌ನಲ್ಲಿ ಅತ್ಯಂತ ಯಶಸ್ವಿಯಾಗಿ ಸಮಾರೋಪಗೊಂಡಿದೆ. ಅದರ ಒಟ್ಟು ಕಲಾ... ತಿರುಳನ್ನು ಪಕ್ಷಿನೋಟದಲ್ಲಿ ವಿವರಿಸಿದ್ದಾರೆ ಪುನರಾಯ್ಕೆಯಾಗಿರುವ ಪ್ರಧಾನ ಕಾರ್ಯದರ್ಶಿ...

ಹರ್ಕಿಶನ್ ಸಿಂಗ್ ಸುರ್ಜಿತ್

ಇರಾಕ್ ಅವರ ಮುಂದಿನ ಗುರಿ. ಇರಾನ್, ಇರಾಕ್, ಉತ್ತರ ಕೋರಿಯಾ ಮತ್ತು ಲಿಬಿಯಾದಂತಹ ರಾಷ್ಟ್ರಗಳ ಮೂಲಕ ಹಾದು ಹೋಗುವ "ದುಷ್ಟರ ಕೂಟ'ದ ಬಗ್ಗೆ ಅವರು ಮಾತನಾಡುತ್ತಾರೆ.

ನಂತರ ಖಂಡಾಂತರ ಕ್ಷಿಪಣಿ ವಿರೋಧಿ ಒಪ್ಪಂದ (ABM Treaty)ವನ್ನು ಏಕಪಕ್ಷೀಯವಾಗಿ ರದ್ದುಮಾಡಿ, ಅದರ ಹಿಂದೆಯೇ ಅಮೇರಿಕಾ ಯೋಜನೆಯ ಕುಖ್ಯಾತ ರಾಷ್ಟ್ರೀಯ ಕ್ಷಿಪಣಿ ರಕ್ಷಣೆ' (NMD)ಯನ್ನು ಘೋಷಿಸಿ ಅಣ್ವಸ್ತ್ರ ಯುದ್ಧದ ಅಪಾಯವನ್ನು ಮುಂದುವರಿಸಲು ಯತ್ನಿಸಿದೆ. ನಮ್ಮ ಪಕ್ಷದ ಮಹಾಧಿವೇಶನದ ಹಿಂದಿನ ದಿನ NMDಯು ನಿರ್ಣಾಯಕ ಪರೀಕ್ಷೆಯನ್ನು ನಡೆಸಿದೆ. ಇಂತಹ ಯತ್ನಗಳು ವಿಶ್ವಶಾಂತಿಗೆ ಅಪಾಯ ಒಡ್ಡಿವೆ, ಮತ್ತು ಚೀನಾ ಮತ್ತು ರಷ್ಯಾ ನಡುವಿನ ನಿರ್ಣಾಯಕ ಹೊಂದಾಣಿಕೆಗೆ ಬರುವಂತೆ ಮಾಡಿದೆ.

ಪ್ರತಿಗಾಮಿ ಆಕ್ರಮಣ

ಸೆಪ್ಟೆಂಬರ್ 11 ರ ನಂತರದ ದಿನಗಳು ವಿಶ್ವದಾದ್ಯಂತ ಪ್ರತಿಗಾಮಿ ಆಕ್ರಮಣಗಳಿಂದ ಕೂಡಿದೆ. ಇದರ ಕೆಟ್ಟ ಉದಾಹರಣೆ ಎಂದರೆ ಪ್ಯಾಲಿಸ್ಟೇನಿನಲ್ಲಿ ಇಂದು ನಡೆಯುತ್ತಿರುವ ಘಟನೆಗಳು. ವಿಶ್ವಸಂಸ್ಥೆಯ ಭದ್ರತಾ ಮಂಡಳಿಯ ಎಲ್ಲಾ 4 ನಿರ್ಣಯಗಳನ್ನು ಉಲ್ಲಂಘಿಸಿ ಬಹಿರಂಗವಾಗಿ ಅಮೇರಿಕಾವು ಪ್ಯಾಲಿಸ್ಟೇನ್ ಪ್ರದೇಶಗಳ ಮೇಲಿನ ಶರೂನ್ ಸರ್ಕಾರದ ಆಕ್ರಮಣಗಳನ್ನು ಬೆಂಬಲಿಸುತ್ತಿದೆ. ಅರಾಫತ್ ರವರನ್ನು ಅವರ ಸ್ವಗೃಹದಲ್ಲಿಯೇ ದಿಗ್ಬಂಧಿಸಲಾಗಿದೆ, ನಗರ ಬಿಟ್ಟು ಹೊರ ಹೋಗಲು ಅನುಮತಿ ನಿರಾಕರಿಸಲಾಗಿದೆ.

ಬಿಕ್ಕಟ್ಟು

ನಾವು ನಮ್ಮ 16ನೇ ಮಹಾಧಿವೇಶನದಲ್ಲಿ ಎಚ್ಚರಿಸಿದ್ದ ವಿಶ್ವ ಆರ್ಥಿಕ ಬಿಕ್ಕಟ್ಟು ತೀವ್ರಗೊಳ್ಳುತ್ತಿರುವ ಪರಿಸ್ಥಿತಿಯಲ್ಲಿ ಇದು ಬಂದಿದೆ. ವ್ಯಾಪಾರಿ ವರ್ತುಲ, ತೀವ್ರ ಹಣಕಾಸು ಬಿಕ್ಕಟ್ಟು, ಇತ್ತೀಚಿನ ಹಾಗೂ ಕೊನೆಯದಲ್ಲದ ಉದಾಹರಣೆಗೆ ಅರ್ಜೆಂಟಿನಾದಂತಹ ಅನೇಕ ಆರ್ಥಿಕತೆಗಳ ನಾಟಕೀಯ ಕುಸಿತದ ರೂಪದಲ್ಲಿ ಈ ಬಿಕ್ಕಟ್ಟು ಪರಿಣಮಿಸಿದೆ. ನಿರೀಕ್ಷಿಸಿದಂತೆ ಸಾಮ್ರಾಜ್ಯಶಾಹಿಗಳು ಈ ಬಿಕ್ಕಟ್ಟಿನ ಹೊರೆಯನ್ನು ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಿಗೆ ವರ್ಗಾಯಿಸುತ್ತಿದೆ. ರಾಷ್ಟ್ರಗಳ ಸಾರ್ವಭೌಮತೆಯನ್ನು ಕಡೆಗಣಿಸಿ ಅವುಗಳನ್ನು ಜಾಗತೀಕರಣ ಪ್ರಕ್ರಿಯೆಗಳಿಗೆ ಒಳಪಡಿಸುತ್ತಾ, ತ್ರಿವಳಿಗಳಾದ ಐಎಂಎಫ್ ವಿಶ್ವ ಬ್ಯಾಂಕ್ ಮತ್ತು ವಿಶ್ವವ್ಯಾಪಾರ ಸಂಘಟನೆಯ ನೀತಿಗಳು ಈ ಗುರಿಯ ಸಾಧನೆಗೆ ನಿರ್ದೇಶಿತವಾಗಿವೆ.

ಜನ ಪ್ರತಿರೋಧ

ಆದರೆ ಹೊಸ ಲಕ್ಷಣವೆಂದರೆ, ಈ ಸಾಮ್ರಾಜ್ಯಶಾಹಿ ಆಕ್ರಮಣಗಳ ವಿರುದ್ಧ ಜನಪ್ರಿಯ ಪ್ರತಿರೋಧಗಳು ಮೂಡಿ ಬರುತ್ತಿದ್ದು, ಅದು ಜಾಗತಿಕ ಆಯಾಮವನ್ನು ಪಡೆದು ಕೊಳ್ಳುತ್ತಿರುವುದು. ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿ ಮಾತ್ರವಲ್ಲದೇ, ಮುಂದುವರಿದ ಬಂಡವಾಳಶಾಹಿ ರಾಷ್ಟ್ರಗಳಲ್ಲಿಯೂ ಜಾಗತೀಕರಣದ ವಿರುದ್ಧ ನೂತನ ಮಾದರಿಯ ಕಾರ್ಯಾಚರಣೆ ಹಾಗೂ ಹೋರಾಟಗಳು ಮೂಡಿ ಬರುತ್ತಿವೆ. ಕಮ್ಯುನಿಷ್ಟ್ ಹಾಗೂ ಪ್ರಗತಿಪರ ಶಕ್ತಿಗಳ ಮರು ಹೊಂದಾಣಿಕೆಯು ಈ ಸಂದರ್ಭದಲ್ಲಿ ನಡೆಯುತ್ತಿದೆ. ಈ ಎಲ್ಲಾ ಬೆಳವಣಿಗೆಗಳನ್ನು ಗೊತ್ತುವಳಿಯಲ್ಲಿ ಗುರುತಿಸಲಾಗಿದೆ.

ಬಿಜೆಪಿ ತೊಲಗಬೇಕು

ಪಕ್ಷದ ಸ್ವತಂತ್ರ ಶಕ್ತಿ ವೃದ್ಧಿಗೆ ಕರೆ

ಪಕ್ಷದ ಸ್ವತಂತ್ರ ಶಕ್ತಿ ಮತ್ತು ಪಾತ್ರವನ್ನು ಉತ್ತಮಗೊಳಿಸುವ ಪ್ರಾಮುಖ್ಯತೆಯ ಬಗ್ಗೆ ನಿರ್ಣಯದಲ್ಲಿ ಒತ್ತು ನೀಡಲಾಗಿದೆ. ನಮ್ಮ ಸ್ವತಂತ್ರ ರಾಜಕೀಯ ಪ್ರಕ್ಷೋಭೆ ಮತ್ತು ಸಾಮೂಹಿಕ ಚಳುವಳಿಗಳ ಮೇಲೆ ಇನ್ನೂ ಹೆಚ್ಚಿನ ಒತ್ತು ನೀಡಲಾಗಿದೆ. ಸಂಯುಕ್ತ ರಂಗದ ತಂತ್ರಗಳನ್ನು ನಮ್ಮ ಪ್ರಭಾವವನ್ನು ವಿಸ್ತರಿಸಲು ಬಳಸಿಕೊಳ್ಳಬೇಕಾಗಿದೆ.

ಎರಡು ಅಧಿವೇಶನಗಳ ನಡುವೆ ಪಕ್ಷದ ಸದಸ್ಯತ್ವ ಶೇ. 10.9ನೇ ಬೆಳವಣಿಗೆಯನ್ನು ತೋರಿಸಿದೆ. ಸದಸ್ಯತ್ವ ಈಗ 7,96,063 ಸಾಮೂಹಿಕ ಸಂಘಟನೆಗಳ ಸದಸ್ಯತ್ವವೂ ಶೇ. 8.7ರ ಬೆಳವಣಿಗೆ ತೋರಿಸಿ 4 ಕೋಟಿಯನ್ನು ಮುಟ್ಟಿದೆ. ಇದೊಂದು ಗಮನಾರ್ಹ ಸಾಧನೆಯಾಗಿದ್ದರೂ ರಾಜಕೀಯ ಸಂಘಟನಾತ್ಮಕ ನಿರ್ಣಯದಲ್ಲಿ ಕೆಲವು ಗಾಭರಿ ಹುಟ್ಟಿಸುವ ಪ್ರವೃತ್ತಿಗಳನ್ನು ಗುರ್ತಿಸಲಾಗಿದೆ. ಇದರಲ್ಲಿ ಮೊದಲನೆಯದು ನಿರಂತರವಾದ ಅಸಮಾನ ಬೆಳವಣಿಗೆ ಈ ಹೆಚ್ಚಳವು ಕೇರಳ, ಬಂಗಾಳ ಮತ್ತು ತ್ರಿಪುರದಿಂದ ರಾಜ್ಯಗಳಲ್ಲಿ ಪಕ್ಷದ ಮತ್ತು ಕೆಲವು ಪ್ರಧಾನ ಸಾಮೂಹಿಕ ಸಂಘಟನೆಗಳ ಸದಸ್ಯತ್ವ ಕಡಿಮೆಯಾಗುತ್ತಾ ಬರುತ್ತಿರುವುದು.

ಸೈದ್ಧಾಂತಿಕ ಸ್ಪಷ್ಟತೆ ಮತ್ತು ರಾಜಕೀಯ ಕೆಲಸಗಳಲ್ಲಿ ಭಾಗವಹಿಸುವಿಕೆಯಂತಹ ವಿಚಾರದಲ್ಲೂ ಪಕ್ಷದ ಸದಸ್ಯತ್ವದ ಗುಣಮಟ್ಟ ತೃಪ್ತಿಕರವಾಗಿಲ್ಲ ಎಂಬುದನ್ನು ಕೂಡ ವಿಮರ್ಶಾ ವರದಿ ಗುರುತಿಸಿದೆ. ಮಹಿಳೆ, ದಲಿತರು, ಅಲ್ಪಸಂಖ್ಯಾತರ ಪ್ರಾತಿನಿಧ್ಯವೂ ಕಡಿಮೆಯಿದೆ ಗುಣಮಟ್ಟವನ್ನು ಹೆಚ್ಚಿಸಲು ಮತ್ತು ವಿಸ್ತರಿಸಲು ಪಕ್ಷದ ವಿವಿಧ ಅಂಗಗಳನ್ನು ಕ್ರಿಯಾಶೀಲಗೊಳಿಸಲು ಅನೇಕ ಶುದ್ದೀಕರಣ(ತಿದ್ದುಪಡಿ ಚಳುವಳಿ) ಕ್ರಮಗಳನ್ನು ಸೂಚಿಸಲಾಯಿತು. ಇದರಲ್ಲಿ ಮುಖ್ಯವಾದುದು ಸೈದ್ಧಾಂತಿಕ ಕೆಲಸ, ನಿರ್ದಿಷ್ಟವಾಗಿ ಪಕ್ಷದ ಶಿಕ್ಷಣ, ಹಾಗೂ ಸಾಮೂಹಿಕ ಕಾರ್ಯಾಚರಣೆಯನ್ನು ಮತ್ತು ಹೋರಾಟಗಳನ್ನು ಹರಿಯಬಿಡುವುದು ಕೆಳಗಿನವುಗಳನ್ನು ತಕ್ಷಣದ ಸಂಘಟನಾತ್ಮಕ ಗುರಿಗಳೆಂದು ಗುರುತಿಸಲಾಯಿತು.

ಸಂಘಟನಾ ನಿರ್ಣಯ

2. ಪಕ್ಷವನ್ನು ತೀವ್ರವಾಗಿ ವಿಸ್ತರಿಸುವುದು, ವಿಶೇಷವಾಗಿ ದುರ್ಬಲ ರಾಜ್ಯಗಳಲ್ಲಿ.
3. ಸೈದ್ಧಾಂತಿಕ ಕೆಲಸವನ್ನು ಬಲಗೊಳಿಸುವುದು.
4. ಸದಸ್ಯತ್ವ ನೊಂದಾವಣೆಯ ಗುಣಮಟ್ಟವನ್ನು ಹೆಚ್ಚಿಸುವುದು, ಸಹಾಯಕ ಗುಂಪುಗಳು ಮತ್ತು ಶಾಖೆಗಳ ಕೆಲಸವನ್ನು ಉತ್ತಮಪಡಿಸುವುದು.
5. ಪ್ರಜಾಪ್ರಭುತ್ವೀಯ ಕೇಂದ್ರವಾದವನ್ನು ಬಲಗೊಳಿಸುವುದಕ್ಕೆ, ಸಂಸದೀಯ ಸಂದರ್ಭಸಾಧಕತನವನ್ನು ತೊಡೆದುಹಾಕಲು ಮತ್ತು ಕಮ್ಯುನಿಸ್ಟ್ ನಡವಳಿಕೆಗಳಿಗೆ ಬದ್ಧವಾಗಿರುವುದಕ್ಕೆ ಶುದ್ಧೀಕರಣ ಚಳುವಳಿಯನ್ನು ಕೈಗೊಳ್ಳುವುದು.

ವಿದೇಶಗಳಿಂದ 22 ಸೌಹಾರ್ದ ಪಕ್ಷಗಳು ತಮ್ಮ ಪ್ರತಿನಿಧಿಗಳನ್ನು ಅಧಿವೇಶನಕ್ಕೆ ಕಳುಹಿಸಿಕೊಟ್ಟಿದ್ದವು. ಆಂತರಿಕ ಕಾರಣಗಳಿಗಾಗಿ ರಶಿಯನ್ ಒಕ್ಕೂಟದ ಕಮ್ಯುನಿಸ್ಟ್ ಪಕ್ಷ ಮತ್ತು ಇತರೆ ಕೆಲವು ಕಮ್ಯುನಿಸ್ಟ್ ಪಕ್ಷಗಳು ಪ್ರತಿನಿಧಿಗಳನ್ನು ಕಳುಹಿಸಲು ಸಾಧ್ಯವಾಗಿರಲಿಲ್ಲ. ಆದರೆ ಸಂದೇಶಗಳನ್ನು [illegible] ಸಮ್ಮೇಳನದ ಎಲ್ಲಾ ಕಲಾಪಗಳಲ್ಲಿ ಕ್ರಿಯಾಶೀಲವಾಗಿ ಭಾಗವಹಿಸಿದ್ದರು.

ಹೊಸ ಕೇಂದ್ರ ಸಮಿತಿ

8 ಜನ ಮಹಿಳೆಯರನ್ನೊಳಗೊಂಡಂತೆ 79 ಜನರ ಕೇಂದ್ರ ಸಮಿತಿಯನ್ನು ಆರಿಸಲಾಯಿತು. (2 ಸ್ಥಾನಗಳು ಖಾಲಿ ಇವೆ)

ಬೃಹತ್ ರ್‍ಯಾಲಿ

ಬೃಹತ್ ರ್‍ಯಾಲಿಯೊಡನೆ ಮಾರ್ಚ್ 24 ರಂದು ಮಹಾಧಿವೇಶನವನ್ನು ಮುಕ್ತಾಯಗೊಳಿಸಲಾಯಿತು. ರ್‍ಯಾಲಿಗೆ ಜನರ ಅಮೋಘ ಸ್ಪಂದನವು ಪಕ್ಷ ಮತ್ತು ಸಾಮೂಹಿಕ ಸಂಘಟನೆಗಳು ಇತ್ತೀಚಿನ ದಿನಗಳಲ್ಲಿ ಆಂಧ್ರಪ್ರದೇಶದಲ್ಲಿ ವೇಗವಾಗಿ ಬೆಳೆಯುತ್ತಿರುವುದರ ಪ್ರತಿಫಲನವಾಗಿದ್ದವು. ವಿದ್ಯುತ್ ಹೋರಾಟ ಮತ್ತು ಸಾರಿಗೆ ನೌಕರರ ಹೋರಾಟವೂ ಸೇರಿದಂತೆ ನಮ್ಮ ಪಕ್ಷವು ಚಂದ್ರ ಬಾಬು ನಾಯ್ಡು ಸರ್ಕಾರದ ಜಾಗತೀಕರಣ ನೀತಿಗಳ ವಿರುದ್ಧ ಹೋರಾಟದಲ್ಲಿ ಮುಂಚೂಣಿಯಲ್ಲಿದೆ. ಪಕ್ಷವು ಗ್ರಾಮೀಣ ಬಡಜನತೆ ಮತ್ತು ಸಾಮಾಜಿಕ ನ್ಯಾಯದ ವಿಷಯಗಳನ್ನು ಕೈಗೆತ್ತಿಕೊಂಡಿದೆ. ಆಂಧ್ರ ಪ್ರದೇಶದ ಬಲಿಷ್ಠ ಕ್ರಾಂತಿಕಾರಿ ಪರಂಪರೆಯು ಪುನರುಜ್ಜೀವನ ಪಡೆದುಕೊಳ್ಳುವ ಹಾದಿಯಲ್ಲಿದೆ.

...ಲ ಜನಾಂದೋಲ

...ೇಶನದ ಕರೆ

ರಾಷ್ಟ್ರ ಮಟ್ಟದಲ್ಲಿ, ಅಧಿಕಾರದಿಂದ ಬಿಜೆಪಿಯನ್ನು ಕೆಳಗಿಳಿಸುವುದು ಅತೀ ಪ್ರಮುಖ ಅಂಶವಾಗಿದೆ. ಈ ಹಿಂದೆ 1988ರಲ್ಲಿಯೇ, 13ನೇ ಮಹಾಧಿವೇಶನವು ಬಿಜೆಪಿ ಬೆಳವಣಿಗೆಯ ಅಪಾಯವನ್ನು ಮನಗಂಡು, ಅದು ಅಂದು ಆಡಳಿತ ಪಕ್ಷವಾಗಿರದಿದ್ದರೂ ಸಹಾ "ಕಾಂಗ್ರೆಸ್‌ನ್ನು ಸೋಲಿಸಿ ಬಿಜೆಪಿಯನ್ನು ಹಿಮ್ಮೆಟ್ಟಿಸಿ" ಎಂಬ ಘೋಷಣೆಯನ್ನು ನೀಡಿತ್ತು.

1995 ರ 15ನೇ ಮಹಾಧಿವೇಶನದ ವೇಳೆಗೆ BJP ಯ ಅಪಾಯ ವಾಸ್ತವ ಹಾಗೂ ಕಳವಳಕಾರಿಯು ಆಗಿತ್ತು ಮತ್ತು ನಾವು "ಕಾಂಗ್ರೆಸ್ ಮತ್ತು ಬಿಜೆಪಿ ಎರಡನ್ನು ಸೋಲಿಸಿ" ಎಂಬ ಘೋಷಣೆ ನೀಡಿದ್ದವು.

1998ರಲ್ಲಿ 16ನೇ ಮಹಾಧಿವೇಶನ ಸಮಾವೇಶಗೊಂಡಾಗಲೇ ಬಿಜೆಪಿ ಅಧಿಕಾರ ಹಿಡಿದಿತ್ತು. ಇದು ಪರಿಸ್ಥಿತಿಯಲ್ಲಿ ಮೂಲಭೂತ ಬದಲಾವಣೆ ತಂದಿತ್ತು.

ಅನಂತರದ ಬೆಳವಣಿಗೆಗಳು 1998ರಲ್ಲಿ ನಾವು ಮಾಡಿದ ಅಂದಾಜನ್ನು ದೃಡೀಕರಿಸಿವೆ.

ಪ್ರಸ್ತುತ ರಾಜಕೀಯ ಗೊತ್ತುವಳಿಯು ಈ ಕೆಳಗಿನ 5 ಅಂಶಗಳಲ್ಲಿ 4 ವರ್ಷಗಳ ಬಿಜೆಪಿ ಸರ್ಕಾರದ ಪರಿಣಾಮವನ್ನು ಸಾರಾಂಶಿಸಿದೆ.

- "ಪ್ರಭುತ್ವದ ಜಾತ್ಯಾತೀತ ಮೌಲ್ಯಗಳ ಮೇಲೆ ನಿರಂತರ ದಾಳಿ, ಸರ್ಕಾರಿ ಯಂತ್ರಗಳೊಳಗೆ ಆರ್‌ಎಸ್‌ಎಸ್‌ನ ನುಸುಳುವಿಕೆ, ಅಲ್ಪ ಸಂಖ್ಯಾತರ ಮೇಲೆ ಅಪಾಯಕಾರಿ ದಾಳಿ."
- ಉದಾರೀಕರಣ ಮತ್ತು ಖಾಸಗೀಕರಣ ಆಧಾರಿತ ಆರ್ಥಿಕ ನೀತಿಗಳ ಜಾರಿ, ಪರಿಣಾಮವಾಗಿ ಜನರ ಶೋಷಣೆ ಮತ್ತು ಸಾಮಾಜಿಕ ಅಸಮಾನತೆಯ ಹೆಚ್ಚಳ.
- ಸ್ವತಂತ್ರ ಭಾರತ ಹಿಂದೆಂದೂ ಕಾಣದಂತ ಅತ್ಯಂತ ಸಾಮ್ರಾಜ್ಯಶಾಹಿ ಪರ ಸರ್ಕಾರ ಭಾರತವನ್ನು ಅಮೇರಿಕಾದ ಕಿರಿಯ ಪಾಲುದಾರನನ್ನಾಗಿಸುವ ವಿದೇಶ ನೀತಿಯನ್ನು ಅನುಸರಿಸಿದೆ.
- ಶಿಕ್ಷಣ ವ್ಯವಸ್ಥೆಯಲ್ಲಿನ ಜಾತ್ಯಾತೀತ ಅಂಶಗಳನ್ನು ಕಳಚಿಹಾಕುವ ಮೂಲಕ ಹಾಗೂ ನಮ್ಮ ಸಂಯುಕ್ತ ಸಾಂಸ್ಕೃತಿಕ ಮೌಲ್ಯಗಳ ಮೇಲಿನ ದಾಳಿಗಳ ಮೂಲಕ, ಸಮಾಜವನ್ನು ಕೋಮುವಾದೀಕರಿಸುವ ವ್ಯವಸ್ಥಿತ ಯೋಜನೆ.
- ಪ್ರಜಾಪ್ರಭುತ್ವಕ್ಕೆ ಒಡ್ಡಲಾಗಿರುವ ಹೆಚ್ಚುತ್ತಿರುವ ಸರ್ವಾಧಿಕಾರಿ ಅಪಾಯಗಳು ಮತ್ತು ಆಡಳಿತದಲ್ಲಿ ವ್ಯಾಪಕ ಭ್ರಷ್ಟಾಚಾರ".

38 ಪ್ರತಿನಿಧಿಗಳು ರಾಜಕೀಯ ಗೊತ್ತುವಳಿ ಮೇಲಿನ ಚರ್ಚೆಯಲ್ಲಿ ಭಾಗವಹಿಸಿದರು. ಹೆಚ್ಚುತ್ತಿರುವ ಕೋಮುವಾದೀಕರಣ ಹಾಗೂ ಅದರಿಂದ ರಾಷ್ಟ್ರೀಯ ಐಕ್ಯತೆ ಮತ್ತು ಶಾಂತಿಯುತ ಬಾಳ್ವೆಗೆ ಉಂಟಾಗಿರುವ ಅಪಾಯವನ್ನು ತೋರಿತು. ದೇಶದ ಬಹಳಷ್ಟು ಭಾಗಗಳಲ್ಲಿ ಅಲ್ಪಸಂಖ್ಯಾತರನ್ನು ವ್ಯವಸ್ಥಿತವಾಗಿ ದಾಳಿಗೆ ಗುರಿಪಡಿಸಲಾಗಿದೆ, ಗುಜರಾತಿನಲ್ಲಿನ ಇತ್ತೀಚಿನ ಮುಸ್ಲಿಂ ವಿರೋಧಿ ಕಾರ್ಯಕ್ರಮ ಭವಿಷ್ಯತ್ತಿನ ಸೂಚಕವಾಗಿದೆ. ಅಯೋಧ್ಯೆ ಪ್ರಶ್ನೆ ಮೇಲೆ ಆರ್.ಎಸ್.ಎಸ್ ನಿಯಂತ್ರಿತ ಸಂಘಟನೆಗಳು ಇತ್ತೀಚಿನ ದಿನಗಳಲ್ಲಿ ನಡೆದುಕೊಂಡ ರೀತಿ, ಅವರು ಎಂತಹುದೇ ಸುಳ್ಳು, ಮೋಸ, ಪಿತೂರಿಯ ವಿಧಾನಗಳನ್ನು ಬಳಸಲೂ ಹಿಂಜರಿಯುವುದಿಲ್ಲಾ ಎಂಬುದನ್ನು ಚರ್ಚೆಯು ತೋರಿತು.

ಕೋಮುವಾದಿ ಅಪಾಯಗಳನ್ನು ಆಧರಿಸಿ ಅನೇಕ ಪ್ರತ್ಯೇಕ ನಿರ್ಣಯಗಳನ್ನು ಅಂಗೀಕರಿಸಲಾಯಿತು. "ಅಯೋಧ್ಯೆ ವಿಷಯ ಕುರಿತು", "ಶಿಕ್ಷಣದ ಕೋಮುವಾದೀಕರಣ ವಿರುದ್ಧ" ಹಾಗೂ "ಗುಜರಾತ್‌ನಲ್ಲಿನ ಕೋಮು ಧಳ್ಳುರಿ ಕುರಿತು" ನಿರ್ಣಯಗಳನ್ನು ಅಂಗೀಕರಿಸಲಾಯಿತು.

ಕಾರ್ಷಿಕ ಪರಿಸ್ಥಿತಿ

ದೇಶದ ಕೃಷಿ ರಂಗದಲ್ಲಿ ಆಳವಾಗಿರುವ ಬಿಕ್ಕಟ್ಟುಗಳ ಕುರಿತು ಮಹಾಧಿವೇಶನವು ವಿಶೇಷ ಒತ್ತು ನೀಡಿ ಚರ್ಚಿಸಿತು. ಈ ಬಿಕ್ಕಟ್ಟಿನ ಪರಿಣಾಮವು ಎಲ್ಲಾ ರೈತವಿಭಾಗಗಳಿಗೂ ತಟ್ಟಿದೆ. ಶ್ರೀಮಂತ ರೈತ ವಿಭಾಗವು ಹೋರಾಟಕ್ಕೆ ಮುಂದಾಗುತ್ತಿರುವುದನ್ನು ಕಾಣಬಹುದು. ಕೃಷಿ ಕೂಲಿಕಾರರ ಮತ್ತು ಬಡ ರೈತರು ಅತ್ಯಂತ ಕೆಟ್ಟ ಪರಿಸ್ಥಿತಿಯಲ್ಲಿದ್ದಾರೆ. ದೇಶದ ಉಗ್ರಾಣದಲ್ಲಿ 62 ಮಿಲಿಯನ್ ಟನ್ ಆಹಾರ ಧಾನ್ಯ ಸಂಗ್ರಹಣೆ. ಆದಾಗ್ಯೂ ದೇಶದ ಹಲವಾರು ಕಡೆಗಳಿಂದ ಜನರು ಹಸಿವಿನಿಂಧಾಗಿ ಸಾಯುತ್ತಿರುವ ಉದಾಹರಣೆಗಳಿವೆ.

ಮಹಾಧಿವೇಶನವು 'ಕಾರ್ಷಿಕ ಪರಿಸ್ಥಿತಿಯ ಗಂಭೀರತೆ' ಕುರಿತು ಪ್ರತ್ಯೇಕ ನಿರ್ಣಯವನ್ನು ಅಂಗೀಕರಿಸಿ, ರೈತರು ಮತ್ತು ಕೃಷಿ ಕಾರ್ಮಿಕರು ಈ ಕೆಳಕಂಡ 8 ಬೇಡಿಕೆಗಳ ಆಧಾರದಲ್ಲಿ ದೇಶಾದ್ಯಂತ ಪ್ರಚಾರ-ಪ್ರಕ್ಷೋಭೆಗಳನ್ನು ನಡೆಸಲು ಕರೆ ನೀಡಿತು. ಆಮದಿನ ಮೇಲೆ ನಿರ್ಭಂಧ ಬೆಂಬಲ ಬೆಲೆ, ಸಾರ್ವಜನಿಕ ವಿತರಣಾ ವ್ಯವಸ್ಥೆ ಬಲಪಡಿಸುವುದು. ಕೆಲಸಕ್ಕೆ - ಆಹಾರ ಯೋಜನೆ ಜಾರಿಗೊಳಿಸುವುದು, ಇದಲ್ಲದೆ ಕೃಷಿ ಕಾರ್ಮಿಕರಿಗೆ ಸಾಮಾಜಿಕ ಭದ್ರತೆ ಒದಗಿಸುವ ಕಾಯ್ದೆ ರೂಪಿಸುವ ಅಗತ್ಯವನ್ನು ನಿರ್ಣಯದಲ್ಲಿ ಒತ್ತಾಯಿಸಲಾಯಿತು.

ಒಕ್ಕೂಟ ವ್ಯವಸ್ಥೆಗೆ ಬಂದಿರುವ ಅಪಾಯ, ಮತ್ತು ಕೇಂದ್ರ-ರಾಜ್ಯ ಸಂಬಂಧಗಳ ಪುನರ್ ರೂಪಿಸುವ ಕುರಿತು ಪ್ರತಿನಿಧಿಗಳು ಗಮನಸೆಳೆದರು. ಇದಕ್ಕೆ ಸಂಬಂಧಿಸಿದ ಪ್ರತ್ಯೇಕ ನಿರ್ಣಯವನ್ನು ಅಂಗೀಕರಿಸಲಾಯಿತು. ಈ ನಿರ್ಣಯದಲ್ಲಿ ಕೇಂದ್ರದ ಸಹಾಯ, ಸಂವಿಧಾನದ ಮೂಲ

ಪುಟ 10 ಕ್ಕೆ



ಕರ್ನಾಟಕದ ಪ್ರತಿನಿಧಿಗಳು: ಕೆ.ಶಂಕರ್, ಯು.ಬಸವರಾಜು-ವೀಕ್ಷಕರು, ನಿತ್ಯಾನಂದ ಸ್ವಾಮಿ,

ದುಡಿವ ಜನಶಕ್ತಿಯ ಪ್ರದರ್ಶನ

ಭಾರೀ ರ್‍ಯಾಲಿ

ಮಾರ್ಚ್ 24 ಹೈದರಾಬಾದಿನಲ್ಲೊಂದು ಐತಿಹಾಸಿಕ ದಿನ. ಕೆಂಪು ಬಟ್ಟೆ ಧರಿಸಿದವರು, ಕೆಂಬಾವುಟ ಹಿಡಿದವರು ಇಡೀ ಹೈದರಾಬಾದೇ ಬೆರಗಾಗುವಂತೆ ದಶ ದಿಕ್ಕುಗಳಿಂದ ಹರಿದು ಬಂದರು. ನೀರಿನಂತೆ ನಿಂತರು. ವಿಶ್ವಬ್ಯಾಂಕಿನ ಮಾನಗೇಡಿ ಷರತ್ತುಗಳನ್ನು ಒಪ್ಪಿಕೊಂಡು ತಂದ ಸಾಲದಲ್ಲಿ ಹೈದರಾಬಾದನ್ನು ಸಿಂಗಾರಗೊಳಿಸುವ ಚಂದ್ರಬಾಬು ನಾಯ್ಡುವಿನ ಸುಂದರ ಹೈದರಾಬಾದೆಂಬ ಹುಸಿಯನ್ನು ಬಯಲುಗೊಳಿಸಿದರು. ಶ್ರಮದಲ್ಲಿ ಸೌಂದರ್ಯವನ್ನು ಕಂಡು ಬಡವಾಗಿ ಬದುಕುತ್ತಿರುವ ಇವರು (ಶ್ರಮಜೀವಿಗಳು) ಅಂದು ಸಿಪಿಐ(ಎಂ)ನ 17ನೇ ಮಹಾಧಿವೇಶನದ ಸಲುವಾಗಿ ಬೃಹತ್ ಬಹಿರಂಗ ಸಭೆಯನ್ನು ಹಮ್ಮಿಕೊಳ್ಳಲಾಗಿತ್ತು. ರಾಜ್ಯದ ಎಲ್ಲಾ ಸ್ಥಳಗಳಿಂದಲೂ ರೈಲುಗಳಲ್ಲಿ ಸಾವಿರಾರು ಲಾರಿ, ಬಸ್ಸು, ಟ್ರಾಕ್ಟರ್‌ಗಳಲ್ಲಿ ಸುಮಾರು ಎರಡು ಲಕ್ಷದಷ್ಟು ಜನ ಬಂದಿದ್ದರು. ಹೈದರಾಬಾದಿನ ತುಂಬೆಲ್ಲಾ ಕಟ್ಟಿದ ಕೆಂಬಾವುಟದ ತೋರಣಗಳು, ಗೋಡೆಬರಹಗಳು, ಕಟೌಟ್‌ಗಳು ವಾತಾವರಣವನ್ನು ರಂಗೇರಿಸಿದ್ದವು.



ಬೃಹತ್ ರ್‍ಯಾಲಿ, ಕೆಂಪಾದ ಹೈದರಾಬಾದ್

ಹೈದರಾಬಾದಿನ ಬಿಸಿಲು ಅತ್ಯಂತ ಅಸಹನೀಯ ಬೆಳ್ಳಂಬೆಳಿಗ್ಗೆಯೇ ತೀವ್ರಗೊಂಡ ಬಿಸಿಲು ಸಂಜೆವರೆಗೂ ತನ್ನ ತಾಪವನ್ನು ಇಳಿಸಿರಲಿಲ್ಲ. ಆದರೆ ದಿನವೂ ಬಿಸಿಲಿಗೆ ಮೈಯೊಡ್ಡಿ ಬೆಂದಿರುವ ಶ್ರಮಜೀವಿಗಳಿಗೆ ಇದೊಂದು ಪ್ರಶ್ನೆಯಾಗಿರಲಿಲ್ಲ. ಎಲ್ಲಾ ಪ್ರಮುಖ ಬೀದಿಗಳಲ್ಲೂ ಮೆರವಣಿಗೆಗಳಂತೆ ಜನ ಹರಿದಾಡಿದರು. ಆಂಧ್ರದ ವಿಭಿನ್ನ ಸಾಂಸ್ಕೃತಿಕ ವಾದ್ಯಗಳೊಂದಿಗೆ ಹಲವಾರು ತಂಡಗಳು ನೋಡುಗರ, ಕೇಳುಗರ ಗಮನವನ್ನು ಸೆಳೆದವು. ಪ್ರಜಾನಾಟ್ಯ ಮಂಡಳಿಯ ತಂಡಗಳು ಹಲವು ರಸ್ತೆಗಳಲ್ಲಿ ಜನರಿಗೆ ಸಂದೇಶವನ್ನು ಸಾರಿದವು.

ಕೆಂಪು ಸ್ವಯಂಸೇವಕರ ಆಕರ್ಷಕ ಮೆರವಣಿಗೆ

ಸಂಜೆ ಬಹಿರಂಗ ಸಭೆಗೆ ಮುಂಚಿತವಾಗಿ ಒಂದೇ ಕಡೆಯಿಂದ ಮೆರವಣಿಗೆಯನ್ನು ಏರ್ಪಡಿಸಿದ್ದರೆ ಇಡೀ ಹೈದರಾಬಾದೇ ಸ್ಥಬ್ಧವಾಗುತ್ತಿತ್ತು. ಹಾಗೆ ಮಾಡಲಿಲ್ಲ. ಬದಲಿಗೆ, ಐತಿಹಾಸಿಕ ಚಾರ್‌ಮಿನಾರ್ ನಿಂದ ಬಹಿರಂಗ ಸಭೆ ನಡೆದ ಎನ್.ಟಿ.ಆರ್. ಸ್ಟೇಡಿಯಂಗೇ (ಸುಮಾರು 4 ಕಿ.ಮೀ) 5 ಸಾವಿರ ಕೆಂಪು ಸ್ವಯಂ ಸೇವಕರ ಮೆರವಣಿಗೆಯನ್ನು ನಡೆಸಲಾಯ್ತು. ಇದನ್ನು ಕ್ಯಾಪ್ಟನ್ ಲಕ್ಷ್ಮಿ ಸೆಹಗಲ್‌ರವರು ಉದ್ಘಾಟಿಸಿದರು.

ಆಂಧ್ರ ಪ್ರದೇಶ ಸಿಪಿಐ(ಎಂ) ರಾಜ್ಯ ಸಮಿತಿಯು ಬಹಿರಂಗ ಸಭೆಯನ್ನು ಒಂದು ಸವಾಲಿನ ಪ್ರಶ್ನೆಯಾಗಿ ಸ್ವೀಕರಿಸಿ ಸುಮಾರು ಎರಡು ಲಕ್ಷ ಜನರನ್ನು ಅಣಿನೆರೆಸಿತು. ಆಂಧ್ರದ ಕಮ್ಯುನಿಸ್ಟ್ ಚಳುವಳಿಯಲ್ಲಿ ಬಂದು ಐತಿಹಾಸಿಕ ಘಟನೆಯಾಗಿ ಬಹಿರಂಗ ಸಭೆ ಮಾರ್ಪಟ್ಟಿತು. ವೀರ ತೆಲಂಗಾಣದ ಕ್ರಾಂತಿಕಾರಿ ಹೋರಾಟದ ನೆನಪುಗಳೊಂದಿಗೆ ಸ್ಫೂರ್ತಿ ತುಂಬಿದ ಭಾಷಣಕಾರರು ಆಂಧ್ರ ಪ್ರದೇಶದಲ್ಲಿ ಮತ್ತು ಇಡೀ ದೇಶದಲ್ಲಿ ಇಂದಿನ ರಾಜಕೀಯ ಆರ್ಥಿಕ ವ್ಯವಸ್ಥೆಗೆ ಪರ್ಯಾಯವನ್ನು ಕಟ್ಟಲು ಅದಕ್ಕಾಗಿ ವ್ಯಾಪಕ ಹೋರಾಟಗಳನ್ನು ಹರಿಬಿಡಲು ಕರೆನೀಡಿದರು.

ಬಹಿರಂಗ ಸಭೆಯಲ್ಲಿ ಕಾಂ। ಜ್ಯೋತಿಬಸು, ಭಟ್ಟಾಚಾರ್ಯ, ಕಾಂ। ಮಣಿಕ್ ಸರ್ಕಾರ್, ಕಾಂ। ಸೀತಾರಾ ಯೆಚೂರಿ, ಕಾಂ। ಬಿ.ವಿ. ರಾಘವುಲು ಮುಂತಾದವರು ಮಾತನಾಡಿದರು. ಕಾಂ। ಮಲ್ಲು ನರಸಿಂಹ ರೆಡ್ಡಿಯವರು ಅಧ್ಯಕ್ಷತೆ ವಹಿಸಿದ್ದರು. ಕಾಂ। ಜ್ಯೋತಿಬಸು ಮತ್ತು ಕಾಂ। ಸುರ್ಜಿತ್‌ರವರು ತೆಲಂಗಾಣ ಹೋರಾಟದ ನೆನಪುಗಳನ್ನು, ಸುಂದರಯ್ಯ ಮತ್ತಿತರರ ಜೊತೆಗಿನ ಒಡನಾಟವನ್ನು ವಿವರಿಸುತ್ತಾ ಮತ್ತೊಮ್ಮೆ ಆಂಧ್ರದಲ್ಲಿ ಕಮ್ಯುನಿಸ್ಟ್ ಚಳುವಳಿಯನ್ನು ಉನ್ನತ ಹಂತಕ್ಕೆ ಕೊಂಡೊಯ್ಯಲು ಕರೆ ನೀಡಿದರು. ಕೇಂದ್ರ ಮತ್ತು ಆಂಧ್ರ ಸರ್ಕಾರದ ಆರ್ಥಿಕ ನೀತಿಗಳನ್ನು ಮತ್ತು ಕೋಮುವಾದವನ್ನು ಅದರ ಅಪಾಯಗಳನ್ನು ತೀವ್ರವಾಗಿ ಖಂಡಿಸಿದರು. ಎಡ ಜಾತ್ಯಾತೀತ ಮತ್ತು ಪ್ರಜಾಪ್ರಭುತ್ವ ಶಕ್ತಿಗಳ ಐಕ್ಯತೆಗೆ ಬೇಕಾದ ಹೋರಾಟಗಳನ್ನು ನಡೆಸಲು ಕರೆನೀಡಿದರು. ಬಂಡವಾಳಶಾಹಿಯ ಬಿಕ್ಕಟ್ಟುಗಳನ್ನು ಹೇಳುತ್ತಾ ಮಾನವ ಜನಾಂಗದ ಸಮಸ್ಯೆಗಳ ಪರಿಹಾರಕ್ಕೆ ಬಂಡವಾಳವಾದದ ಬಳಿ ಉತ್ತರವಿಲ್ಲ ಸಮಾಜವಾದವೇ ದಾರಿಯೆಂದು ಕಾಂ। ಸೀತಾರಾಂ ವಿವರಿಸಿದರು.

ನರೇಂದ್ರ ಮೋದಿಯ ಬಗ್ಗೆ ಅಸಹ್ಯವಾಗುತ್ತೆ

ಒಬ್ಬ ಮುಖ್ಯಮಂತ್ರಿಯಾಗಿ, ಕೋಮುಗಲಭೆಗಳನ್ನು ಬೆಂಬಲಿಸುವ ಗುಜರಾತ್‌ನ ನರೇಂದ್ರ ಮೋದಿಯವರ ಬಗ್ಗೆ ಒಬ್ಬ ಮುಖ್ಯಮಂತ್ರಿಯಾಗಿ ತನಗೆ ಅಸಹ್ಯವಾಗುತ್ತದೆ ಎಂದು ಬುದ್ಧದೇವ್‌ರವರು ಕಟುವಾಗಿ ಟೀಕಿಸಿದರು. ಕೇಂದ್ರದ ಎನ್.ಡಿ.ಎ ಸರ್ಕಾರವನ್ನು ಯಾವುದೇ ರೀತಿಯಲ್ಲಾದರೂ ಅಧಿಕಾರದಿಂದ ಕೆಳಗಿಳಿಸುವ ತುರ್ತು ಅವಶ್ಯಕತೆಯ ಬಗ್ಗೆ ಪಶ್ಚಿಮ ಬಂಗಾಳದ ಮುಖ್ಯಮಂತ್ರಿಯವರು ಮಾತನಾಡಿದರು. ಎರಡು ವರ್ಷದ ಹಿಂದೆ ವಿದ್ಯುತ್ ಹೋರಾಟವನ್ನು ಸಮರಧೀರತೆಯಿಂದ ನಡೆಸಿದ ಅನುಭವದ ಹಿನ್ನೆಲೆಯಲ್ಲಿ ಮತ್ತೆ ಹೋರಾಟಗಳನ್ನು ವಿಸ್ತತಗೊಳಿಸುವುದಾಗಿ ಆಂಧ್ರ ಪ್ರದೇಶದ ಕಾರ್ಯದರ್ಶಿ ಕಾಂ। ರಾಘವುಲು ತಿಳಿಸಿದರು.

ಜನ ಜಾಗೃತಿಗೆ ರಾಜ್ಯಾದ್ಯಂತ ಜಾಥಾಗಳು

ಪಕ್ಷದ ಮಹಾಧಿವೇಶನದ ಬಗ್ಗೆ ಜನರಿಗೆ ತಿಳಿಸಲು ಮತ್ತು ಬಹಿರಂಗ ಸಭೆಗೆ ಜನರನ್ನು

ಜೋಯ್ಡಾ ತಾಲೂಕಿಗೆ ಕನಿಷ್ಟ ನಾಗರಿಕ ಸೌಲಭ್ಯಕ್ಕಾಗಿ ಆಗ್ರಹಿಸಿ

ರೈತರ ಪಾದಯಾತ್ರೆ

ಸುಮಾರು 1940 - 50 ರ ದಶಕದಲ್ಲಿ ಕಾರವಾರ ಪ್ರದೇಶದಲ್ಲಿ ನಡೆದ ರೈತ ಹೋರಾಟಗಳು ನೆನೆಯುವಂತಹದ್ದು. ಇಂದೂ ಅದೇ ಉತ್ಸಾಹದಿಂದ ಉ.ಕ. ಜಿಲ್ಲೆಯ ಜೊಯ್ಡಾದಲ್ಲಿ ಕನಿಷ್ಟ ನಾಗರಿಕ ಸೌಲಭ್ಯಗಳಾದ ರಸ್ತೆ, ಸೇತುವೆ, ಆಸ್ಪತ್ರೆ, ಕುಡಿಯುವ ನೀರು, ವಿದ್ಯುತ್, ಸಾರಿಗೆ, ಶಾಲೆ, ರೇಷನ್ ಅಂಗಡಿಗಾಗಿ ಮತ್ತು ಕುಂಬ್ರಿ ಜಮೀನು/ ಅತಿಕ್ರಮಣ ಜಮೀನುಗಳನ್ನ ಸಾಗುವಳಿದಾರರ ಹೆಸರಿಗೆ ನೊಂದಾಯಿಸಲು ಒತ್ತಾಯಿಸಿ ಐತಿಹಾಸಿಕ ಕಾಲ್ನಡಿಗೆ ಜಾಥಾವನ್ನು ಕರ್ನಾಟಕ ಪ್ರಾಂತ ರೈತ ಸಂಘ ಮಾರ್ಚ್ 2 ರಿಂದ 4 ರವರೆಗೆ ಮೂರು ದಿನಗಳ ಕಾಲ ನಡೆಸಿ, ಕೊನೆಯಲ್ಲಿ ಜಿಲ್ಲಾಪಂಚಾಯತ್‌ಗೆ ಮುತ್ತಿಗೆ ಹಾಕಲಾಯಿತು. ಅದರ ವರದಿ ಇಲ್ಲಿ.

ಗುಡ್ಡಗಾಡಿನಲ್ಲಿ 3 ದಿನ 86 ಕಿ.ಮಿ. ನಡೆದು ಜಿಲ್ಲಾ ಪಂಚಾಯತ್ ಮುತ್ತಿಗೆ

ಕರ್ನಾಟಕದಲ್ಲಿಯೇ ಅತ್ಯಂತ ಹಿಂದುಳಿದ ತಾಲೂಕಾದ ಜೋಯ್ಡಾದಲ್ಲಿ ಬದುಕುತ್ತಿರುವ ಬಹುಸಂಖ್ಯಾತರು ಕುಣಬಿ ಜನಾಂಗಕ್ಕೆ ಸೇರಿದವರು. ಅವರು ಅನಕ್ಷರತೆ, ಬಡತನದ ಕೂಪದಲ್ಲಿ ಬಿದ್ದು ಒದ್ದಾಡುತ್ತಿದ್ದಾರೆ. ಅವರಲ್ಲಿ ಇನ್ನೂ ಇರುವ ಪ್ರಾಮಾಣಿಕತೆ ಮತ್ತು ಮುಗ್ಧತೆಯನ್ನು ತೋಚಿದಂತೆ ಉಪಯೋಗಿಸಿ ಕೊಳ್ಳುವ ಜನಪ್ರತಿನಿಧಿಗಳು ಅವರನ್ನು ಮೇಲೆತ್ತುವ ಪ್ರಯತ್ನವನ್ನೇ ಮಾಡಿಲ್ಲ. 1 ಲೀಟರ್ ಸೀಮೆ ಎಣ್ಣೆಗಾಗಿ 40-50 ಕಿ.ಮಿ. ನಡೆದು ಬರಬೇಕಾದ ಅನಾರೋಗ್ಯವಾದರೆ ಕಂಬಳಿಯಲ್ಲಿ ಹೊತ್ತುತರಬೇಕಾದ ದುರಂತ ಅವರದ್ದು.

ಕರ್ನಾಟಕ ಪ್ರಾಂತ ರೈತ ಸಂಘದ ನೇತೃತ್ವದಲ್ಲಿ ಸೇರಿದ ಈ ಭಾಗದ ರೈತರು ಅನೇಕ ಬಾರಿ ಮನವಿ ಕೊಟ್ಟರು, ಜೊಯ್ಡಾದ ತಾಲೂಕು ಕೇಂದ್ರದಲ್ಲಿ ಮೆರವಣಿಗೆ-ಧರಣಿ ನಡೆಸಿದರು. ಯಾವುದೂ ಪ್ರಯೋಜನಕ್ಕೆ ಬರದಿದ್ದಾಗ ಕಿವುಡು ಸರ್ಕಾರದ ಕಿವಿಯಲ್ಲಿ ನಗಾರಿ ಬಾರಿಸಲು ಹೆಂಗಸರು, ಮಕ್ಕಳೆನ್ನದೆ ಮುದುಕರು, ಯುವಕರು ಸೇರಿ ಕಾಲ್ನಡಿಗೆಯಲ್ಲಿ ಕಾರವಾರದ ಕಡೆ ಹೊರಟೇಬಿಟ್ಟರು. ಮೂರ ದಿನಕ್ಕೆ ಆಗುವಷ್ಟು ಊಟವನ್ನು ಬಗಲಲ್ಲಿ ಇಟ್ಟು ಕಾಡು-ಕಣಿವೆಗಳ ನಡುವೆ, ಹೆಬ್ಬಾವಿನಂತೆ ಸುತ್ತು ಬಳಸಿ ಮಲಗಿರುವ ರಸ್ತೆಯಲ್ಲೂ ಘಟ್ಟ ಇಳಿದು ಹೊರಟ ಸೈನಿಕರ ಕೈಯಲ್ಲಿ



ಇಡೀ ಜಗತ್ತನ್ನು ಗೆಲ್ಲುವ ಅಸ್ತ್ರ ಕೆಂಬಾವುಟ ಹಾರಾಡುತ್ತಿತ್ತು. ಮೊದಲ ಬಾರಿಗೆ ಕುಡುಗೋಲು ಸುತ್ತಿಗೆಯ ಕೆಂಬಾವುಟದ ಸಾಲು ಸೂರ್ಯೋದಯ ಮತ್ತು ಸೂರ್ಯಾಸ್ತದ ಕೆಂಪಿಗೆ ಸವಾಲು ಹಾಕುತ್ತಾ ಅಣಶಿ ಘಟ್ಟ ಸಾಲಿನಲ್ಲಿ ಮುನ್ನಡೆಯಿತು. ಸುತ್ತಲೂ ತುಂಬಿರುವ ಹಸಿರು ಮತ್ತು ಅವನ್ನು ಸೀಳಿಬರುವ ಕೆಂಬಾವುಟದ ಸಾಲು ಈ ದೇಶದ ಭವಿಷ್ಯಕ್ಕೆ ಪರ್ಯಾಯವನ್ನು ಸೂಚಿಸುವಂತಿತ್ತು.

'ನಿಮ್ಮ ಗೂಟಕ್ಕೆ ಬಿಗಿದ ಎತ್ತುಗಳಲ್ಲ'

ಜಾಥಾ ಉದ್ಘಾಟನೆ

ಹೋರಾಟದ ಬಾವುಟವನ್ನು ಮಾರುತಿಮಾನ್ಪಡೆ ಅವರು ಪ್ರೇಮಾನಂದ ವೇಳೀಪ ಮತ್ತು ನಿತ್ಯಾನಂದ ಸ್ವಾಮಿ ಅವರು ನಾರಾಯಣ ವೇಳಿಪ ಅವರಿಗೆ ಕೊಡುವ ಮೂಲಕ ಪಾದಯಾತ್ರೆ ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ ಮಾರುತಿ ಮಾನ್ಪಡೆಯವರು "ಈ ಜಿಲ್ಲೆಯವರಾದ ರಾಮಕೃಷ್ಣ ಹೆಗಡೆಯವರು ಮುಖ್ಯಮಂತ್ರಿಯಾಗಿದ್ದರು. ಆರ್.ವಿ.ದೇಶಪಾಂಡೆಯವರು 20 ವರ್ಷಗಳಿಂದ ಸಚಿವರಾಗಿದ್ದಾರೆ. ಈ ಭಾಗದಿಂದ ಆಯ್ಕೆಗೊಂಡ ಎಂಎಲ್‌ಎಗಳೂ ಸೇರಿದಂತೆ ಜನಪ್ರತಿನಿಧಿಗಳು ಸ್ವಾತಂತ್ರ್ಯ ಬಂದು 54 ವರ್ಷಗಳಾದರೂ ಏನು ಮಾಡಿದ್ದಾರೆ ಎಂದು ಕೇಳಬೇಕಾಗಿದೆ. ಪಾದಯಾತ್ರೆಯನ್ನು ತಡೆಯಲು ಕೆಲವು ಸ್ಥಳೀಯ ಜನಪ್ರತಿನಿಧಿಗಳು ಹಾಕಿದ ಬೆದರಿಕೆಯನ್ನು ಪ್ರಸ್ತಾಪಿಸಿ 'ನಿಮ್ಮ ಗೂಟಕ್ಕೆ ಬಿಗಿದ ಎತ್ತುಗಳು ನಾವಲ್ಲ' ಎನ್ನುವುದು ಈ ಪ್ರದೇಶದ ಜನ ಇಷ್ಟುದೊಡ್ಡ ಸಂಖ್ಯೆಯಲ್ಲಿ ಭಾಗವಹಿಸಿರುವುದು ತೋರಿಸುತ್ತದೆ" ಎಂದರು. ಮುಂದುವರೆದು "ಇಷ್ಟೊಂದು ಅದ್ಭುತವಾದ ನೈಸರ್ಗಿಕ ಸಂಪನ್ಮೂಲ ಇದ್ದರೂ ಈ ಪ್ರದೇಶ ದಲ್ಲಿ ವೋಟ್‌ಬ್ಯಾಂಕ್ ಆಗಿ ಮಾತ್ರ ಇಟ್ಟದ್ದರಿಂದ ಈ ಪ್ರದೇಶ ಇನ್ನೂ ಕಗ್ಗತ್ತಾಲಾಗಿಯೇ ಇದೆ. ಜನರನ್ನು ಕಾಡು ಪ್ರಾಣಿಗಳಂತೆ ಇಡಲು ಪ್ರಯತ್ನ ನಡೆದಿದೆ" ಎಂದರು. ನಿತ್ಯಾನಂದ ಸ್ವಾಮಿ ಮಾತನಾಡಿ ಇನ್ನಾದರೂ ಸರಕಾರ ಕಣ್ಣು ತೆರೆಯಬೇಕು. ದೇಶ ಇರುವುದು ಬೆಂಗಳೂರು, ದೆಹಲಿಯೇ ಅಷ್ಟೇ ಅಲ್ಲ, ಜೋಯ್ಡಾದಂತ ಹಳ್ಳಿಗಳ ಪ್ರದೇಶದಲ್ಲಿ ಅವರ ಕಷ್ಟ ಸುಖವನ್ನು ಕುರಿತು ಅಭಿವೃದ್ಧಿ

ಫೋಟೋ-ಲೇಖನ
ವಿಠ್ಠಲ ಭಂಡಾರಿ

ಜಿಲ್ಲಾ ಸಂಚಾಲಕ ಶಾಂತಾರಾಮ ನಾಯಕ ಪಾದಯಾತ್ರೆಯ ಉದ್ದೇಶವನ್ನು ವಿವರಿಸಿದರು.

ಸಭೆಯನ್ನು ಉದ್ದೇಶಿಸಿ ಸಿಐಟಿಯು ಜಿಲ್ಲಾ ಅಧ್ಯಕ್ಷ ಟಿ.ಎಸ್.ನಾಯ್ಕ, ಪೇಪರ್ ಮಿಲ್ ಎಂಪ್ಲಾಯಿಸ್ ಯೂನಿಯನ್‌ನ ಕಾರ್ಯದರ್ಶಿ ಎಸ್.ವಿ.ಸಾವಂತ, ಜೋಯ್ಡಾದ ರೈತ ಮುಖಂಡ ಪ್ರೇಮಾನಂದ ವೇಳಿಪ ಮಾತನಾಡಿದರು. ಎಸ್.ಎಫ್.ಐ ಗೆಳೆಯರು ಕ್ರಾಂತಿಗೀತೆ ಹಾಡಿದರು.

ಸುಮಾರು ಮಧ್ಯಾಹ್ನ 1 ಗಂಟೆಗೆ ಹೊರಟ ರೈತರ ಜಾಥಾ ಸಂಜೆ 25 ಕಿ.ಮಿ. ನಡೆದು ನುಜ್ಜಿಯಲ್ಲಿ ಬೀಡು ಬಿಟ್ಟಿತು. ಬೆಳಿಗ್ಗೆ ಹಾಲಿಲ್ಲದ ಚಹಾ ಕುಡಿದು ಹೊರಟು 26 ಕಿ.ಮಿ. ನಡೆದು ಮಧ್ಯಾಹ್ನ ಕದ್ರಾ ನಿರಾಶ್ರಿತರ ಕಾಲನಿ ತಲುಪಿತು. ಈಗಲೂ ನಿರಾಶ್ರಿತರೇ ಆಗಿರುವ ಕದ್ರಾದ ಜನತೆಯ ಪರವಾಗಿ ಡಿವೈಎಫ್‌ಐ ಸಂಗಾತಿಗಳು ಪಟಾಕಿ ಸಿಡಿಸಿ ಜಾಥಾವನ್ನು ಸ್ವಾಗತಿಸಿದರು. ಯುವಜನ ಮತ್ತು ರೈತ ಮುಖಂಡ ರಾಮನಾಥ ನಾಯ್ಕ ಮನೆಯಲ್ಲಿ ಎಲ್ಲರಿಗೂ ಊಟದ ವ್ಯವಸ್ಥೆ ಆಗಿತ್ತು. ಕುಟುಂಬದ ಎಲ್ಲ ಸದಸ್ಯರು ಸೇರಿ ತಮ್ಮ ಅನಾರೋಗ್ಯವನ್ನು ಲೆಕ್ಕಿಸದೆ ರೈತರಿಗೆ ಅನ್ನ ನೀಡಿದರು. ಅಲ್ಲಿಂದ ಬೀಳ್ಕೊಟ್ಟು 20 ಕಿ.ಮಿ. ಆಚೆಯ ಉಳಗಾವನ್ನು ಪ್ರವೇಶಿಸುವಾಗ ಕತ್ತಲು. ಕತ್ತಲನ್ನು ಸೀಳಿ ಹೊರಟ ಕೆಂಬಾವುಟ ದಂಡು ಚಾರಿತ್ರಿಕ ಹೋರಾಟ ನಡೆಸಿದ ರೈತ ಸಂಘದ ನೆಲ ಉಳಗಾವನ್ನು ಪ್ರವೇಶಿಸಿದಾಗ ಸಂಭ್ರಮದ ಸ್ವಾಗತ. ಅಲ್ಲೇ ಬೃಹತ್ ಸಾರ್ವಜನಿಕ ಸಭೆ, ಊಟ, ವಸತಿ.

ಬೆಳಿಗ್ಗೆ ಸೂರ್ಯನೊಂದಿಗೇ ಎದ್ದು ಮತ್ತೆ 19 ಕಿ.ಮಿ. ನಡೆದು ಹರಿವ ಕಾಳಿಯನ್ನು ದಾಟಿ ಮುನ್ನಡೆದರು. ಕಾರವಾರದ ನಗರದ ಬೀದಿ

ಉಪಾಧ್ಯಕ್ಷ ವಿಲಾಸ ನಾಯ್ಕ ಬೆದರಿಕೆ

ಹಿಂದುಳಿದ ಜೊಯ್ಡಾದ ರಾಮನಗರ ಪ್ರದೇಶದಿಂದ ಆಯ್ಕೆಯಾಗಿ ಜಿಲ್ಲಾ ಪಂಚಾಯತ್‌ನ ಉಪಾಧ್ಯಕ್ಷರಾಗಿ ಆಯ್ಕೆಯಾಗಿದ್ದ ವಿಲಾಸ ನಾಯ್ಕರಿಗೆ ರೈತರ ಈ ಜಾಥಾ ನುಂಗಲಾರದ ತುತ್ತಾಯಿತು. ಇಡೀ ಜಿಲ್ಲೆಗೆ ವಿಲಾಸನಾಯ್ಕರ ಬಣ್ಣ ಬಯಲು ಮಾಡುವ ಈ ಜಾಥಾ ಪ್ರಾರಂಭ ಆಗುವ ದಿನ ಹತ್ತಿರ ಬಂದಾಗ ಪ್ರಾಂತ ರೈತ ಸಂಘದ ಜಿಲ್ಲಾ ಸಂಚಾಲಕ ಶಾಂತಾರಾಮ ನಾಯಕ ಮತ್ತು ಯಮುನಾ ಗಾಂವಕರರವರನ್ನು ಕರೆದು ಪ್ರತಿಭಟನೆಯನ್ನು ಕೈಬಿಡುವಂತೆ ಹೇಳಿ, ಅದು ಪ್ರಯೋಜನ ಆಗದಿದ್ದಾಗ 'ಹೇಗೆ ಮಾಡುತ್ತೀರಿ ನೋಡುತ್ತೇನೆ. ಒಬ್ಬನೇ ಒಬ್ಬ ರೈತ ನಿಮ್ಮ ಜಾಥಾಕ್ಕೆ ಬರದಿರುವಂತೆ ನೋಡಿಕೊಳ್ಳುತ್ತೇನೆ" ಎಂದು ಸವಾಲನ್ನೇ ಹಾಕಿದರು. "ನಿಮ್ಮ ಬೆದರಿಕೆಗೆ ಸೊಪ್ಪು ಹಾಕಿ ರೈತರು ಬರದಿದ್ದರೆ ನಾವು 10-12 ಕಾರ್ಯಕರ್ತರಾದರೂ ಕಾಲ್ನಡಿಗೆ ಜಾಥಾ ಮಾಡುತ್ತೇವೆ" ಎನ್ನುವ ಪ್ರತಿಸವಾಲನ್ನು

ಪ್ರತಿ ಊರಿಗೆ ವಿಲಾಸನಾಯ್ಕರ ದೂತರು ಹೋಗಿದ್ದಾರೆ, ಬರದಂತೆ ಬೆದರಿಕೆ ಒಡ್ಡಿದ್ದಾರೆ. ಆದರೆ ಆದದ್ದೇನು? 250 ಜನ ರೈತರು ಬರುವ ಬದಲು ಉದ್ಘಾಟನಾ ಸಮಾರಂಭಕ್ಕೆ 500-600 ರೈತರು ಹಾಜರು. ಜಿಲ್ಲಾ ಪಂಚಾಯತ್ ಮುತ್ತಿಗೆಗೂ 500-600 ಜನ ರೈತರು. ವಿವಿಧ ಸಂಘಟನೆಯ ನಾಯಕರ ಸೌಹಾರ್ದ ಬೆಂಬಲ. ಸಾರ್ವಜನಿಕವಾಗಿಯೇ ತನ್ನ ಮುಖವಾಡ ಕಳಚಿಬಿದ್ದಾಗ ವಿಲಾಸನಾಯ್ಕ ಆಗ್ರಹಿಸಿದ್ದು ಇನ್ನೊಂದು ಸುಳ್ಳನ್ನು. ಪತ್ರಿಕೆಯವರು ಕೇಳಿದಾಗ ಹೇಳಿದರು "ಜಾಥಾಕ್ಕೆ ಬಂದ ರೈತರು ಜೋಯ್ಡಾದವರಲ್ಲ. ಬೇರೆ ಕಡೆಯಿಂದ ಕರೆ ತಂದಿದ್ದಾರೆ. ಇದರಲ್ಲಿ ರಾಜಕೀಯ ಇದೆ" ಎಂದು.

ಪಾಪ! ಇವರು ಸಂಘಟಿಸುವ ರ್‍ಯಾಲಿಗೆ, ಸಾರ್ವಜನಿಕ ಸಭೆಗೆ ಹಣಕೊಟ್ಟು ಜನರನ್ನು ತಂದು ರೂಢಿಆಗಿದ್ದ ವಿಲಾಸ ನಾಯ್ಕರು 'ತನ್ನಂತೆ ಪರರ ಬಗೆದೊಡೆ.......' ಎಂದುಕೊಂಡರು. ರೈತ ಸಂಘದವರೂ

ಮೂಲಕ ಜಿಲ್ಲಾಡಳಿತ ಮುಖವಾಡದ ಒಂದೊಂದೇ ಬಣ್ಣ ಅಳಿಸಿದರು. ಕಾಳಿ ಸೇತುವೆ ಮೇಲೆ ಜಾಥಾ ಮುಖಂಡರಿಗೆ ಮಾಲೆ ಹಾಕಿ ಸ್ವಾಗತಿಸಲಾಯಿತು. ಎಸ್ಎಫ್ಐ ಕಾರವಾರ ತಾಲೂಕು ಸಂಗಾತಿಗಳು ನಗರದಲ್ಲಿ ಪಟಾಕಿ ಸಿಡಿಸಿ ಬರಮಾಡಿಕೊಂಡರು. 86 ಕಿ.ಮಿ. ರೈತರು ನಡೆಯುವ ಸ್ಥಿತಿ ಒದಗಿಸಿದ ಆಳುವವರ ಬೇಜವಾಬ್ದಾರಿಗೆ ನಗರದ ಜನ ಹಿಡಿ ಶಾಪ ಹಾಕಿದರು. ಕೆಲವರು ಮೆರವಣಿಗೆಯಲ್ಲಿ ಭಾಗವಹಿಸಿ ನೈತಿಕ ಬೆಂಬಲ ಕೊಟ್ಟರು.

ಕದ ಬಡಿದುಕೊಂಡ ಪಂಚಾಯತ್ ಪ್ರಭುಗಳು

5000ರಷ್ಟಿದ್ದ ರೈತರು ಮನವಿ ಹಿಡಿದು ಜಿಲ್ಲಾ ಪಂಚಾಯತ್‌ಗೆ ಬಂದರೆ ಜಿಲ್ಲಾಡಳಿತ ಪೋಲೀಸರ ಮೂಲಕ ಬಾಗಿಲನ್ನೇ ಮುಚ್ಚಿ ಬಿಟ್ಟರು. ದಣಿದ ರೈತರಿಗೆ ನೀರು ಕೊಟ್ಟು ಸಾಂತ್ವನ ಹೇಳಬೇಕಾಗಿದ್ದ ಜಿಲ್ಲಾ ಪಂಚಾಯತ್‌ನ ಮುಚ್ಚಿದ ಗೇಟ್, ಅಕ್ಕಪಕ್ಕದ ತಾಲೂಕಿನಿಂದ ಬಂದ ಪೋಲೀಸ್ ಅಧಿಕಾರಿಗಳು, ನೂರರಷ್ಟಿದ ಪೋಲೀಸರು ಸ್ವಾಗತ ಕೋರಿದರು. ರೈತರು ಮತ್ತು ರೈತ ಮುಖಂಡರ ಸಿಟ್ಟು ನೆತ್ತಿಗೇರಿತು. ಪೋಲೀಸರೊಂದಿಗೆ ವಾಗ್ವಾದಕ್ಕಿಳಿದರು. ಇನ್ನೇನು ದೂಡಿ ಒಳೋಗಬೇಕು ಅನ್ನುವಾಗ ಬಾಗಿಲು ತೆರೆದು ಒಳಹೋಗಲು ಅವಕಾಶ ಮಾಡಿದರು. ಸುಮಾರು 3-4 ತಾಸು ಮುತ್ತಿಗೆ ಹಾಕಿ ಜಿಲ್ಲಾ ಪಂಚಾಯತ್ ದಿಗ್ಬಂದನಗೊಳಿಸಲಾಯಿತು. ಈ ಸಂದರ್ಭದಲ್ಲಿ ರೈತರನ್ನು ಉದ್ದೇಶಿಸಿ ಮಾತನಾಡಿದ ಕರ್ನಾಟಕ ಪ್ರಾಂತ ರೈತ ಸಂಘದ ಪ್ರಧಾನ ಕಾರ್ಯದರ್ಶಿ ಜಿ.ಸಿ.ಬಯ್ಯಾರೆಡ್ಡಿ "ಜೋಯಿಡಾ ತಾಲೂಕಿನ ಸಮಸ್ಯೆಗಳ ಬಗ್ಗೆ ನಿವೇದಿಸಲು ಬಂದರೆ ಒಳಗೆ ಬಿಡದಷ್ಟು ಕಲು ಹದಯವೇ ಆಡಳಿತ ನಡೆಸುವವರದ್ದು, ನಾವೇನು ಬಂದೂಕು, ಬಾಂಬು ಹಿಡಿದು ಬಂದಿಲ್ಲ. ಸಮಸ್ಯೆಯನ್ನು ಆಲಿಸಿ ಪರಿಹರಿಸಲು ಕ್ರಮ ತೆಗೆದುಕೊಳ್ಳಬೇಕು ಎಂದು ಆಗ್ರಹಿಸಿದರು.

ಬಳಿಕ ಜಿಲ್ಲಾ ಪಂಚಾಯತ್ ಅಧ್ಯಕ್ಷರಿಗೆ ಮನವಿ ಅರ್ಪಿಸಲಾಯಿತು. ಅಧ್ಯಕ್ಷರು ಮೊದಲೇ ಸಿದ್ದಪಡಿಸಿಕೊಂಡ ಉತ್ತರವನ್ನು 45 ನಿಮಿಷ ಓದಿ ಹೇಳಿದರು. ಅವರು ತಿಳಿಸಿದ ಕಾಮಗಾರಿಗಳಲ್ಲಿ ಕೇವಲ ಶೇ 25 ರಷ್ಟು ಕೆಲಸ ನಡೆದಿಲ್ಲ ಎನ್ನುವುದನ್ನು ಅಲ್ಲಿಯೇ ಸ್ಪಷ್ಟಪಡಿಸಲಾಯಿತು. ವಿವರವಾಗಿ ಚರ್ಚಿಸಲು ರೈತ ಸಂಘದ ಪ್ರತಿನಿಧಿಗಳನ್ನು ಇಟ್ಟು ಸಭೆ ಸೇರುವ ಅಭಿಪ್ರಾಯಕ್ಕೆ ಬರಲಾಯಿತು.

ಉಳಿಗಾ ಸಭೆ: ಮತ್ತೆ ನೆನಪಿಸಿದ ರೈತ ಹೋರಾಟದ ವೀರಕಥೆ

ಜೋಯ್ಡಾದಿಂದ ಹೊರಟ ರೈತರ ಕಾಲ್ನಡಿಗೆ ಜಾಥಾ ಮಾರ್ಚ್ 3 ರಂದು ರಾತ್ರಿ 8 ಗಂಟೆಗೆ ಉಳಿಗಾವನ್ನು ಪ್ರವೇಶಿಸಿತು. ನೂರಾರು ಜನ ಸ್ವಾಗತಕ್ಕಾಗಿ ಮಧ್ಯಾಹ್ನದಿಂದಲೇ ತಯಾರಿ ನಡೆಸಿದ್ದರು. ಹಿರಿಯ ರೈತ ನಾಯಕ ಜೀವಾಜಿ ನಾಯ್ಕ, ವಿಷ್ಣು ಮಾಸ್ತರರು ಎಲ್ಲಿಲ್ಲದ ಉತ್ಸಾಹದಿಂದ, ಅವರೊಂದಿಗೆ ಹತ್ತಾರು ಕಾರ್ಯಕರ್ತರು. ಈ ಸಭೆ ತಕ್ಷಣ ನೆನಪಿಸಿದ್ದು ಇದೇ ಸ್ಥಳದಲ್ಲಿ 30.4.1979 ಮತ್ತು 1.5.1979 ನೇ ಮಂಗಳವಾರ ನಡೆದ ಕಾರವಾರ ತಾಲೂಕಾ ಕಿಸಾನಾ ಸಭಾದ 5ನೇ ಪರಿಷತ್ತನ್ನು ಎನ್.ಜಿ. ಮ್ಹಾಳ್ಸೇಕರ ಅಧ್ಯಕ್ಷರಾಗಿ, ಜಿ.ಎಸ್.ಸೇಟ್ ಕಾರ್ಯದರ್ಶಿಯಾಗಿದ್ದ ಕಿಸಾನ್ ಸಭಾದ ಅಂದಿನ ಪರಿಷತ್ತಿನಲ್ಲಿ ಪರಿಹಾರಧನ ಕೊಡದೆ ಉಳುವವನು ಭೂಮಾಲಿಕನಾಗುವ ಬಗ್ಗೆ, ಬಡ ರೈತರು ಯಾವತ್ತೂ ಸಾಲ, ಹಿಂದಿನ ಗೇಣಿ ಬಾಕಿ ಸಹಿತ ನಿವಾರಣೆ ಮತ್ತು ಸುಲಭದಲ್ಲಿ ಸಾಲ ಪಡೆಯುವ ವ್ಯವಸ್ಥೆ, ಭೂನ್ಯಾಯ ಮಂಡಳಿಯಲ್ಲಿ ನಡೆಯುವ ಅವ್ಯವಹಾರ, ಭೂಕಾರ್ಮಿಕರ ಸಮಸ್ಯೆ, ದಿನೇ ದಿನೇ ಹೆಚ್ಚುತ್ತಿರುವ ನಿರುದ್ಯೋಗದ ಬಗ್ಗೆ, ಹರಿಜನರು ಬೆತ್ತ ಬಿದಿರು ಸಿಗದೆ ಗೋಳಾಡುತ್ತಿರುವ ಬಗ್ಗೆ ದೀರ್ಘವಾಗಿ ಚರ್ಚಿಸಲಾಗಿತ್ತು. ಇಂದಿನ ಸಭೆಯಲ್ಲೂ ಕೂಡಾ ಕಾಮ್ರೇಡ್ ನಿತ್ಯಾನಂದಸ್ವಾಮಿ ಮಾತನಾಡಿ 'ಇನ್ನೂ ಭೂಸುಧಾರಣೆ ಜಾರಿ ಆಗದ ಬಗ್ಗೆ, ಈ ದೇಶದ ರೈತ ಆತ್ಮಹತ್ಯೆ ಮಾಡಿಕೊಳ್ಳುತ್ತಿರುವ ಬಗ್ಗೆ, ರೈತರ ಬೆಳೆಗೆ ಬೆಲೆ ಇಲ್ಲದೆ ಆತ್ಮವಿಶ್ವಾಸ ಕಳೆದುಕೊಳ್ಳುತ್ತಿರುವ ಬಗ್ಗೆ, ಸರ್ಕಾರ ಸಂಪೂರ್ಣ ರೈತ ವಿರೋಧಿಯಾಗಿ ಭೂಮಾಲೀಕರ, ಬಂಡವಾಳ-ಶಾಹಿಗಳ ಕೈಗೊಂಬೆ ಆಗಿರುವ ಬಗ್ಗೆ, ಕೃಷಿ-ರೈತರ ಅಭಿವೃದ್ಧಿಗೆ, ದೇಶದ ಅಭಿವೃದ್ಧಿಗೂ ಇರುವ ಸಂಬಂಧದ ಬಗ್ಗೆ, ಕೇಂದ್ರ ಮತ್ತು ರಾಜ್ಯ ಸರ್ಕಾರದ ಜನವಿರೋಧಿ ನೀತಿಯ ಬಗ್ಗೆ ವಿವರವಾಗಿ ಮಾತನಾಡಿ ರೈತ ಹೋರಾಟದ ಚರಿತ್ರೆ ಇರುವ ಈ ನೆಲದಲ್ಲಿ ಮತ್ತೊಮ್ಮೆ ಕೆಂಬಾವುಟ ಹಾರಾಡಬೇಕೆಂದು ಆಶಿಸಿದರು. ದುಡಿಯುವವರ ಕೈಗೆ ಈ ದೇಶದ ಅಧಿಕಾರ ಬರುವವರೆಗೆ ವಿರಮಿಸಬಾರದೆಂದು ಎಚ್ಚರಿಕೆ ಕೊಟ್ಟರು. 75-80 ವರ್ಷದ ಹಿರಿಯ ನಾಯಕ ಜೀವಾಜಿ ನಾಯಕ ಅವರಿಗೆ ನಿತ್ಯಾನಂದ ಸ್ವಾಮಿಯವರು ಹೂಹಾರ ಹಾಕುವ ಮೂಲಕ ತನ್ನ ಬತ್ತದ ಉತ್ಸಾಹದ ಚಿಲುಮೆಗೆ ಕೃತಜ್ಞತೆ ಅರ್ಪಿಸಿದರು.

1979 ರಲ್ಲಿ ಪ್ರಕಟವಾದ ಕರಪತ್ರದಲ್ಲಿ "1.5.1979 ನೇ ಮಂಗಳವಾರ ಬೆಳಿಗ್ಗೆ 9 ಗಂಟೆಗೆ ಹುತಾತ್ಮಗಣು ಮಾಬ್ಲು ನಾಯ್ಕ ಮತ್ತು ಪುರುಷೋತ್ತಮ ಬಾಬಾ ಇವರ ಸ್ಮರಣಾರ್ಥ ಕಿಸಾನ್ ಸಭಾ ಆಫೀಸ್ ಕಟ್ಟುವುದಕ್ಕೋಸ್ಕರ ಸ್ಟೋನ ಸಮಾರಂಭ ಜರುಗಲಿದೆ" ಎಂದು ಪ್ರಕಟ ಆಗಿತ್ತು. ಆದರೆ ಈ ಕೆಲಸ ಆಗಿದ್ದು ಮಾತ್ರ 3.3.2002 ರಂದು ರಾತ್ರಿ. ಹಿರಿಯ ರೈತ ಮುಖಂಡ ಪುರುಷೋತ್ತಮ ನಾಯ್ಕ ಅವರ ಸ್ಮರಣಾರ್ಥ ಅವರನ್ನು ಸಮಾಧಿ ಮಾಡಿದ ಸ್ಥಳದಲ್ಲಿಯೇ ಉಳಗಾದ ರೈತ ಬಾಂಧವರು, ಅವರ ಮನೆಯವರು ಸೇರಿ ಕಟ್ಟಿಸಬೇಕೆಂದಿರುವ ರೈತ ಭವನಕ್ಕೆ ನಿತ್ಯಾನಂದ ಸ್ವಾಮಿಯವರು ಅಡಿಗಲ್ಲನ್ನಿಟ್ಟು, ಧೀರೋದಾತ್ತ ಹೋರಾಟಕ್ಕೆ ಹೊರಟ ಜೊಯ್ಡಾದ ನೂರಾರು ಜನ ರೈತರ ಎದುರು ನಡೆದ ಈ ಅಡಿಗಲ್ಲು ನೆಡುವ ಸಮಾರಂಭ ಇಡೀ ಪ್ರದೇಶ ಮೊಳಗುವ 'ಇಂಕ್ವಿಲಾಬ್ ಜಿಂದಾಬಾದ್' ಮತ್ತು ಹುತಾತ್ಮ ಸಂಗಾತಿಗಳೇ ನೀವು ಬಿದ್ದ ಮರಗಳಲ್ಲ, ಬಿತ್ತಿದ ಬೀಜಗಳು' ಎನ್ನುವ ಘೋಷಣೆಯೊಂದಿಗೆ ನಡೆಯಿತು. ರೈತರ ಜಾಥಾದ ಮಧ್ಯೆ ಇಂತಹ ಕಾರ್ಯಕ್ರಮ ನಡೆದದ್ದು 2 ದಿನದ ನಡಿಗೆಯ ಆಯಾಸವನ್ನು ಕ್ಷಣಾರ್ಧದಲ್ಲಿ ಕಳೆದುಬಿಟ್ಟಿತು.

ಅಂದು ನಡೆದ ಸಭೆಯಲ್ಲಿ ಎಂ.ಕೆ.ಭಟ್ಟ, ಪಿ.ರಾಮಚಂದ್ರರಾವ್, ಆರ್.ಜಿ.ಸ್ಥಳೇಕರ್, ಎಸ್ಎಫ್ಐ ಮುಖಂಡ ಸೂರ್ಯನಾರಾಯಣ ಭಟ್ಟ, ಆಲ್ ಇಂಡಿಯಾ ಕಿಸಾನ್ ಸಭೆಯ ಮುಖ್ಯಸ್ಥರಾದ ಕಾಂ. ಗೋದುತಾಯಿ ಪುರುಳೇಕರ ಮುಂತಾದವರು ಭಾಗವಹಿಸಿದ್ದು ಸಭೆಯ ಮಹತ್ವವನ್ನು ತಿಳಿಸುತ್ತದೆ.

ಇಂದು ನಡೆದ ಸಭೆಯಲ್ಲಿ ನಿತ್ಯಾನಂದ ಸ್ವಾಮಿ, ಮಂಜುನಾಥ ಪುಲ್ಕರ, ಶಾಂತಾರಾಮ ನಾಯಕ, ಜೀವಾಜಿ ಪುರುಷೋತ್ತಮ ನಾಯಕ, ವಿಷ್ಣು ಮಾಸ್ತರರು ಮಾತನಾಡಿದರು. ಉಳಗಾದ ರೈತ ಮುಖಂಡರು, ಜೋಯ್ಡಾದ ಶಾಂತ ವೇಳಿಪ, ಪ್ರೇಮಾನಂದ ವೇಳಿಪ, ಜಿ.ಎಲ್. ನಾಯ್ಕ ಮತ್ತು ಎಸ್ಎಫ್ಐ - ಡಿವೈಎಫ್ಐ ಮುಖಂಡರು ಬಾಗವಹಿಸಿದ್ದರು. ಇಡೀ ಸಭೆ ಮತ್ತೊಮ್ಮೆ ರೈತ ಸಂಘ ಕಟ್ಟುವ ತೀರ್ಮಾನ ಕೈಗೊಂಡರು.

ಇಲ್ಲಿ ರೈತ ಸಂಘ ಪ್ರಾರಂಭ ಆದದ್ದು ಹೇಗೆ?


ಒಮ್ಮೆ ಅನಾರೋಗ್ಯದಿಂದ ಬಳಲುತ್ತಿದ್ದವರನ್ನು ಗೋವಾಕ್ಕೆ ತೆಗೆದುಕೊಂಡು ಹೋದಾಗ ಇವರ ಸ್ಥಿತಿಯನ್ನು ನೋಡಿದ ಗೋವಾದ ಕಾರ್ಮಿಕ ಮುಖಂಡರು ಅವರಿಗೆ ಬುದ್ಧಿಮಾತು ಹೇಳಿದರು. ಇಷ್ಟು ದಿನ ಸಹಿಸಿದ್ದು ಸಾಕು. ನೀವೂ ಮನುಷ್ಯರೇ, ನಿಮ್ಮ ಬೇಡಿಕೆಗಾಗಿ ನೀವು ಸಂಘ ಕಟ್ಟಿ, ಹೋರಾಡಿ ಎಂದು ಹೇಳಿ ದಾಂಡೇಲಿಯಲ್ಲಿರುವ ಸಿಐಟಿಯು ಕಛೇರಿಯ ವಿಳಾಸಕೊಟ್ಟು ಕಳುಹಿಸಿದರು. ಸಿಐಟಿಯು ಕಛೇರಿ ಅರಸುತ್ತಾ ಬಂದ ಇಲ್ಲಿಯ ರೈತರು, ಕೂಲಿಕಾರರು ನಮ್ಮ ಬೇಡಿಕೆ ಈಡೇರಿಸಿಕೊಳ್ಳಲು ಬೇಕಾದ ಹೋರಾಟ, ಸಂಘಟನೆಗೆ ಮಾರ್ಗದರ್ಶನ ಮಾಡುವಂತೆ ಕೇಳಿದರು. ಕಾಂ. ಮಂಜುನಾಥ ಪುಲ್ಕರ ಅವರು ಪೇಪರ್‌ಮಿಲ್ ಸಂಘಟನೆಯ ಸಂಗಾತಿಗಳ ನೆರವಿನಿಂದ ಜೊಯ್ಡಾ ಡಿಗ್ಗಿ, ಚಾಚಾರಕೋಣ, ಮುಡೆ, ಕಾಜೋರ್ಳ, ಕೆಸರವಾತ್ ಇತ್ಯಾದಿ ಪ್ರದೇಶಗಳಿಗೆ ಭೇಟಿ ಕೊಟ್ಟು, ಅವರ ಪ್ರಾಣಿಸದೃಶ್ಯ ಬದುಕನ್ನು ಸ್ವತಃ ಕಂಡು ಕರ್ನಾಟಕ ಪ್ರಾಂತ ರೈತ ಸಂಘ ಕಟ್ಟಲು ಮಾರ್ಗದರ್ಶನ ಮಾಡಿದರು. ಇತರ ಸಂಘಟನೆಗಳ ಮುಖಂಡರಾದ ಮಾಧವ ಸೆರೆಗಾರ, ಎಸ್.ವಿ.ಸಾವಂತ, ಎಚ್.ಬಿ. ನಾಯ್ಕ, ಯಮುನಾ ಗಾಂವ್ಕರ, ಎಂ.ಬಿ. ನಾಯ್ಕ, ವಿಲಾಸಕಾಂಬ್ಳೆ, ವಿಠ್ಠಲಭಂಡಾರಿ, ನಿತ್ಯಾನಂದ ಸ್ವಾಮಿ, ಶಾಂತರಾಮ ನಾಯಕ ಮುಂತಾದವರು ಭೇಟಿ ಕೊಟ್ಟು ಅವರಿಗೆ ಧೈರ್ಯ ಹೇಳಿ ಹೋರಾಟ ಸಂಘಟನೆ ಬಿಡುಗಡೆಗೆದಾರಿ ತೋರಿಸುತ್ತದೆ ಎನ್ನುವ ವಿಶ್ವಾಸ ತುಂಬಿದವರು ಇಂದು 4-5 ಪಂಚಾಯತ್ ವ್ಯಾಪ್ತಿಗೆ ಸೇರಿದ ಅತಿ ಹಿಂದುಳಿದ ಸಾವಿರಾರು ಜನರು ಕರ್ನಾಟಕ ಪ್ರಾಂತ ರೈತ ಸಂಘದ ಸದಸ್ಯರಾಗಿ ಕೆಂಬಾವುಟವನ್ನು ಕೈಯಲ್ಲಿ ಹಿಡಿದಿದ್ದಾರೆ. ಈ ಜನರೆಲ್ಲಾ ದಡ್ಡರೆಂದು ತಿಳಿದು ತಾನೇ ತಾನಾಗಿ ಮೆರೆಯುತ್ತಿದ್ದ ಜನ ಪ್ರತಿನಿಧಿಗಳು ಕಂಗಾಲಾಗಿದ್ದಾರೆ. ಎಚ್ಚೆತ್ತ ರೈತರ ಬೇಡಿಕೆಗಳನ್ನು ಈಡೇರಿಸುವ ಬದಲು ಸಂಘವನ್ನೇ ಮುರಿಯುವ ಕುತಂತ್ರಕ್ಕೆ ಮುಂದಾಗಿರುವುದು ಮಾತ್ರ ಖಂಡನೀಯ.

86 ಕಿ.ಮಿ. ಮತ್ತೆ 50 ಸೇರಿಸಬೇಕು

ಉತ್ತರ ಕನ್ನಡದ ಇತಿಹಾಸದಲ್ಲಿಯೇ ಅತ್ಯಂತ ಮಹತ್ವದ ಕಾಲ್ನಡಿಗೆ ಜಾಥಾ ಇದು. ಹಿಂದಿನ ಸ್ವಾತಂತ್ರ್ಯ ಹೋರಾಟ, ಶತಮಾನದ 4, 5, 6 ನೇ ದಶಕದ ರೈತ ಹೋರಾಟವನ್ನು ಮತ್ತೆ ನೆನಪಿಸುವ ರೀತಿಯಂತಿದ್ದ ಜಾಥಾ ಜೋಯ್ಡಾದಿಂದ ಕಾರವಾರಕ್ಕೆ ಕ್ರಮಿಸಿದ್ದು 86 ಕಿ.ಮಿ. ಇದನ್ನೇ ಕೇಳಿಯೇ ಹುಬ್ಬೇರಿಸಬಹುದು. ಆದರೆ ಇದಕ್ಕೆ ಇನ್ನೂ 40-50 ಕಿ.ಮಿ. ಸೇರಬೇಕು. ಯಾಕೆಂದರೆ ರೈತರು ತಮ್ಮ ಹಳ್ಳಿಗಳಿಂದ ಜೋಯ್ಡಾದ ತಹಶೀಲ್ದಾರ್ ಕಛೇರಿಗೆ ಬರುವಾಗಲೇ 40-50 ಕಿ.ಮಿ. ನಡೆದು ಬಂದಿದ್ದಾರೆ. ಹಾಗಾಗಿ ರೈತರು ತಮ್ಮ ಬೇಡಿಕೆ ಈಡೇರಿಸಲು ಒತ್ತಾಯಿಸಿ ನಡೆದು ಬಂದಿದ್ದು ಸುಮಾರು 125 ರಿಂದ 135 ಕಿ.ಮಿ. ಮೊದಲ ಬಾರಿಗೆ ಅಣಶಿಘಟ್ಟದ ಕಾಡು-ಕಣಿವೆಯ ಮಧ್ಯೆ ಸಾಲುಸಾಲು ಕೆಂಬಾವುಟದ ನಡಿಗೆ ಧೀರೋದಾತ್ತ ಘೋಷಣೆಯು ಪ್ರತಿನಿಧಿ ಪ್ರತಿಧ್ವನಿಸಿ ರೈತರ ಸಿಟ್ಟಿಗೆ, ಗೆಲ್ಲುವ ಆತ್ಮವಿಶ್ವಾಸಕ್ಕೆ ಹೆದರಿದ ರಸ್ತೆಯೇ ಮುಂದಡಿ ಮುದುಡಿ ಕಾರವಾರವನ್ನೇ ಹತ್ತಿರತಂದ ಅನುಭವ.

ಇಡೀ ಕಾಲ್ನಡಿಗೆ ಜಾಥಾದ ಮುಂದಾಳತ್ವ ವಹಿಸಿದವರು ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾ ಸಮಿತಿ ಸದಸ್ಯರಾದ ಮಂಜುನಾಥ ಪುಲ್ಕರ, ಜಿಲ್ಲಾ ಸಂಚಾಲಕ ಶಾಂತಾರಾಮ ನಾಯಕ, ಜೋಯ್ಡಾ ತಾಲೂಕು ರೈತ ಸಂಘದ ಅಧ್ಯಕ್ಷ ಶಾಂತಾ ವೇಳೀಪ, ಕಾರ್ಯದರ್ಶಿ ಪ್ರೇಮಾನಂದ ವೇಳೀಪ, ಜಿಲ್ಲಾ ಸಮಿತಿ ಸದಸ್ಯ ವಿಲಾಸ ಕಾಂಬ್ಳೆ ಮುಂತಾದವರು.

ಕಾಲ್ನಡಿಗೆ ಜಾಥಾದಲ್ಲಿ ಸೌಹಾರ್ದ ಬೆಂಬಲದೊಂದಿಗೆ ಕೃಷಿ ಕೂಲಿಕಾರರ ಸಂಘದ ರಾಜ್ಯ ಉಪಾಧ್ಯಕ್ಷ ಕಾಂ. ನಿತ್ಯಾನಂದಸ್ವಾಮಿ ದಾರಿಯುದ್ದಕ್ಕೂ ಪಾಲ್ಗೊಂಡು ಕಾರ್ಯಕರ್ತರಲ್ಲಿ ಉತ್ಸಾಹ ತುಂಬಿದರು. ಎಸ್ಎಫ್ಐನ ಕಾರವಾರ ತಾಲೂಕು ಅಧ್ಯಕ್ಷ ಪ್ರಸನ್ನ ನಾಯಕ, ಕಾರ್ಯದರ್ಶಿ ಸತ್ಯನಾರಾಯಣ ನಾಯ್ಕ, ಸದಸ್ಯರಾದ ಕವಿತಾ, ವಸಂತ ಮುಂತಾದವರು... ರೈತರೊಂದಿಗೆ 3ದಿನ ಕೂಡ ನಡೆದ ಪ್ರಾಂತ ರೈತ ಸಂಘದ ಕಾರವಾರ ಸಂಚಾಲಕರಾದ ಜಿ.ಎಲ್.ನಾಯ್ಕ, ಡಿವೈಎಫ್ಐನ ಶ್ಯಾಮನಾಥ, ಜಿಲ್ಲಾ ಕಾರ್ಯದರ್ಶಿ ವಿಠ್ಠಲ ಭಂಡಾರಿ, ಅಂಗನವಾಡಿ ನೌಕರರ ಸಂಘದ ಜಿಲ್ಲಾ ಕಾರ್ಯದರ್ಶಿ ಯಮುನಾ ಗಾಂವ್ಕರ್, ಎಸ್ಎಫ್ಐನ ಜಿಲ್ಲಾ ಕಾರ್ಯದರ್ಶಿ ರಾಮನಾಥ ಪಟಗಾರ,ಸತೀಶ, ದಿನೇಶ, ಯಶೋಧರನ್ ಮುಂತಾದವರು ಕಾಲ್ನಡಿಗೆ ಜಾಥಾದಲ್ಲಿ ಪಾಲ್ಗೊಂಡು ಯಶಸ್ವಿಗೊಳಿಸಲು ಸಹಕರಿಸಿದರು. ಕಾಲ್ನಡಿಗೆಯಲ್ಲಿ ಅತ್ಯಂತ ಹಿರಿಯ 65 ವರ್ಷದ ನಾರಾಯಣ ದೆವ್ಗೂ ವೇಳೀಪ 15-16 ವರ್ಷದ ಹುಡುಗಿ ವಿಶ್ರಾಂತಿ ವೇಳೀಪ, ಕಾಲೇಜು ಹುಡುಗ ಅಂಬೇರ, ಸಾವಂತ, 25-30 ಮಹಿಳೆಯರು ಭಾಗವಹಿಸಿದ್ದರು.



ಗುಜರಾತ್ ಸರಕಾರ ಅದಕ್ಷ- ನಿಷ್ಕ್ರಿಯ, ಗೋದ್ರಾ-ಘೋರ, ಅನಂತರದ ವಿದ್ಯಮಾನಗಳು ಘನ ಘೋರವಾದುದು, ಮಹಿಳೆಯರು ಅನುಭವಿಸಿದ ಸಂಕಷ್ಟಗಳು ಅಮಾನವೀಯವಾದುದು, ಸರಕಾರದ ವರದಿ ಕಾಟಾಚಾರದ್ದು, ಅಧಿಕಾರಿಗಳು ಕರ್ತವ್ಯ ನಿರ್ವಹಿಸಲು ಯಾರದೇ ಅನುಮತಿಗಾಗಿ ಕಾಯಬೇಕಿಲ್ಲ..... ಈ ರೀತಿಯಾಗಿ ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷ, ಭಾರತದ ಮಾಜಿ ಮುಖ್ಯ ನ್ಯಾಯಮೂರ್ತಿ ಜೆ.ಎಸ್. ವರ್ಮಾ ಮಾಡಿರುವ ವಿಶ್ಲೇಷಣೆ - ವ್ಯಕ್ತಪಡಿಸಿರುವ ಅಭಿಪ್ರಾಯಗಳನ್ನು 'ಐಕ್ಯರಂಗ'ಕ್ಕಾಗಿ ಸಾರರೂಪದಲ್ಲಿ ನೀಡಿದ್ದಾರೆ ಪತ್ರಕರ್ತ *ವಿಶ್ವ ಕುಂದಾಪುರ.*



ಗುಜರಾತ್ ಹತ್ಯಾಕಾಂಡ

'ನಿನ್ನ ತಪ್ಪು ಭಾರಿ' ಮೋದಿ ಸರ್ಕಾರಕ್ಕೆ ಛೀಮಾರಿ


ಮಾನವ ಹಕ್ಕು ಆಯೋಗ ಅಧ್ಯಕ್ಷರ ನಿಷ್ಠುರ ನುಡಿಗಳು

"ಗುಜರಾತಿನ ಗಲಭೆ ಪೀಡಿತ ಪ್ರದೇಶಗಳಲ್ಲಿ ನಾನು ನೋಡಿದ ಹಾಗೂ ಕೇಳಿದ ವಿಚಾರಗಳಿಂದ ಉಂಟಾದ ಆಘಾತದಿಂದ ಚೇತರಿಸಿಕೊಳ್ಳಲು ಇನ್ನೂ ಎರಡು ದಿನ ಬೇಕಾಗುತ್ತದೆ".

ಬರ್ಬರ ಜನಾಂಗೀಯ ಹತ್ಯಾಕಾಂಡಗಳು ನಡೆದ ಗುಜರಾತಿನಲ್ಲಿನ ಪರಿಸ್ಥಿತಿಯ ಭೀಕರತೆಯನ್ನು ಪ್ರತಿಬಿಂಬಿಸುವ ಈ ಮಾತನ್ನು ಹೇಳಿದವರು ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗದ (ಎನ್.ಎಚ್.ಆರ್.ಸಿ.) ಅಧ್ಯಕ್ಷ ಭಾರತದ ಮಾಜಿ ಮುಖ್ಯ ನ್ಯಾಯಮೂರ್ತಿ ಜೆ.ಎಸ್. ವರ್ಮಾ.

ದೇಶದ ಸರ್ವೋನ್ನತ ನ್ಯಾಯಾಲಯದ ನ್ಯಾಯಾಧೀಶರೇ ದುರ್ಘಟನೆಗಳು ಸಂಭವಿಸಿದ ಸುಮಾರು ಮೂರು ವಾರಗಳ ನಂತರದ ಸ್ಥಿತಿಕಂಡು ಈ ರೀತಿ ಮರುಕ ಪಡಬೇಕಾದರೆ 'ಹಿಂದೂತ್ವವಾದದ ಪ್ರಯೋಗ' ನಡೆದ ಆ ನಾಡಿನಲ್ಲಿನ ಸ್ಥಿತಿ ಹೇಗಿತ್ತು ಎನ್ನುವುದನ್ನು ಕಲ್ಪಿಸಿಕೊಳ್ಳಬಹುದಾಗಿದೆ.

ನ್ಯಾ. ವರ್ಮಾ ನೇತೃತ್ವದ ನಾಲ್ವರು ಸದಸ್ಯರ ಆಯೋಗ ಮಾರ್ಚ್ 21 ರಿಂದ ಮೂರು ದಿನ ಕಾಲ ಅಹಮದಾಬಾದ್, ಗೋದ್ರಾ ಮತ್ತು ವಡೋದರ (ಬರೋಡಾ)ಗಳಿಗೆ ಭೇಟಿ ನೀಡಿ ಪರಿಸ್ಥಿತಿಯನ್ನು ಕಣ್ಣಾರೆ ಪರಿಶೀಲಿಸಿತು. ಪ್ರಧಾನ ಕಾರ್ಯದರ್ಶಿ ಪಿ.ಸಿ. ಸೇನ್, ವಿಶೇಷ ಬಾತ್ಮಿದಾರ



ನ್ಯಾಯಮೂರ್ತಿ ವರ್ಮಾ

ಚಮನ್‌ಲಾಲ್ ಹಾಗೂ ಆಯೋಗದ ಅಧ್ಯಕ್ಷರ ಖಾಸಗಿ ಕಾರ್ಯದರ್ಶಿ ವೈ.ಎಸ್.ಆರ್. ಮುರ್ಥಿ ಭೇಟಿ ನೀಡಿದ ತಂಡದಲ್ಲಿದ್ದರು.

ಕಾಟಾಚಾರದ ವರದಿ

ಗುಜರಾತ ಗಲಭೆಗಳ ಸಂಬಂಧ ರಾಜ್ಯ ಸರಕಾರ ಸಲ್ಲಿಸಿದ ಪ್ರಾಥಮಿಕ ವರದಿ 'ಕಾಟಾಚಾರದ್ದು' ಎಂದು ಮುಖ್ಯಮಂತ್ರಿ ನರೇಂದ್ರ ಮೋದಿಯ ಮುಖಕ್ಕೆ ಹೊಡೆದಂತೆ ನ್ಯಾ. ವರ್ಮಾ ಹೇಳಿದ್ದು ಇಡೀ ದೇಶದ ಗಮನ ಸೆಳೆದಿದೆ. ಇನ್ನು ಕೆಲವೇ ದಿನಗಳಲ್ಲಿ ಸಮಗ್ರವಾದ ವರದಿಯನ್ನು ಸಲ್ಲಿಸಬೇಕು. ಇಲ್ಲದಿದ್ದರೆ ಪ್ರತ್ಯಕ್ಷ ಭೇಟಿಯ ವೇಳೆ ಆಯೋಗ ಕಂಡುಕೇಳಿದ ಅಂಶದ ಆಧಾರದಲ್ಲಿ ಆದೇಶವನ್ನು ಹೊರಡಿಸುವುದಾಗಿ ವರ್ಮಾ ಎಚ್ಚರಿಕೆ ನೀಡಿದ್ದಾರೆ. (ಬಹುಶಃ ಈ ವರದಿ ಪ್ರಕಟವಾಗುವ ಹೊತ್ತಿಗೆ ಗುಜರಾತ್ ಸರಕಾರ 'ಸಮಗ್ರ ವರದಿ' ಸಲ್ಲಿಸಿರುತ್ತದೆ. ಅದು ಹೇಗಿರುತ್ತದೆ ಎನ್ನುವುದನ್ನು ನೋಡಬೇಕು)

ಗುಜರಾತ್ ಹತ್ಯಾಕಾಂಡದಂಥ ಪ್ರಕರಣಗಳು ದೇಶದ ಯಾವುದೇ ಭಾಗದಲ್ಲಿ ಮರುಕಳಿಸದಿರುವ ದಿಸೆಯಲ್ಲಿ ಆಯೋಗ ಕೆಲವು ಕ್ರಮಗಳನ್ನು ಶಿಫಾರಸು ಮಾಡಲಿದೆ ಎಂದು ನ್ಯಾಯಮೂರ್ತಿ ವರ್ಮಾ ಹೇಳಿದ್ದಾರೆ.

ಘನಘೋರ - ಅಮಾನವೀಯ

ಗುಜರಾತ್ ಭೇಟಿಯಿಂದ ನವದೆಹಲಿಗೆ ಮರಳಿದ ನ್ಯಾ. ವರ್ಮಾ ಮಾರ್ಚ್ 24 ರಂದು ರಾಜಧಾನಿಯಲ್ಲಿ ಕಿಕ್ಕಿರಿದ ಮಾಧ್ಯಮ ಗೋಷ್ಠಿಯಲ್ಲಿ ಮಾತನಾಡಿದರು.

ಗಾಂಧಿನಾಡಿನಲ್ಲಿ ರಾಮನ ಹೆಸರಿನಲ್ಲಿ ಮಾನವೀಯತೆಯ ಹತ್ಯೆ ನಡೆಸಿದ ಕಟುಕರ ಬಗ್ಗೆ, ಅಲ್ಲಿನ ಸ್ಥಿತಿಗತಿ ಬಗ್ಗೆ ವಿವರಿಸಿದರು.

★ ದೌರ್ಜನ್ಯಕ್ಕೊಳಗಾದ ಮಹಿಳೆಯರು ಹೇಳಿದ ವಿಚಾರಗಳನ್ನು ವಿವರಿಸಲು ನನ್ನಿಂದ ಆಗುತ್ತಿಲ್ಲ. ಅದು ಘೋರ ಹಾಗೂ ಅಮಾನವೀಯವಾದುದು. ಇವುಗಳಿಂದ ನಾನು ನಿಜಕ್ಕೂ ಕಳವಳಗೊಂಡಿದ್ದೇನೆ.

★ ಗೋದ್ರಾ ರೈಲು ಹತ್ಯಾಕಾಂಡ ಘೋರವಾದುದು. ಆದರೆ, ಅದರ ನಂತರದ ವಿದ್ಯಮಾನಗಳು ಘನಘೋರವಾದುದು.

★ ಗೋದ್ರಾ ದುರಂತರದ ಸುಮಾರು ಒಂದು ತಿಂಗಳ ನಂತರವೂ ಪರಿಸ್ಥಿತಿ ಇನ್ನೂ ತಹಬಂದಿಗೆ ಬಂದಿಲ್ಲ. ಪರಿಸ್ಥಿತಿಯನ್ನು ಸಹಜತೆಗೆ ತರಲು ರಾಜ್ಯ ಸರಕಾರ ತುರ್ತು ಕ್ರಮಗಳನ್ನು ಕೈಗೊಳ್ಳಬೇಕು.

★ ಎಲ್ಲಾ ಧರ್ಮಗಳ ಜನರಲ್ಲಿ ಇನ್ನೂ ಭಯದ ಮನೋಭಾವ ಮುಂದುವರಿದಿದೆ.

★ ಆ ಧರ್ಮದವರು - ಈ ಧರ್ಮದವರು ಎಂಬ ಪರಿಗಣನೆ ಇಲ್ಲದೆ ಎಲ್ಲಾ ಜನರು ಸುರಕ್ಷಿತರಾಗಿರಬೇಕು.

ನ್ಯಾಯಾಧೀಶರ ಮನೆಗಳ ಮೇಲೆ ಹಲ್ಲೆ

ಗುಜರಾತ್ ನರಮೇಧದ ವೇಳೆ ನ್ಯಾಯಾಧೀಶರ ಮನೆಗಳ ಮೇಲೆ ಹಲ್ಲೆ ನಡೆಯಿತೆಂಬ ವಿಚಾರ ಯಾರ ಗಮನಕ್ಕೂ ಬಂದಂತಿರಲಿಲ್ಲ. ಆದರೆ ನ್ಯಾ. ವರ್ಮಾ ಈ ಅಂಶದ ಮೇಲೆಯೂ ಬೆಳಕು ಚೆಲ್ಲಿದ್ದಾರೆ.

ನ್ಯಾಯಾಧೀಶರ ಮನೆಗಳ ಮೇಲೆ ಕೂಡ ಗಲಭೆಕೋರರು ಹಲ್ಲೆ ನಡೆಸಿರುವುದು ಕಳವಳದ ಸಂಗತಿ ಎಂದವರು ನುಡಿದರು.

ವೈಫಲ್ಯ ..... ವೈಫಲ್ಯ

ಗೋಧ್ರಾ ರೈಲು ಹತ್ಯಾಕಾಂಡವನ್ನು ತಪ್ಪಿಸಬಹುದಿತ್ತು. ನಂತರದ ಘಟನೆಗಳನ್ನು ತಡೆಯಬಹುದಾಗಿತ್ತು. ಆದರೆ ರಾಜ್ಯ ಸರಕಾರದ ವೈಫಲ್ಯಗಳಿಂದಾಗಿ ಇವೆಲ್ಲ ದುರಂತಗಳು ಸಂಭವಿಸಿದವು.

★ 72 ಗಂಟೆಗಳೊಳಗೆ ಪರಿಸ್ಥಿಯನ್ನು ನಿಯಂತ್ರಿಸಲಾಯಿತು ಎಂದು ಮುಖ್ಯಮಂತ್ರಿ ಹೇಳಿಕೊಂಡಿದ್ದಾರೆ. ಆದರೆ ಮೂರು ವಾರಗಳ ನಂತರ ಭೇಟಿ ನೀಡಿ ನೋಡಿದಾಗಲೂ ಪರಿಸ್ಥಿತಿ ಇನ್ನೂ ಸಹಜಸ್ಥಿತಿಗೆ ಬಾರದಿರುವುದು ತಿಳಿಯಿತು. ಎಲ್ಲಾ ಧರ್ಮಗಳ ಜನರ ಮನದಲ್ಲಿ ಅಭದ್ರತೆಯ ಭಾವನೆ ನೆಲೆಯೂರಿದೆ.

★ ಜನರಲ್ಲಿ ಆತ್ಮವಿಶ್ವಾಸ ಮೂಡಿಸುವ ಕೆಲಸ ತುರ್ತಾಗಿ ಆಗಬೇಕು ಎಂದು ಗುಜರಾತ್ ಮುಖ್ಯಮಂತ್ರಿಗೆ ಸೂಚಿಸಿದ್ದೇನೆ.

★ ಪರಿಸ್ಥಿತಿಯನ್ನು ಸಹಜಸ್ಥಿತಿಗೆ ಮರಳಿಸಲು ರಾಜ್ಯ ಸರಕಾರ 'ಅತಿ ಹೆಚ್ಚಿನ ಆದ್ಯತೆ ನೀಡಬೇಕು'.

ಪರಿಹಾರ ಶಿಬಿರಗಳು

★ ಗಲಭೆಪೀಡಿತ ಜನರಿಗಾಗಿ ರಚಿಸಿರುವ ಪರಿಹಾರ ಶಿಬಿರಗಳಲ್ಲಿನ ಸ್ಥಿತಿ ನಿರಾಶಾದಾಯಕವಾಗಿದೆ.

★ ಸಚಿವರಾಗಲೀ ಉನ್ನತ ಮಟ್ಟದ ಅಧಿಕಾರಿಗಳಾಗಲೀ ಪರಿಹಾರ ಶಿಬಿರಗಳಿಗೆ ಭೇಟಿ ನೀಡದಿರುವುದು ವಿಷಾದದ ಸಂಗತಿ.

★ ಗೋದ್ರಾ ಹತ್ಯಾಕಾಂಡವೇ ಇರಲಿ ನಂತರದ ನರಮೇಧಗಳೇ ಇರಲಿ ಗಲಭೆಕೋರರಿಗೂ ಧರ್ಮಕ್ಕೂ ಯಾವುದೇ ಸಂಬಂಧ ಇಲ್ಲ ಎನ್ನುವುದೇ ನನ್ನ ಬಲವಾದ ನಂಬಿಕೆ. ಇವರೆಲ್ಲರನ್ನೂ ಕ್ರಿಮಿನಲ್‌ಗಳು ಎಂದು ಪರಿಗಣಿಸಿ ಸಮಾನವಾಗಿ ಶಿಕ್ಷಿಸಬೇಕು.

ಅನುಮತಿಗಾಗಿ ಕಾಯಬೇಡಿ...

★ ಅನುಮತಿಗಾಗಿ ಕಾಯಬೇಡಿ, ನಿಮ್ಮ ಕರ್ತವ್ಯವನ್ನು ನೀವು ನಿರ್ವಹಿಸಿ

ಇದು ಗುಜರಾತಿನ ಅಧಿಕಾರಿಗಳಿಗೆ, ವಿಶೇಷವಾಗಿ ಪೊಲೀಸರಿಗೆ ಮಾನವ ಹಕ್ಕು ಆಯೋಗದ ಅಧ್ಯಕ್ಷರ ಸ್ಪಷ್ಟ ಸಲಹೆ.

ದುಷ್ಕರ್ಮಿಗಳ ವಿರುದ್ಧ ಕ್ರಮ ಕೈಗೊಳ್ಳಲು ಹಾಗೂ ಗಲಭೆಗಳನ್ನು ನಿಯಂತ್ರಿಸಲು ನಮಗೆ ಮುಕ್ತ ಅವಕಾಶ ನೀಡಿ ಎಂದು ಕೆಲವು ಉನ್ನತ ಪೊಲೀಸ ಅಧಿಕಾರಿಗಳು ಗುಜರಾತ್ ಮುಖ್ಯಮಂತ್ರಿ ಮೋದಿಗೆ ಮನವಿ ಮಾಡಿದ್ದಾರೆಂಬ ವರದಿಗಳ ಹಿನ್ನೆಲೆಯಲ್ಲಿ ನ್ಯಾ. ವರ್ಮಾರ ಸ್ಪಷ್ಟ ನುಡಿಯಿದು.

ಕಾನೂನಿನಂತೆ ಕರ್ತವ್ಯ ನಿಭಾಯಿಸಲು ಯಾರೂ ಯಾರದೇ ಅನುಮತಿಗಾಗಿ ಕಾದು ಕುಳಿತುಕೊಳ್ಳಬೇಕಾಗಿಲ್ಲ. ಅಧಿಕಾರಿಗಳು ಕೆಲಸ ಮಾಡಬೇಕು ಅಷ್ಟೇ ಎನ್ನುತ್ತಾರೆ ಈ ಧೀಮಂತ ನ್ಯಾಯಾಧೀಶ.

ವಿಶ್ವಹಿಂದೂ ಪರಿಷತ್ ಗೋದ್ರಾ ದುರಂತದಲ್ಲಿ ಸತ್ತವರ 'ಅಸ್ಥಿಯಾತ್ರೆ' ನಡೆಸಲು ಉದ್ದೇಶಿಸಿದ್ದನ್ನೂ ವರ್ಮಾ ಕಟುವಾಗಿ ಖಂಡಿಸಿದರು. ಇಂದಿನ ಪರಿಸ್ಥಿತಿ ಇನ್ನಷ್ಟು ಹದಗೆಡುತ್ತಿತ್ತು ಎನ್ನುತ್ತಾರವರು..

ಆಯೋಗದ ಪೂರ್ಣ ಸಭೆ ಶೀಘ್ರವೇ ನಡೆಯಲಿದ್ದು ಮುಂದಿನ ಕ್ರಮವನ್ನು ಯೋಜಿಸಲಿದೆ

ಐಕ್ಯತೆಯೊಂದಿಗೆ ಮುನ್ನಡೆ...

ಪುಟ 6 ರಿಂದ

ಅಸಮರ್ಥ ಉಲ್ಲಂಘನೆ, ಅಂಶಗಳು ಹೀಗೆ ಪ್ರಾದೇಶಿಕವಾರು ಪಕ್ಷಗಳ ರಚನೆಗೆ ಕಾರಣವಾಗಿರುವ ಅಂಶಗಳ ಮತ್ತು ರಾಜ್ಯ ಸರ್ಕಾರಗಳ ನಡುವೆ ಅವಶ್ಯಕವಿರುವ ಹೊಂದಾಣಿಕೆ ಕುರಿತು ಒತ್ತು ನೀಡಲಾಗಿದೆ.

ಅತೃಪ್ತಿ ಬೆಳವಣಿಗೆ

ಬಿಜೆಪಿ ಸರ್ಕಾರದ ಜನವಿರೋಧಿ, ದೇಶ ವಿರೋಧಿ ಮತ್ತು ಧರ್ಮನಿರಪೇಕ್ಷತೆ ವಿರೋಧಿ ನೀತಿಗಳ ವಿರುದ್ಧದ ಹೋರಾಟಗಳನ್ನು ಅಣಿನೆರೆಸುವಲ್ಲಿ ನಮ್ಮ ಪಕ್ಷವು ಸದಾ ಮುಂಚೂಣಿಯಲ್ಲಿದೆ. ಈ ನೀತಿಗಳ ವಿರುದ್ಧ ಜನರ ಅತೃಪ್ತಿ ದಿನೇ-ದಿನೇ ಜಾಸ್ತಿಯಾಗುತ್ತಿದೆ.

ಮತ್ತದರ ಮಿತ್ರಪಕ್ಷಗಳು ತೀವ್ರ ಸೋಲನ್ನು ಅನುಭವಿಸಿವೆ. ಆದರೆ ಬಿಜೆಪಿ-ಎನ್.ಡಿ.ಎ.ಗೆ ಪರ್ಯಾಯವಾಗಿ ಪ್ರಜಾಪ್ರಭುತ್ವವಾದಿ ಶಕ್ತಿಗಳು ಈ ಕೆಲವು ರಾಜ್ಯಗಳಲ್ಲಿ ಬೆಳೆದು ಬರಲಿಲ್ಲ. ಹಲವಾರು ರಾಜ್ಯಗಳಲ್ಲಿ ಪರ್ಯಾಯ ಪ್ರಜಾಪ್ರಭುತ್ವದ ಗೈರು ಹಾಜರಿ ಪರಿಣಾಮವಾಗಿ ಕಾಂಗ್ರೆಸ್(ಐ) ಅದರ ಲಾಭ ಪಡೆಯಿತು. ಎಲ್ಲಿ ಪರ್ಯಾಯವನ್ನು ನೀಡಲು ಸಾಧ್ಯವಿದೆಯೋ ಅಲ್ಲಿ ಜನರು ಕಾಂಗ್ರೆಸ್‌ನಿಂದಲೂ ಸರಿದು ಅಂತಹ ಶಕ್ತಿಗಳನ್ನು ಬೆಂಬಲಿಸಿದ್ದಾರೆ. ಇತ್ತೀಚೆಗೆ ಉತ್ತರ ಪ್ರದೇಶದ ಸಮಾಜವಾದಿ ಪಕ್ಷವು ಅತ್ಯಂತ ನಿರ್ಣಾಯಕ ಶಕ್ತಿಯಾಗಿ ಬೆಳೆದುಬಂದಿರುವುದನ್ನು ಜಾರಿಗೊಳಿಸಲು ಪ್ರಯತ್ನ ನಡೆಸುತ್ತಿರುವಾಗಲೇ ಇದರ ವಿರುದ್ಧ ಎನ್.ಡಿ.ಎ ಮೈತ್ರಿಕೂಟದೊಳಗೆ ಅತೃಪ್ತಿ ತೀವ್ರಗೊಂಡಿತು. ಈಗಿರುವ ಎನ್.ಡಿ.ಎ ಹೊಂದಾಣಿಕೆಯು ತಾತ್ಕಾಲಿಕವಾದರೂ ಇದು ಕೇವಲ ಅಳಿದುಳಿದಿರುವ ಅಧಿಕಾರ ದಾಹ ಹಂಚಿಕೊಳ್ಳಲು ಮಾತ್ರ ಇರುವಂತದ್ದಾಗಿದೆ.

ಮಹಾಧಿವೇಶನ ಅಂಗೀಕರಿಸಿದ ರಾಜಕೀಯ ನಿರ್ಣಯವು ರಾಷ್ಟ್ರೀಯ ಮಟ್ಟದಲ್ಲಿ ಬಿಜೆಪಿ ಮತ್ತು ಕಾಂಗ್ರೆಸ್‌ಗೆ ಪರ್ಯಾಯವಾದ ಮೂರನೇ ಶಕ್ತಿಯ ಮಹತ್ವ ಮತ್ತು ಅನಿವಾರ್ಯತೆ ಕುರಿತು ಪುನಃ ಒತ್ತಿ ಹೇಳಿದೆ. ಇದರ ಭಾಗವಾಗಿಯೇ ಎಡಪಕ್ಷಗಳ ದೃಢತೆ ಮತ್ತು ಕೆಲವು ಜಾತ್ಯಾತೀತ ವಿರೋಧ ಪಕ್ಷಗಳನ್ನೊಳಗೊಂಡು 'ಪೀಪಲ್ಸ್ ಫ್ರಂಟ್' ಜನತಾರಂಗ ರಚನೆಯಾದುದು.

ರಾಜಕೀಯ ಸಂಘಟನಾ ವರದಿ

ರಾಜಕೀಯ ಸಂಘಟನಾ ವರದಿಯು ರಾಜ

ಅನುಭವವನ್ನು ವಿಮರ್ಶೆಗೆ ಒಳಪಡಿಸಿತು. ಸಂಯುಕ್ತ ರಂಗ ಕುರಿತು ಅನುಸರಿಸಿದ ತಂತ್ರಗಳು ಹಲವಾರು ಕಾರಣಗಳಿಂದಾಗಿ ಪಕ್ಷದ ಸ್ವತಂತ್ರ ಬೆಳವಣಿಗೆಗೆ ಸಹಾಯಕವಾಗಲಿಲ್ಲ. ಆ ನಂತರದಲ್ಲಿ ಸಂಯುಕ್ತ ರಂಗದ ತಂತ್ರಗಳು ಕೇವಲ ಮುಖ್ಯವಾಗಿ ಚುನಾವಣೆ ಹೊಂದಾಣಿಕೆಗಳಿಗೆ ಮಾತ್ರ ಸೀಮಿತಗೊಂಡಿತು.

ಪಕ್ಷದ ಬೆಳವಣಿಗೆ, ಸಂಘಟನೆ ಮತ್ತು ವಿಸ್ತರಣೆಗಳಿಗೆ ಪಕ್ಷವು ತಳಹದಿಯನ್ನು ಒದಗಿಸಲು ವೈವಿಧ್ಯ ರೀತಿಯ ಚಟುವಟಿಕೆಗಳು, ಹಾಗೂ ಎಡ-ಪ್ರಜಾಪ್ರಭುತ್ವ ಶಕ್ತಿಗಳನ್ನು ಒಂದುಗೂಡಿಸಿ ಜಂಟಿಯಾಗಿ 9 ಬೇಡಿಕೆಗಳ ಪಟ್ಟಿಯನ್ನು ಮುಂದಿಡಲಾಯಿತು. ದೇಶದ ಐಕ್ಯತೆ, ಜಾತ್ಯಾತೀತ ರಕ್ಷಣೆ, ಒಕ್ಕೂಟವಾದ, ಪ್ರಜಾಪ್ರಭುತ್ವ ಸಂರಚನೆ, ಆರ್ಥಿಕ ನೀತಿ, ದುಡಿಯುವ ಜನತೆಯ ಹಕ್ಕುಗಳು, ಜನತೆಯ ಕಲ್ಯಾಣ, ಅಭಿವೃದ್ಧಿ, ಸಾಮಾಜಿಕ

ರೋಮ್‌ನಲ್ಲಿ ಇಪ್ಪತ್ತು ಲಕ್ಷ ಕಾರ್ಮಿಕರ ಅಭೂತಪೂರ್ವ ರ್‍ಯಾಲಿ

'ಹೈರ್ ಅಂಡ್ ಫೈರ್' ಬೇಡ ಎಂದು ಘರ್ಜಿಸಿದ ಇಟಾಲಿಯನ್ ಕಾರ್ಮಿಕರು

ಶರತ್‌ಚಂದ್ರ

'ಹೈರ್ ಅಂಡ್ ಫೈರ್' ಇದು ಎಲ್ಲಾ ದೇಶಗಳಲ್ಲಿ ಮಾಲಿಕರ ಕನಸು. ಬೇಕೆಂದಾಗ ಕಾರ್ಮಿಕರಿಗೆ ಕೆಲಸ ಕೊಡುವುದು (ಹೈರ್) ಬೇಡವೆಂದಾಗ ಮನೆಗೆ ಕಳಿಸುವುದು (ಫೈರ್) ಆದರೆ ಹೆಚ್ಚಿನ ದೇಶಗಳಲ್ಲಿ ಇದು ಸುಲಭವಲ್ಲ. ಹಲವು ದಶಕಗಳ ಕಾರ್ಮಿಕರ ಸತತ ಹೋರಾಟದ ಫಲವಾಗಿ ಬಂದಿರುವ ಕಾನೂನುಗಳಿಂದಾಗಿ ಅದೂ ಯುರೋಪಿನಲ್ಲಿ ಅತ್ಯಂತ ಬಲಿಷ್ಠ ಕಾರ್ಮಿಕ ಮತ್ತು ಎಡ ಚಳುವಳಿ ಪ್ರಬಲವಾಗಿರುವ ಇಟಲಿಯಲ್ಲಿ ಇದು ಖಂಡಿತ ಕಷ್ಟ. ಆದರೆ ಇದನ್ನು ಮಾಡಲು ಹೊರಟಿದ್ದಾನೆ ಇಟಲಿಯ ಟಿವಿ ದೊರೆ ಮತ್ತು ಪ್ರಧಾನಿ ಸಿಲ್ವಿಯೊ ಬೆಲುಕಸ್ಕೋನಿ. ಇದಕ್ಕೆ ಕಾರ್ಮಿಕರು ತಕ್ಕ ಉತ್ತರ ನೀಡಿದ್ದಾರೆ. ಇತ್ತೀಚಿನ ಚರಿತ್ರೆಯಲ್ಲೇ ಯುರೋಪಿನಲ್ಲಿ ಅತ್ಯಂತ ದೊಡ್ಡ ಬೃಹತ್ ಎನ್ನಲಾದ ರ್‍ಯಾಲಿ ನಡೆಸಿ ಪ್ರತಿಭಟಿಸಿದ್ದಾರೆ. ಇಪ್ಪತ್ತು ಲಕ್ಷ ಕಾರ್ಮಿಕರು ರೋಮನ್ ರಸ್ತೆಗಳನ್ನು ತುಂಬಿದ್ದರು. ಈ ಎಚ್ಚರಿಕೆಯಲ್ಲದೆ ಏಪ್ರಿಲ್ 16 ರಂದು ಮಹಾನ್ ಕಾರ್ಯಚರಣೆಗೆ ನಿರ್ಧರಿಸಿದ್ದಾರೆ. ಇಪ್ಪತ್ತು ವರ್ಷಗಳಲ್ಲಿ ಮೊದಲ ಬಾರಿಗೆ ಎಂಟು ಗಂಟೆಯ ಸಾರ್ವತ್ರಿಕ ಮುಷ್ಕರಕ್ಕೆ ಕರೆ ನೀಡಲಾಗಿದೆ. ಮೂರು ಕೇಂದ್ರೀಯ ಟ್ರೇಡ್ ಯೂನಿಯನ್‌ಗಳು ಕರೆ ನೀಡಿದ್ದು, ಒಂದು ಕೋಟಿ ಕಾರ್ಮಿಕರು ಇದರಲ್ಲಿ ಭಾಗವಹಿಸಲಿದ್ದಾರೆ. 'ಹೈರ್ ಅಂಡ್ ಫೈರ್' ಅನ್ನುವವರನ್ನು 'ಫೈರ್' ನಲ್ಲಿ ಹಾಕಿದ್ದಾರೆ ಇಟಲಿಯ ಕಾರ್ಮಿಕರು.

'ಬೆಲುಕಸ್ಕೋನಿ ತನ್ನ ಸಂಪತ್ತು ಮತ್ತು ಆತನ ವರ್ಗದ ಶ್ರೀಮಂತರನ್ನು ಕಾಪಾಡಲು ಹೊರಟಿದ್ದಾನೆ. ಆತ ಕೋಟ್ಯಾಂತರ ಕಾರ್ಮಿಕರನ್ನು ಲೆಕ್ಕಿಸುವುದಿಲ್ಲ. ಅದು ಇಟಲಿಯಲ್ಲಿ ನಡೆಯುವುದಿಲ್ಲ ಎಂದು ಆತನಿಗೆ ಗೊತ್ತಿಲ್ಲ' ಇದು ಇಪ್ಪತ್ತು ಲಕ್ಷ ಕಾರ್ಮಿಕರ ಅಭೂತಪೂರ್ವ ರ್‍ಯಾಲಿಗೆ ಬಂದ ಕಾರ್ಮಿಕನೊಬ್ಬನ ಉದ್ಗಾರ. ಕಳೆದ ಬಾರಿ ಆತನ ವಿರುದ್ಧ ನಾವು ಎದ್ದು ನಿಂತಾಗ ಕೆಲವೇ ದಿನಗಳಲ್ಲಿ ಆತನ ಸರ್ಕಾರ ಉರುಳಿ ಬಿದ್ದಿತ್ತು. ಆತನಿಗೆ ಇದು ಮರೆತು ಹೋದಂತಿದೆ' ಇದು ಇನ್ನೊಂದು ಕಾರ್ಮಿಕನ ಉದ್ಗಾರ. 1994ರಲ್ಲಿ ಬೆಲುಕಸ್ಕೋನಿ ಪ್ರಧಾನಿಯಾಗಿದ್ದಾಗ ಪೆನ್‌ಶನ್ ಕಾನೂನಿನಲ್ಲಿ ಬದಲಾವಣೆ ಮಾಡಲು ಪ್ರಯತ್ನಿಸಿದಾಗ ಹತ್ತು ಲಕ್ಷ ಕಾರ್ಮಿಕರ ರ್‍ಯಾಲಿ ನಡೆದದ್ದರ ಬಗ್ಗೆ ಎರಡನೇ ಕಾರ್ಮಿಕನ ಉದ್ಗಾರ.

ಈ ಬಾರಿ ಕಾರ್ಮಿಕರು ಎದ್ದು ನಿಂತಿರುವುದು, ಪ್ರಧಾನಿ ಕಾರ್ಮಿಕರ ಉದ್ಯೋಗ ಭದ್ರತೆ ಕಾನೂನುಗಳಲ್ಲಿ ಬದಲಾವಣೆ ಮಾಡಲು ಹೊರಟಿರುವುದರ ವಿರುದ್ಧ. ಸರ್ಕಾರ ತರಲು ಹೊರಟಿರುವ ಕಾರ್ಮಿಕ ಕಾನೂನಿನಲ್ಲಿ ಬದಲಾವಣೆಗಳು, ಕಾರ್ಮಿಕನನ್ನು ಕೆಲಸದಿಂದ ತೆಗೆಯುವುದರ ಬಗ್ಗೆ ಇರುವ ನಿರ್ಬಂಧಗಳನ್ನು ಸಡಿಲಿಸಿ ಸುಲಭ ಮಾಡಿಕೊಡುತ್ತದೆ. ಇದರ ಬಗ್ಗೆ ಇಟಲಿಯ ಕಾರ್ಮಿಕರು ರೊಚ್ಚಿಗೆದ್ದಿದ್ದಾರೆ. ರ್‍ಯಾಲಿ ರೋಮ್‌ನ ಕೇಂದ್ರ ಪ್ರದೇಶದಲ್ಲಿರುವ 'ಸರ್ಕಸ್ ಮ್ಯಾಕ್ಸಿಮಸ್' ಎಂದು ಕರೆಯಲಾಗುವ ವಿಶಾಲ ಸ್ಟೇಡಿಯಂನಲ್ಲಿ ನಡೆಯಿತು. ಇದು ಪ್ರಾಚೀನ ರೋಮ್‌ನಲ್ಲಿ ರಥಗಳ ಓಟದ ಸ್ಪರ್ಧೆ ನಡೆಯುತ್ತಿದ್ದ ಜಾಗವಂತೆ. ಇಟಲಿಯ 'ಆಧುನಿಕ ರಾಜನನ್ನು ಸೋಲಿಸಲು ಇದಕ್ಕಿಂತ ಉತ್ತಮ ಜಾಗ ಯಾವುದು ಎಂದು ಮಗದೊಬ್ಬ ಕಾರ್ಮಿಕನ ಉದ್ಗಾರ.

ಕೆಂಬಣ್ಣ ತಳೆದ ರೋಮ್

ಇಟಲಿಯ ಪ್ರಧಾನಿ ಬೆಲ್ಲುಸ್ಕೋವಿ ಇಟಲಿಯ ಅತ್ಯಂತ ದೊಡ್ಡ ಟಿ.ವಿ ಜಾಲ ಮತ್ತು ಮಾಧ್ಯಮ ಕಂಪನಿಗಳ ಮೂಲಕ ಮತ್ತು ಇಟಲಿಯ ಅತ್ಯಂತ ಶ್ರೀಮಂತರಲ್ಲಿ ಒಬ್ಬನಾಗಿರುವುದು ಈ ಪ್ರತಿಭಟನೆಗೆ ಇನ್ನಷ್ಟು ಕಾವು ಏರಿಸಿತ್ತು. ಇಟಲಿಯ ನಿರುದ್ಯೋಗ ಪ್ರಮಾಣ ಶೇಕಡಾ 9 ಕ್ಕೇರಿದ್ದು, ದೇಶದ ದಕ್ಷಿಣ ಭಾಗದಲ್ಲಿ ಐವರಲ್ಲಿ ಒಬ್ಬ (ಅಂದರೆ ಶೇಕಡಾ 20) ಉದ್ಯೋಗ ಹುಡುಕುತ್ತಿದ್ದಾನೆ. ಇದರಿಂದಾಗಿ ಸರ್ಕಾರದ ಈ ಕಾರ್ಮಿಕ ಕಾನೂನು ಬದಲಾವಣೆ ಮಾಡುವ ಪ್ರಯತ್ನಕ್ಕೆ ತೀಕ್ಷ್ಣ ವಿರೋಧ ಬರುವಂತೆ ಮಾಡಿದೆ. ದೇಶದ ಅತಿ ದೊಡ್ಡ ಕೇಂದ್ರೀಯ ಟ್ರೇಡ್‌ಯೂನಿಯನ್ ಸಿಜಿಐ ಕೊಟ್ಟ ಕರೆಯ ಮೇರೆಗೆ ಇಪ್ಪತ್ತು ಲಕ್ಷ ಕಾರ್ಮಿಕರು ರೋಮ್ ನಗರದ ರಸ್ತೆಗಳನ್ನು ತುಂಬಿದರು. ಅವರು ಇಟಲಿಯ ನಾನಾ ಭಾಗಗಳಿಂದು 9ಸಾವಿರ ಬಸ್‌ಗಳು, 60 ರೈಲುಗಳು, ಮೂರು ಹಡಗು ಮತ್ತು ಎರಡು ವಿಮಾನಗಳ ಮೂಲಕ ಹರಿದು ಬಂದಿದ್ದರು. ರ್‍ಯಾಲಿಯ ಮೊದಲು ನಡೆದ ಮೆರವಣಿಗೆ ರೋಮ್‌ನ ಬೀದಿಗಳನ್ನೆ ಕೆಂಪು ಬ್ಯಾನರ್, ಧ್ವಜಗಳ ಬಣ್ಣ ಬಳಿದಿತ್ತು, ರ್‍ಯಾಲಿಯ ಸಮಯದಲ್ಲಿ 'ಸರ್ಕಸ್ ಮ್ಯಾಕ್ಸಿಮಸ್' ಕೆಂಪು ಬಣ್ಣ ತಳೆದಿತ್ತು. ರ್‍ಯಾಲಿಯಲ್ಲಿ ಮಾತನಾಡಿದ ನಾಯಕರು ಸರ್ಕಾರ ಕಾರ್ಮಿಕ ಕಾನೂನಿನಲ್ಲಿ ಬದಲಾವಣೆಗಳನ್ನು ಹಿಂತೆಗೆದುಕೊಳ್ಳುವಂತೆ ಒತ್ತಾಯಿಸಿದ್ದಾರೆ. ಇದು ಸರ್ಕಾರದ ಕಾರ್ಮಿಕ ಕಾನೂನಿನ ತಿದ್ದುಪಡಿ ಹಾಗೂ ಇತರ ಜನವಿರೋಧಿ ಕ್ರಮಗಳ ವಿರುದ್ಧ ಎಚ್ಚರಿಗೆ ಗಂಟೆ ಅದನ್ನು ನಿರ್ಲಕ್ಷಿಸಿದರೆ ಮುಂದಿನ ಕ್ರಮಗಳನ್ನು ಕೈಗೊಳ್ಳಲಾಗುವುದು ಎಂದು ಕಾರ್ಮಿಕ ನಾಯಕರು ಎಚ್ಚರಿಸಿದರು. ಈ ರ್‍ಯಾಲಿಗೆ ಹಲವು ವಾರಗಳ ಹಿಂದೆಯೇ ಕರೆ ನೀಡಲಾಗಿತ್ತು.

ರ್‍ಯಾಲಿ ನಿಲ್ಲಿಸಲು ಭಯೋತ್ಪಾದಕ ಕೃತ್ಯ

ಆದರೆ ಕಾಕತಾಳಿಯವೆಂಬಂತೆ ರ್‍ಯಾಲಿಯ ನಾಲ್ಕು ದಿನಗಳಿಗಿಂತ ಮೊದಲು ಸರ್ಕಾರಕ್ಕೆ ಈ ಕಾನೂನು ತಿದ್ದುಪಡಿ ಬಗ್ಗೆ ಸಲಹೆ ಮಾಡಿದ ಸಲಹೆಗಾರ ಬಯಾಗಿಯನ್ನು ಬೊಲೋಗ್ನಾ ಎಂಬಲ್ಲಿ ಗುಂಡಿಟ್ಟು ಕೊಲ್ಲಲಾಯಿತು. ಇಟಲಿಯ ಸರ್ಕಾರದ ಒಬ್ಬ ಮಂತ್ರಿ 'ಕೊಲೆಗಾರರು ಕಾರ್ಮಿಕರ ಮಕ್ಕಳು' ಎಂದು ಉದ್ಗರಿಸಿ ಕಾರ್ಮಿಕರನ್ನು ಇನ್ನಷ್ಟು ರೊಚ್ಚಿಗೆಬ್ಬಿಸಿದ. ಈ ರೀತಿ ಹೇಳಿದ ಮಂತ್ರಿ ಅರೆ ಫ್ಯಾಸಿಸ್ಟ್ ಪ್ರತ್ಯೇಕವಾದಿ ಪಕ್ಷ 'ಉತ್ತರದ ಲೀಗ್' ಗೆ ಸೇರಿದವ. ಈ ಮಂತ್ರಿಯ ಬೇಜವಾಬ್ದಾರಿಯ ಹೇಳಿಕೆಗೆ ವ್ಯಕ್ತವಾದ ಪ್ರತಿಭಟನೆಗೆ ಹೆದರಿದ ಪ್ರಧಾನಿ, ಆ ಮಂತ್ರಿಗೆ ಸಾರ್ವಜನಿಕವಾಗಿ ಛೀಮಾರಿ ಹಾಕಬೇಕಾಯಿತು. ರ್‍ಯಾಲಿಯಲ್ಲಿ ಈ ಭಯೋತ್ಪಾದಕ ಕೃತ್ಯವನ್ನು ಮತ್ತು ಭಯೋತ್ಪಾದಕತೆಯ ರಾಜಕೀಯವನ್ನು ತೀವ್ರವಾಗಿ ಖಂಡಿಸಲಾಯಿತು. ಈ ಕೊಲೆಯ ಮೊದಲು ಪ್ರತಿಭಟನಾ ರ್‍ಯಾಲಿಯಲ್ಲಿ ಇಡೀ ದಿನದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನೆಲ್ಲಾ ಹಮ್ಮಿಕೊಳ್ಳಲಾಯಿತು. ಆದರೆ ಈ ಭಯೋತ್ಪಾದಕ ಕೃತ್ಯದ ವಿರುದ್ಧ ಹಾಗೂ ಮೃತನಿಗೆ ಗೌರವ ಸಲ್ಲಿಸಲು ಅವುಗಳನ್ನು ರದ್ದುಮಾಡಲಾಯಿತು. ಸರ್ಕಾರ ಈ ಭಯೋತ್ಪಾದಕ ಕೃತ್ಯದ ಆಪಾದನೆಯನ್ನು 'ರೆಡ್ ಬ್ರಿಗೇಡ್' ಎಂಬ ಎಡದುಸ್ಸಾಹಸ ವಾದಿಗಳ ಗುಂಪಿನ ಮೇಲೆ ಹೊರಿಸಿದೆ. ಆದರೆ ಈ ಭಯೋತ್ಪಾದಕ ಕೃತ್ಯ ಇಟಾಲಿಯನ್ ಕಾರ್ಮಿಕರ ಅಭೂತಪೂರ್ವ ರ್‍ಯಾಲಿ ನಿಲ್ಲಿಸಲು 'ಸರ್ಕಾರದ ಆಶೀರ್ವಾದ' ದೊಂದಿಗೆ ನಡೆದ ಕೃತ್ಯ ಎಂದು ವ್ಯಾಪಕವಾಗಿ ನಂಬಲಾಗಿದೆ. ಕಾರ್ಮಿಕ ನಾಯಕರು ರ್‍ಯಾಲಿಯಲ್ಲೂ ಈ ಭಯೋತ್ಪಾದಕ ಕೃತ್ಯವನ್ನು ಖಂಡಿಸಿದ್ದಾರೆ. ಸರ್ಕಾರದ ಜನವಿರೋಧಿ ನೀತಿಗಳು ಹಾಗೂ ಭಯೋತ್ಪಾದಕತೆಯ ರಾಜಕೀಯ ಎರಡರ ವಿರುದ್ಧ ಕಾರ್ಮಿಕರು ಹೋರಾಡುವುದಾಗಿ ಕಾರ್ಮಿಕ ನಾಯಕರು ಸರ್ಕಾರವನ್ನು ಎಚ್ಚರಿಸಿದ್ದಾರೆ. ಕಾರ್ಮಿಕರ ಮಹಾನ್ ಚಳುವಳಿ ಈ ಭಯೋತ್ಪಾದನೆಗೆ ಸೊಪ್ಪು ಹಾಕದೆ ಮುನ್ನಡೆದಿದೆ.

ಏಪ್ರಿಲ್ 16 ರಂದು ಇನ್ನಿತರ ಕೇಂದ್ರೀಯ ಯೂನಿಯನ್‌ಗಳೊಂದಿಗೆ ಸಿಜಿಐಎಲ್ 'ಸಾರ್ವತ್ರಿಕ ಮುಷ್ಕರ' ಕ್ಕೆ ಕರೆ ನೀಡಿದೆ. ಒಂದು ಕೋಟಿಗೂ ಹೆಚ್ಚು ಕೈಗಾರಿಕೆ, ಸಾಗಾಣಿಕೆ, ಆರೋಗ್ಯ, ಸೇವೆಗಳೂ ಸೇರಿದಂತೆ ಹೆಚ್ಚಿನ ಕ್ಷೇತ್ರಗಳ ಕಾರ್ಮಿಕರು ಈ ಸಾರ್ವತ್ರಿಕ ಮುಷ್ಕರದಲ್ಲಿ ಭಾಗವಹಿಸಿ ಇಟಲಿಯನ್ನು ಆ ದಿನ 'ಬಂದ್' ಮಾಡಲಿದ್ದಾರೆ. ಈ ವರೆಗೆ ಸರ್ಕಾರ ಕಾರ್ಮಿಕರ ಎಚ್ಚರಿಗೆ ನಿರ್ಲಕ್ಷಿಸುವ ಧೋರಣೆ ತಳೆದಿದೆ. ಕಾರ್ಮಿಕ ಕಾನೂನು ತಿದ್ದುಪಡಿಯ ಕಾರ್ಯಾಚರಣೆ ಮುಂದುವರಿಸುವುದಾಗಿ ಪ್ರಧಾನಿ ಉದ್ಧಟತನ ಮಾತಾಡಿದ್ದಾನೆ.



'ಹೈರ್ ಅಂಡ್ ಫೈರ್' ತರಲು ಹೊರಟ ಪ್ರಧಾನಿ ಮತ್ತು ಬಳಗದವರನ್ನು 'ಫೈರ್' ನಲ್ಲಿ ಬೇಯಿಸಲು ಸಿದ್ದರಾಗಿದ್ದಾರೆ ಇಟಲಿಯ ಕಾರ್ಮಿಕರು.

ಆದರೆ ಪ್ರಧಾನಿಯ ಆಟ ನಡೆಯುವಂತೆ ಕಾಣುವುದಿಲ್ಲ. ಇಟಲಿ ಫ್ಯಾಸಿಸಂ ಸರ್ಕಾರದತ್ತ ನಡೆದಿದೆ ಎಂಬುದನ್ನು ನಿರಾಕರಿಸುವುದು ಈಗ ಪ್ರಧಾನಿಯ ದೈನಂದಿನ ಕೆಲಸಗಳಲ್ಲಿ ಒಂದಾಗಿಬಿಟ್ಟಿದೆ. ಯೂರೋಪಿನಲ್ಲೆ ಅತ್ಯಂತ ದೊಡ್ಡ ಪ್ರಬಲ ಕಾರ್ಮಿಕ ಚಳುವಳಿ ಹೊಂದಿರುವ ಇಟಲಿಯಲ್ಲಿ ಬೆಲ್ಯೂಸ್ಕೋವಿಯಾ ಆಟ ನಡೆಯಲಿಕ್ಕಿಲ್ಲ **'ಹೈರ್ ಅಂಡ್ ಫೈರ್' ತರಲು ಹೊರಟ ಪ್ರಧಾನಿ ಮತ್ತು ಬಳಗದವರನ್ನು 'ಫೈರ್' ನಲ್ಲಿ ಬೇಯಿಸಲು ಸಿದ್ದರಾಗಿದ್ದಾರೆ ಇಟಲಿಯ ಕಾರ್ಮಿಕರು.**

ಜಾಗತಿಕ ಬಂಡವಾಳ ಶಾಹಿಯ ಕಾರ್ಮಿಕ ವಿರೋಧಿ ಆಕ್ರಮಣದ ವಿರುದ್ಧ ಇಟಲಿಯ ಕಾರ್ಮಿಕರ ಈ ತೀವ್ರ ಪ್ರತಿರೋಧ ಇತ್ತೀಚಿನ ಕಾರ್ಮಿಕರ ಚಳುವಳಿಯ ಮೈಲುಗಲ್ಲುಗಳಲ್ಲಿ ಒಂದು.

.............ಬೃಹತ್ ರ್‍ಯಾಲಿ

ಪುಟ 7 ರಿಂದ

ನೆರೆಸಲು ರಾಜ್ಯಾಂದ್ಯಂತ ಪ್ರಚಾರ ಜಾಥಾಗಳನ್ನು ಸಂಘಟಿಸಲಾಗಿತ್ತು. ಶ್ರೀ ಕಾಕುಳಂ, ವಿರುಪಲ್ಲಿ, ಚಿತ್ತೂರು, ನೆಲ್ಲೂರು, ವಾರಂಗಲ್ ಜಿಲ್ಲೆಗಳಿಂದ ಮಾರ್ಚ್ 10 ರಂದು ಹೊರಟ 5 ವಾಹನ ಜಾಥಾಗಳು 15 ದಿನಗಳಲ್ಲಿ ವಿವಿಧ ಜಿಲ್ಲೆಗಳನ್ನು ಸಂಚರಿಸಿ 24 ರಂದು ಬಹಿರಂಗಸಭೆಯ ದಿನ ಹೈದರಾಬಾದನ್ನು ಪ್ರವೇಶಿಸಿದವು. "ಪ್ರಜಾಗರ್ಜನ" ಹೆಸರಿನಲ್ಲಿ ಹೊರಟ ಈ ಪ್ರಮುಖ ಜಾಥಾಗಳಿಗೆ ಜಿಲ್ಲೆಗಳೊಳಗೆ ಉಪಜಾಥಾಗಳನ್ನು ಸಂಘಟಿಸಲಾಗಿತ್ತು. ಪ್ರತಿಯೊಂದು ಜಾಥಾದಲ್ಲಿ ರಾಜ್ಯ ಸಮಿತಿಯ ಒಬ್ಬ ಮುಖಂಡರು, ಆಯಾ ಜಿಲ್ಲಾ ಮುಖಂಡರು, ಹಾಡುಗಾರರು, ನಾಟಕ ಕಲಾವಿದರು, ಮುಂತಾದವರು ಇರುತ್ತಿದ್ದರು. ಇವರೆಲ್ಲರಿಗೂ ವಿಶೇಷ ತರಬೇತಿಯನ್ನು ನೀಡಲಾಗಿತ್ತು. ಹಾಗೆಯೇ ಭಾಷಣಕಾರರಿಗೂ ತರಬೇತಿಯನ್ನು ನೀಡಲಾಗಿತ್ತು. ಸಭೆಗಳಲ್ಲಿ ಮುಖ್ಯವಾಗಿ ಮಹಾಧಿವೇಶನದಲ್ಲಿ ಚರ್ಚಿಸುವ ವಿಷಯಗಳು ಕೇಂದ್ರ, ರಾಜ್ಯ ಸರ್ಕಾರಗಳ ನೀತಿಗಳು, ಪೀಪಲ್ಸ್ ಫ್ರಂಟ್‌ನ ಬಗ್ಗೆ ವಿದ್ಯುತ್ ದರ ಏರಿಕೆ, ಕೃಷಿ ಸಮಸ್ಯೆಗಳು, ಬಹಿರಂಗ ಸಭೆ ಇವುಗಳ ಬಗ್ಗೆ ಮಾತನಾಡುತ್ತಿದ್ದರು.


ವಿಶ್ವಬ್ಯಾಂಕ್ ಸಾಲದ ಪರಿಣಾಮಗಳ ಬಗ್ಗೆ ಜನ ಮೊದಲ ಪ್ರತಿಕ್ರಿಯಿಸುತ್ತಿದ್ದ ರೀತಿಗೂ ಈಗಿನ ರೀತಿಗೂ ಸಾಕಷ್ಟು ವ್ಯತ್ಯಾಸವನ್ನು ಎಲ್ಲಾ ಜಾಥಾಗಳು ಗಮನಿಸಿವೆ. ಜನರ ಪ್ರಶ್ನೆಗಳ ಬಗ್ಗೆ ಸರಿಯಾದ ಅಂದಾಜನ್ನು ಮಾಡುವವರು ಸಿಪಿಐ(ಎಂ)ನವರು ಎಂಬ ಅಭಿಪ್ರಾಯ ಮೂಡಿರುವುದನ್ನು ಜಾಥಾಗಳು ಗುರುತಿಸಿವೆ.

ಜಾನಪದ ಉತ್ಸವ ಮತ್ತು ಪ್ರದರ್ಶನ

ಮಾರ್ಚ್ 16 ರಿಂದ 23ರವರೆಗೆ ನಗರದ ಅಂಬೇಡ್ಕರ್ ಕಾಲೇಜ್ ಮೈದಾನದಲ್ಲಿ ಪುಸ್ತಕ ಮತ್ತು ಭಿತ್ತಿ ಚಿತ್ರಗಳ ಪ್ರದರ್ಶನವನ್ನು ಹಾಗೂ ಪ್ರತಿದಿನ ಸಂಜೆ ರಾಜ್ಯದ ಜಾನಪದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು. ವೀರ ತೆಲಂಗಾಣ ಹೋರಾಟದ ಯಶೋಗಾಥೆಯನ್ನು ವಿವರಿಸುವ ಭಿತ್ತಿಚಿತ್ರಗಳು, ಜಾಗತೀಕರಣ, ಖಾಸಗೀಕರಣದ ಅಂಶಗಳಾಗಿದ್ದವು. ಪ್ರತಿ ಸಂಜೆಯ ಸಾಂಸ್ಕೃತಿಕ ಕಾರ್ಯಕ್ರಮಗಳ ಪ್ರಾರಂಭದ ಹೆಸರಾಂತ ಸಿನಿಮಾ ಮತ್ತು ರಂಗ ಕಲಾವಿದರನ್ನು ಆಹ್ವಾನಿಸಲಾಗಿತ್ತು. ಪ್ರಜಾನಾಟ್ಯಮಂಡಳಿಯ ವಿವಿಧ ಜಿಲ್ಲಾ ತಂಡಗಳು ಹಲವಾರು ಬೀದಿ ನಾಟಕಗಳನ್ನು ಪ್ರದರ್ಶಿಸಿದವು. ನಲಗೊಂಡ ಜಿಲ್ಲಾ ಪ್ರಜಾನಾಟ್ಯಮಂಡಳಿ ಪ್ರದರ್ಶಿಸಿದ "ವೀರತೆಲಂಗಾಣ" ನಾಟಕ ಅತ್ಯದ್ಭುತ ಪರಿಣಾಮವನ್ನು ಬಿರಿತು.

ಒಂದು ಸಂಯೋಜಿತ, ಸಂಘಟಿತ ರಾಜಕೀಯ ಸಂಘಟನಾ ಚಟುವಟಿಕೆಗಳ ಯಶಸ್ವಿ ಕಥನವಾಗಿ ಹೈದರಾಬಾದಿನ ಬಹಿರಂಗ ಸಭೆ, ಜಾಥಾಗಳು ಅಲ್ಲಿನ ಪಕ್ಷದ ಅಭಿವೃದ್ಧಿಗೆ ಖಂಡಿತವಾಗಿ ಉತ್ಸಾಹ ಮತ್ತು ಪ್ರೇರಣೆಯನ್ನು ನೀಡಿವೆಯೆಂದು

ಗುಜರಾತ್ ಹಿಂಸೆ ತೆರೆದಿಡಲಿರುವ ಪ್ರತ್ಯಕ್ಷ ಚಿತ್ರೀಕರಣಗಳು



ಅಂಗಡಿಗಳಲ್ಲಿ ಅಡಗಿಸಿಟ್ಟಿದ್ದ ನಿಗಾ ಕ್ಯಾಮರಾ ಗಳು, ಖಾಸಗಿ ವ್ಯಕ್ತಿಗಳು ಹಾಗೂ ಹವ್ಯಾಸಿ ಛಾಯಾಗ್ರಾಹಕರ ವೀಡಿಯೋ ಚಿತ್ರಣದ ತುಣುಕುಗಳು ಗುಜರಾತ್ ಹಿಂಸಾಚಾರದ ಘೋರ ಚಿತ್ರಣವನ್ನು ತೆರೆದಿಡಲಿವೆ. ಇವು ತನಿಖೆಯಲ್ಲಿ ಪ್ರಮುಖ ಸಾಕ್ಷ್ಯಾಧಾರಗಳಾಗಲಿವೆ.

ಸ್ವಯಂ ಸೇವಾ ಸಂಸ್ಥೆಯೊಂದು ವಿವಿಧ ಮೂಲಗಳಿಂದ 22 ಗಂಟೆಗಳ ವಿಡಿಯೋ ಚಿತ್ರಣವನ್ನು ಸಂಗ್ರಹಿಸಿದ್ದು, ಅದರಲ್ಲಿ ಸುಮಾರು 30 ಮಂದಿ ಪ್ರತ್ಯಕ್ಷ ಸಾಕ್ಷಿ ಮತ್ತು ಗಲಭೆಗೆ ಬಲಿಯಾದವರ ಸಂದರ್ಶನ ದಾಖಲಿಸಲಾಗಿದೆ.

ಹಿಂಸಾಚಾರದ ಕನಿಷ್ಠ ಮೂರು ಚಿತ್ರಣವನ್ನು ಪ್ರತ್ಯಕ್ಷ ಸಾಕ್ಷಿಗಳಿಂದ ಸಂಗ್ರಹಿಸಿದ್ದು ಮೊಕದ್ದಮೆಯಲ್ಲಿ ಪ್ರಮುಖ ಸಾಕ್ಷಿಯಾಗಲಿದೆ ಎಂದು ಸ್ವಯಂ ಸೇವಾ ಸಂಸ್ಥೆಯ ಅಶಿಂರಾಯ್ ಹೇಳುತ್ತಾರೆ.

ಪ್ರಾಣದ ಹಂಗು ತೋರೆದು ಕೆಲವರು ಹಿಂಸಾಚಾರಗಳನ್ನು ಚಿತ್ರೀಕರಿಸುವ ಯತ್ನ ಮಾಡಿದ್ದಾರೆ. ಡಿಜಿಟಲ್ ಕ್ಯಾಮರಾಗಳು ಗಲಭೆ ಚಿತ್ರೀಕರಣ ಪ್ರಕ್ರಿಯೆಯಲ್ಲಿ ಕ್ರಾಂತಿಯನ್ನು ಉಂಟು ಮಾಡಿವೆ. ಚಿಕ್ಕ ಹಾಗೂ ಸರಳ ಉಪಯೋಗದ ಆವುಗಳಿಂದ ಯಾರಿಗೂ ತಿಳಿಯದಂತೆ ಚಿತ್ರೀಕರಿಸಲು ಸಾಧ್ಯ. ಖರ್ಚು ಕಡಿಮೆಯಾಗಿದ್ದು ಸಂಕಲನ ಮತ್ತು ಪ್ರದರ್ಶನ ಸುಲಭ ಎಂದು 1997ರ ಕೊಯಮತ್ತೂರು ಗಲಭೆ ಮತ್ತು ಗುಜರಾತ್ ಹಿಂಸಾಚಾರವನ್ನು ಚಿತ್ರೀಕರಿಸಿರುವ ಕೆ. ಮೆನನ್ ಹೇಳುತ್ತಾರೆ.

ಹಿಂಸಾಚಾರಗಳನ್ನು ಪ್ರತ್ಯಕ್ಷವಾಗಿ ಚಿತ್ರೀಕರಿಸುವ ಪ್ರಯತ್ನವನ್ನು ಹಲವಾರು ಮಂದಿ ಮಾಡಿದ್ದಾರೆ. ಆದರೆ ಗುಜರಾತ್‌ನ ಹಿಂಸಾಚಾರದ ಬಗೆಗಿನ ಖಾಸಗಿ ಚಿತ್ರೀಕರಣವೊಂದು ನಿಜವಾಗಿಯೂ ಎಂಥವರನ್ನೂ ನಡುಗಿಸುತ್ತದೆ ಎಂದು ಚಿತ್ರನಿರ್ಮಾಪಕ ಎಂ.ಜೆ.ವಿಜಯನ್ ಹೇಳುತ್ತಾರೆ.

ಗಲಭೆ ಚಿತ್ರೀಕರಣದ ಸಾಕ್ಷ್ಯಚಿತ್ರ ನಿರ್ಮಾಣ ಸುಲಭವಲ್ಲ. ಕೊಯಮತ್ತೂರು ಗಲಭೆಯ ಚಿತ್ರಣದಿಂದ ನನಗೇನೂ ಲಾಭವಾಗಿಲ್ಲ. ಏಕೆಂದರೆ ಪೂರ್ಣ ಪ್ರಮಾಣದ ಚೊಕ್ಕ ಸಾಕ್ಷ್ಯ ಚಿತ್ರ ಮಾಡಲು ಯಾರೂ ಮುಂದೆ ಬರಲಿಲ್ಲ. ಅಷ್ಟೇ ಅಲ್ಲದೆ ಹಲವಾರು ಕಾರಣಗಳಿಗಾಗಿ ಅದು ಟಿವಿ ಚಾನಲ್‌ಗಳಲ್ಲೂ ಪ್ರಸಾರವಾಗಲಿಲ್ಲ ಎನ್ನುತ್ತಾರೆ ಮೆನನ್.

ಗಲಭೆಗ್ರಸ್ತ ಸ್ಥಳಗಳಲ್ಲಿ ಜೀವದ ಹಂಗು ತೋರೆದು ಚಿತ್ರೀಕರಿಸಿದ್ದಕ್ಕೆ ಯಾವ ಪ್ರಯೋಜನವೂ ಆಗುವುದಿಲ್ಲ. ಅದಕ್ಕೆ ಕೆಲವೊಮ್ಮೆ ರಾಜ್ಯ ಸರ್ಕಾರದಿಂದ ಮತ್ತೆ ಕೆಲವೊಮ್ಮೆ ಮುಖ್ಯವಾಹಿನಿಯ ಮಾಧ್ಯಮಗಳು ಮಾರುಕಟ್ಟೆ ಶಕ್ತಿಗೆ ಹೆಚ್ಚು ಒತ್ತುನೀಡುವುದು ಕಾರಣವಾಗುತ್ತದೆ. ಮುಖ್ಯವಾಹಿನಿ ಚಾನಲ್‌ಗಳು ಪ್ರತ್ಯಕ್ಷವಾಗಿ ಚಿತ್ರೀಕರಿಸಿದ್ದಕ್ಕೂ ಇಂತದೇ ಗತಿ ಉಂಟಾಗುತ್ತದೆ ಎನ್ನುತ್ತಾರೆ. ವಿಜಯನ್.

ಆದರೆ ಇಂತಹ ಪ್ರತ್ಯಕ್ಷ ಚಿತ್ರೀಕರಣಗಳು ಗಲಭೆಗೆ ಕಾರಣರಾದವರನ್ನು ಬಂಧಿಸಲು ಸಹಾಯ ಮಾಡುತ್ತವೆಯೇ ಎಂದರೆ ಹೌದು ಎನ್ನುವ ವಿಜಯನ್, ಮುಂಬಯಿ ಗಲಭೆಯ ತನಿಖೆ ನಡೆಸಿದ ಶ್ರೀ ಕೃಷ್ಣ ಆಯೋಗದ ಸಾಕ್ಷ್ಯಾಧಾರಗಳಲ್ಲಿ ಚಾನಲ್ ಮತ್ತು ಖಾಸಗಿ ವ್ಯಕ್ತಿಗಳ ಚಿತ್ರೀಕರಣದ ತುಣುಕುಗಳು ಪ್ರಮುಖ ಪಾತ್ರವಹಿಸಿದ್ದವು ಎಂದು ಹೆಮ್ಮೆಯಿಂದ ಹೇಳುತ್ತಾರೆ.

ನಾನು ಮಾಡಿದ ಗುಜರಾತ್ ಹಿಂಸೆಯ ಚಿತ್ರೀಕರಣ ಯಾವುದೇ ವೇದಿಕೆಗೆ ಸಾಕ್ಷ್ಯಾಧಾರವಾಗಬಹುದು. ಯಾರೇ ಆಗಲಿ ಈ ವಿಷಯದಲ್ಲಿ ಒತ್ತಡಕ್ಕೆ ಮಣಿಯದೆ ರಾಜಕೀಯ ಸ್ಥಿರನಿಲುವನ್ನು ಹೊಂದಬೇಕು. ಅದಕ್ಕೆ ಸಂಬಂಧಿಸಿದ ಎಲ್ಲಾ ರೀತಿಯ ತೊಂದರೆಗಳನ್ನು ಅನುಭವಿಸಲು ಸಿದ್ಧನಿರಬೇಕು' ಎನ್ನುತ್ತಾರೆ.

'ರಾಮ್ ಕೆ ನಾಮ್' ಖ್ಯಾತಿಯ ಆನಂದ ಪಟವರ್ಧನ್ ರವರೂ ಸಹ ಈ ಘಟನೆಯ ಚಿತ್ರ ತಯಾರಿಸುತ್ತಿದ್ದಾರಂತೆ

ವಿಜ್ಞಾನಿಗಳ ತಳಮಳ

ವಿಜ್ಞಾನಿಗಳು ಪ್ರಯೋಗಾಲಯ ಗಳಿಗೆ ಸೀಮಿತ ಹೊರ ಜಗತ್ತಿನ ಪರಿವೇಯೇ ಅವರಿಗಿರುವುದಿಲ್ಲ ಎನ್ನುವುದು ಸಾಮಾನ್ಯ ನಂಬಿಕೆ. ಆದರೆ ಗುಜರಾತ್ ವಿದ್ಯಾಮಾನಗಳು ವಿಜ್ಞಾನಿಗಳಲ್ಲಿನ ಸಾಮಾಜಿಕ ಕಳಕಳಿಯನ್ನು, ಮಾನವೀಯ ಪ್ರಜ್ಞೆಯನ್ನು ಬಡಿದೆಬ್ಬಿಸಿವೆ. ಗುಜರಾತ್ ಹತ್ಯಾಕಾಂಡಗಳು ನಮ್ಮ ದೇಶದ ಪ್ರಜ್ಞಾವಂತ ವಿಜ್ಞಾನಿಗಳಲ್ಲಿ ಕಳವಳ ತಳಮಳದ ಅಲೆಯನ್ನು ಎಬ್ಬಿಸಿವೆ.

'ಗುಜರಾತಿನಲ್ಲಿನ ಇತ್ತೀಚಿನ ವಿದ್ಯಮಾನಗಳು ವಿಜ್ಞಾನ ಮತ್ತು ಮಾನವೀಯತೆಯ ಮೂಲ ತತ್ವಗಳ ಅಣಕವಾಗಿದೆ" ಹೀಗೆಂದು ಹೇಳಿದ್ದಾರೆ ದೇಶದ ನಾನಾ ಪ್ರಮುಖ ಸಂಶೋಧನೆ ಮತ್ತು ತರಬೇತಿ ಸಂಸ್ಥೆಗಳ ಸುಮಾರು 300 ವಿಜ್ಞಾನಿಗಳು.

ಧರ್ಮದ ಹೆಸರಿನಲ್ಲಿ ವಿದ್ವೇಷ ಹರಡುವುದನ್ನು ಹಾಗೂ ಗುಜರಾತ್ ಹತ್ಯಾಕಾಂಡದಂಥ ಪ್ರಕರಣ ಪುನರಾವರ್ತನೆಗೊಳ್ಳುವುದನ್ನು ತಡೆಯುವಂತೆ ಕ್ರಮಗಳನ್ನು ಕೈಗೊಳ್ಳಲು ಕೇಂದ್ರ ಮತ್ತು ರಾಜ್ಯ ಸರಕಾರಗಳಿಗೆ ಸೂಚಿಸಿ ಎಂದು ಈ ವಿಜ್ಞಾನಿಗಳು ರಾಷ್ಟ್ರಪತಿ ಕೆ.ಆರ್. ನಾರಾಯಣನ್‌ರನ್ನು ಒತ್ತಾಯಿಸಿದ್ದಾರೆ.

ಅವರು ಈ ಸಂಬಂಧ ರಾಷ್ಟ್ರಪತಿಯವರಿಗೆ ಮನವಿ ಪತ್ರ ಸಲ್ಲಿಸಿದ್ದಾರೆ. "ಜನರ ಜೀವ ಮತ್ತು ಸೊತ್ತುಗಳನ್ನು ರಕ್ಷಿಸುವ ಸಾಂವಿಧಾನಿಕ ಜವಾಬ್ದಾರಿ ಇರುವವರು ಆ ಕರ್ತವ್ಯ ನಿರ್ವಹಿಸದಿರುವ ಬಗ್ಗೆ ನಮಗೆ ನೋವುಂಟಾಗಿದೆ ಎಂದು ಈ ವಿಜ್ಞಾನಿಗಳು ಹೇಳಿದ್ದಾರೆ.

ಮನವಿ ಪತ್ರಕ್ಕೆ ಸಹಿ ಹಾಕಿರುವ ವಿಜ್ಞಾನಿಗಳು ಈ ಕೆಳಗಿನ ಸಂಸ್ಥೆಗಳಿಗೆ.ಸೇರಿದವರು :

. ಗಣಿತ ವಿಜ್ಞಾನಗಳ ಸಂಸ್ಥೆ, (ಚೆನ್ನೈ), ಭಾರತೀಯ ವಿಜ್ಞಾನ ಮಂದಿರ ಹಾಗೂ ರಾಮನ್ ಸಂಶೋಧನೆ ಸಂಸ್ಥೆ (ಬೆಂಗಳೂರು), ಭಾರತೀಯ ಕೃಷಿ ವಿಜ್ಞಾನ ಸಂಸ್ಥೆ, ಭಾರತೀಯ ಸಂಖ್ಯಾಶಾಸ್ತ್ರ ಸಂಸ್ಥೆ, ಸಹಾ ಅಭೌತಶಾಸ್ತ್ರ ಸಂಸ್ಥೆ ಹಾಗೂ ಎಸ್.ಎನ್.ಬೋಸ್ ಮೂಲ ವಿಜ್ಞಾನಗಳ ರಾಷ್ಟ್ರೀಯ ಕೇಂದ್ರ (ಕೋಲ್ಕತಾ), ಚೆನ್ನೈ, ಕಾನ್ಪುರ ಹಾಗೂ ಖರಗ್‌ಪುರಗಳ ಭಾರತೀಯ ತಂತ್ರಜ್ಞಾನ ಸಂಸ್ಥೆಗಳು (ಐ.ಟಿ.ಐ), ವಿಜ್ಞಾನ ತಂತ್ರಜ್ಞಾನ ಮತ್ತು ಅಭಿವೃದ್ಧಿ ಅಧ್ಯಯನಗಳ ರಾಷ್ಟ್ರೀಯ ಸಂಸ್ಥೆ (ನವದೆಹಲಿ) ಟಾಟಾ ಮೂಲಭೂತ ಸಂಶೋಧನೆ ಸಂಸ್ಥೆ (ಮುಂಬಯಿ), ಹರೀಶ್ ಚಂದ್ರ ಸಂಶೋಧನೆ ಸಂಸ್ಥೆ (ಅಲಹಾಬಾದ್) ಮತ್ತು ಭೌತಶಾಸ್ತ್ರ ಸಂಸ್ಥೆ (ಭುವನೇಶ್ವರ).

ಅನಿವಾಸಿ ವಿಜ್ಞಾನಿಗಳು

ಅನಿವಾಸಿ ಭಾರತೀಯ ವಿಜ್ಞಾನಿಗಳು ಕೂಡ ಮನವಿ ಪತ್ರಕ್ಕೆ ಸಹಿ ಹಾಕಿರುವುದು ವಿಶೇಷವಾಗಿದೆ.

ಈ ಅನಿವಾಸಿ ಭಾರತೀಯ ವಿಜ್ಞಾನಿಗಳು ಅಮೆರಿಕದ ಇಲಿನಾಯ್ಸ್ ವಿಶ್ವವಿದ್ಯಾಲಯ ಹಾಗೂ ಬ್ರಾಂಡಿಸ್ ವಿಶ್ವವಿದ್ಯಾಲಯ ಮತ್ತು ಆಸ್ಟ್ರೇಲಿಯನ್ ನ್ಯಾಷನಲ್ ಯೂನಿವರ್ಸಿಟಿ ಸೇರಿದವರಾಗಿದ್ದಾರೆ.

ದೇವರು-ಧರ್ಮದ ಹೆಸರಿನಲ್ಲಿ ಮಾನವೀಯತೆಯ ಮಾರಣ ಹೋಮ ಮಾಡುತ್ತಿರುವ ದುಷ್ಟ ಶಕ್ತಿಗಳ ವಿರುದ್ಧ ಸೆಟೆದು ನಿಂತಿರುವ ವಿಜ್ಞಾನಿಗಳು ಅಭಿನಂದನೆಗೆ ಅರ್ಹರು. ಸಮಾಜದ ಪ್ರಮುಖ ಬುದ್ದಿಜೀವಿ ವಿಭಾಗವಾದ ವಿಜ್ಞಾನಿಗಳ ಇಂಥ ಮಧ್ಯಪ್ರವೇಶ ಮಹತ್ವದ ಪರಿಣಾಮ ಬೀರುತ್ತದೆ ಎನ್ನುವುದರಲ್ಲಿ ಅನುಮಾನವಿಲ್ಲ.

(ಸಂಗ್ರಹ)

ಪ್ರಳಯ ಕಾಲದ ಲಯವಿಲ್ಲದ ಕವಿತೆ

ಬದುಕು ಬಹಳ ದುಬಾರಿ ಈಗ
ಸಾವು ಈಗ ಸೋವಿ, ಸೋವಿ.

ಸೀಮೆ ಎಣ್ಣೆ ದುಬಾರಿ, ಪೆಟ್ರೋಲು ಸೋವಿ
ಬೀಜಗೊಬ್ಬರ ದುಬಾರಿ, ಕಂಪ್ಯೂಟರ್ ಸೋವಿ
ರೈತರ ಸಬ್ಸಿಡಿ ಕಡಿತ, ಬಹುತೇಕ ರದ್ದು.
ಖಾಸಗಿ ಕಂಪನಿಗಳಿಗೆ ವಿನಾಯಿತಿ, ಬಹುತೇಕ ಪುಕ್ಕಟೆ
ಹಿಡಿ ಅನ್ನ ಕೊಡುತ್ತಿದ್ದ ಕಂಪನಿಗೆ ಬೀಗ
ವಿದೇಶಿ ದೊರೆಗಳ ಪಾದಕ್ಕೆ ರತ್ನಗಂಬಳಿ ಸ್ವಾಗತ.
ಅಡಿಯಿಂದ ಮುಡಿವರೆಗೆ ಬಾತುಕೊಂಡು
ಕಣ್ಣು ಮುಚ್ಚಿ ಆಕಾಶಕ್ಕೆ ಬಾಯ್ತೆರೆವ ಪ್ರಧಾನಿ
ಬೊಗಳುತ್ತಾನೆ... ಇದು ದಿಟ್ಟ ಬಜೆಟ್
ಬಡವರು ಹಸಿವಿನಿಂದ
ಸಾಯಬೇಕೆಂದು
ಶಾಸನ ಬರೆವ ಹಣಕಾಸು
ಮಂತ್ರಿ
ಪಾರ್ಲಿಮೆಂಟಿನಲ್ಲಿ ಹಾಡೂ
ಹೇಳುತ್ತಾನೆ
'ಕಭೀ ಖುಷಿ ,
ಕಭೀ ಗಮ್.'



ಪಟಾಕಿಯ ಸರ ಸಿಡಿದಂತೆ, ದೇಶದ ತುಂಬಾ
ತಲೆಬುರುಡೆಗಳು ಸಿಡಿಯುವ ಹೊತ್ತು
ಧರ್ಮದ ಹೆಸರಿನಲಿ ಭೂಗೋಳವೇ
ಸ್ಮಶಾನವಾಗುತ್ತಿರುವ ಹೊತ್ತು
ಸಂಸ್ಕೃತಿಯ ಹೆಸರಿನಲ್ಲಿ
ಸಮುದ್ರವನ್ನೂ ನಾಚಿಸುವಷ್ಟು ನೆತ್ತರು
ಹರಿಸುತ್ತಿರುವ ಹೊತ್ತು
ಗಾಂಧಿಯನ್ನು ಕೊಂದವರೇ ಗದ್ದುಗೆ ಮೇಲೆ
ರಾರಾಜಿಸುತ್ತಿರುವ ಹೊತ್ತು.



ಗೋಡ್ಸೆ ಸಂತತಿ ಬಟ್ಟಂಬಯಲಲ್ಲಿ
ಕವಾಯತು ನಡೆಸುತ್ತಿರುವ ಹೊತ್ತು
ಒಸಾಮನೆಂಬ ಹೇಸರಗತ್ತೆಯ ಲದ್ದಿಗಳೆಲ್ಲ
ಕೋವಿಗಳಹಿಡಿದು ಕುಣಿಯುತ್ತಿರುವ ಹೊತ್ತು
ನನ್ನ ಕವಿತೆಯಲ್ಲಿ ನಿಗೂಢಾರ್ಥಗಳಿಲ್ಲ
ಸತ್ಯದ ಮಾರಿಮುಚ್ಚಿಡುವ ಸಂಕೇತಗಳಿಲ್ಲ
ಕೊಲೆಗಡುಕರ ಪರಿವಾರ
'ಧರ್ಮ'ದ ಭಾಷೆ ಬಳಸುವ ಹೊತ್ತು
ನನ್ನ ಕವಿತೆಯಲ್ಲಿ ದರ್ಶನದ ಶೋಧದ ಅಪರಾಧವಿಲ್ಲ.
ಧರೆಹತ್ತಿ ಉರಿವಾಗ ಸೌಂದರ್ಯ ಮೀಮಾಂಸೆಯ ಪಾಪವಿಲ್ಲ.

ಅಪಘಾನಿಸ್ತಾನ, ಪಾಕಿಸ್ತಾನಗಳೆಲ್ಲವನ್ನೂ
ಖಬರಸ್ತಾನ ಮಾಡಿ
ಕಾಶ್ಮೀರದ ಹೂದೋಟದಲಿ ನುಗ್ಗಿದ ಕತ್ತೆ ಕಿರುಬಗಳ
ಅರಚಾಟಕ್ಕೆ ಧರ್ಮಯುದ್ಧದ ಹೆಸರು
ಲಕ್ಷನರಬಲಿಯ ಹೆಣಗಳಿಗೆ ಕಟ್ಟುವ
ದೊಡ್ಡಗೋರಿಗೆ ಮಂದಿರ ಎಂಬ ಹೆಸರು.

ಸಿಡಿವ ಪೆಟ್ರೋಲ್ ಬಾಂಬಿನಿಂದ ಪಾರುಮಾಡಬೇಕು.
ನಮ್ಮ ಕರುಳ ಕಂದನ ನಗೆಯನ್ನು
ನೆರಮನೆಗೆ
ಬೆಂಕಿ ಬಿದ್ದಾಗ ಗಳ ಹಿರಿಯದೆ
ತುಂಬಿದ ಕೊಡ ಒಯ್ಯಬೇಕು ಈ ಹೊತ್ತು
ನೆರೆ ಎಂಬುದಿಲ್ಲ, ಹೊರೆ ಎಂಬುದಿಲ್ಲ, ಪರ ಎಂಬುದಿಲ್ಲ
ದುಡಿದುಣ್ಣುವ ಜನರಿಗೆ ಹಿಂದು ಎಂಬುದಿಲ್ಲ
ಮುಂದು ಎಂಬುದಿಲ್ಲ, ಆದರವರು ಉಳ್ಳವರು
ನರ ಕತ್ತರಿಸುತ್ತಿದ್ದಾರೆ ಇಲ್ಲದವರ
ಶೂದ್ರ ಶೂದ್ರರ ನಡುವೆ ಜಗಳವಿಕ್ಕಿ
ಅಟ್ಟಹಾಸಗೈಯುತ್ತಿವೆ ಪಲ್ಲಕ್ಕಿ-ಯಜ್ಞಕುಂಡಗಳು.

ಬಲತ್ಕಾರದ ಮೈಥುನದಂತಿರುವ
ಸಂಪ್ರದಾಯ, ಪರಂಪರೆಗಳು.
ಸ್ವಚ್ಛಂದ ಸುರತಕ್ಕೆ ಸೃಷ್ಟಿಗೊಂಡ
ಪವಿತ್ರ ಸಂಸ್ಕೃತಿಯ ಭ್ರಮೆಗಳು
ಅಮೇರಿಕಾ, ಬ್ರಿಟನ್‌ಗಳ ಬಾಲಬಡುಕ
ಗುಲಾಮಿ ಸರಕಾರಗಳು... ಎಲ್ಲವೂ ಸುಟ್ಟು ಹೋಗಲಿ.
ಈ ಜನ ಕಂಟಕ ಪ್ರಭುತ್ವಗಳು
ದುಡಿದುಣ್ಣುವ ಜನರ ಕಾಲಿನ ಮೆಟ್ಟಾಗಲಿ.

ಬಿ.ಪೀರ್ ಬಾಷ, ಹೂವಿನಹಡಗಲಿ
(ಕವಿಗೋಷ್ಠಿಯಲ್ಲಿ ಓದಿದ ದೀರ್ಘಕವನದಿಂದ ಆಯ್ದ ಕೆಲ ಭಾಗಗಳು ಇಲ್ಲಿವೆ)

'ಈ ಜನ ಕಂಟಕ ಪ್ರಭುತ್ವಗಳು - ದುಡಿದುಣ್ಣುವ ಜನರ ಕಾಲಿನ ಮೆಟ್ಟಾಗಲಿ.'

PRB DECR 319-79/79 AIKYARANGA WEEKLY Reg. No. 17015/64 CPM(G)/KA/BGS-119/2002
ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಎಸ್.ಸೂರ್ಯನಾರಾಯಣ ರಾವ್
ಸಂಪಾದಕರು: ಎಸ್.ವೈ.ಗುರುಶಾಂತ್ ಸಂಪಾದಕೀಯ ಕಛೇರಿ: ನಂ.12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462,